ಪುಸ್ತಕ ಪ್ರಪಂಚ

ಸಂಪುಟ ೩೮ ೧೯೮೩ ಸೆಪ್ಟಂಬರ್ ಸಂಚಿಕೆ ೨



ವಿಷಯ ಸೂಚಿ

ಮುಖಚಿತ್ರ : ಮಹಾದೇವಿ ವರ್ಮಾ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೮ ಸೆಪ್ಟೆಂಬರ್ ೧೯೮೩ ಸಂಚಿಕೆ ೨

ಜ್ಞಾನಪೀಠ ಪ್ರಶಸ್ತಿ ವಿಜೇತೆ ಮಹಾದೇವಿ ವರ್ಮಾ

ಹಿಂದೀ ಸಾಹಿತ್ಯದಲ್ಲಿ 'ಆಧುನಿಕ ಮೀರಾ' ಎಂದು ಖ್ಯಾತಿವೆತ್ತ ಮಹಾದೇವಿ ವರ್ಮರು ೧೯೮೨ರ ಸಾಲಿನ ಜ್ಞಾನಪೀಠ ಪ್ರಶಸ್ತಿಯ ಮನ್ನಣೆಗೆ ಪಾತ್ರರಾಗಿದ್ದಾರೆ. ಭರತಖಂಡದ ಈ ಸರ್ವೋಚ್ಚ ಪ್ರಶಸ್ತಿಗೆ ಆಯ್ಕೆಯಾದವರಲ್ಲಿ ಮಹಾದೇವಿ ವರ್ಮರು ಹದಿನೆಂಟನೆಯವರು. ಜ್ಞಾನಪೀಠ ಪ್ರಶಸ್ತಿ ವಿಜೇತೆಯರ ಪೈಕಿ ಮೂರನೆಯವರು. ಇವರ 'ಯಾಮಾ' ಎಂಬ ಕೃತಿಗೆ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

೧೯೦೭ರಲ್ಲಿ ಜನಿಸಿದ ಮಹಾದೇವಿಯವರಿಗೆ ಮನೆಯೇ ಮೊದಲ ಪಾಠಶಾಲೆ. ತಂದೆ ಬಾಬೂ ಗೋವಿಂದ ಪ್ರಸಾದ ವರ್ಮ ವಕೀಲರು. ತಾಯಿ ಹೇಮರಾನೀ ದೇವಿ ವಿದುಷಿಯೆಂದು ಖ್ಯಾತಿವೆತ್ತವರು. ಶಾಲಾ ಶಿಕ್ಷಣದ ಜೊತೆಯಲ್ಲಿ ಸಂಗೀತ ಮತ್ತು ಚಿತ್ರಕಲೆಯನ್ನು ಮಹಾದೇವಿ ಮನೆಯಲ್ಲೇ ಅಭ್ಯಸಿಸಿದರು. ಸಂಗೀತ, ಕಾವ್ಯ ಮತ್ತು ಚಿತ್ರಕಲೆಗಳ ವಿಕಾಸಕ್ಕೆ ಬಾಲ್ಯ ಜೀವನದಲ್ಲೇ ಪೂರ್ವಭಾವೀ ಸಿದ್ಧತೆ ನಡೆಯಿತು. ಅಂತತೋ ಗತ್ವಾ ಆ ಮೂರು ಮಹಾನ್ ಕಲೆಗಳ ತ್ರಿವೇಣೀ ಸಂಗಮಕ್ಕೆ ಅದು ನಾಂದಿಯಾಯಿತು. ಹನ್ನೊಂದನೆಯ ವಯಸ್ಸಿನಲ್ಲಿ ಮಹಾದೇವಿ ವಿವಾಹಿತರಾದರೂ ವೈವಾಹಿಕ ಜೀವನವನ್ನು ಬಹುಕಾಲ ನಡೆಸಲಿಲ್ಲ. ಐಹಿಕ ಜೀವನದಿಂದ ವಿರಕ್ತರಾದ ಮಹಾದೇವಿ ಬೌದ್ಧ-ಸನ್ಯಾಸಿನಿಯಾಗಲು ಬಯಸಿದರು. ಆದರೆ ತಂದೆತಾಯಿಗಳಿಂದ ಅದಕ್ಕೆ ಅನುಮತಿ ಸಿಗಲಿಲ್ಲ. ಅವರನ್ನು ಪ್ರತಿಭಟಿಸದೇ, ಮಹಾದೇವಿ ಪ್ರಯಾಗದಲ್ಲಿ ತಮ್ಮ ಶಿಕ್ಷಣ ಮುಂದುವರಿಸಿದರು. ಅಂತೂ ಈ ಕವಯಿತ್ರಿಯ ಬಾಳಪಯಣ ಸ್ವತಃ ಒಂದು ಕಾವ್ಯ.

ಹನ್ನೆರಡನೆಯ ವಯಸ್ಸಿನಲ್ಲಿ ಇವರು ವಾಙ್ಮಯ-ತಪಸ್ಸು ಆರಂಭಿಸಿದರು. ಈಗ ೭೬ ವರ್ಷದವರು. ಪ್ರಯಾಗದಲ್ಲಿ ೧೯೩೩ರಲ್ಲಿ ಸಂಸ್ಕೃತದಲ್ಲಿ ಎಂ. ಎ.

ಪದವಿ ಪಡೆದ ಬಳಿಕ ಅಲ್ಲಿಯ ಮಹಿಳಾ ವಿದ್ಯಾಪೀಠದ ಪ್ರಿನ್ಸಿಪಾಲರಾಗಿದ್ದು ಮುಂದೆ ಅಲ್ಲಿಯೇ ಕುಲಪತಿಯೂ ಆದರು. ಇವರಿಗೆ ೧೯೩೪ರಲ್ಲಿ 'ಸೇಕ್ಸರಿಯಾ ಪುರಸ್ಕಾರ' ಮತ್ತು ೧೯೪೪ರಲ್ಲಿ 'ಮಂಗಲಾ ಪ್ರಸಾದ್ ಪಾರಿತೋಷಿಕ' ಲಭಿಸಿದುವು. ಕೇಂದ್ರ ಸರ್ಕಾರ ೧೯೫೬ರಲ್ಲಿ 'ಪದ್ಮಭೂಷಣ' ಪ್ರಶಸ್ತಿಯನು ಉಜ್ಜಯಿನಿಯ ವಿಕ್ರಮ ವಿಶ್ವವಿದ್ಯಾಲಯ ೧೯೭೭ರಲ್ಲಿ 'ಡೀ. ಲಿಟ್' ಪದವಿಯನ್ನು ನೀಡಿದುವು.

ಮಹಾದೇವಿ ವರ್ಮ ಪ್ರಾರಂಭದಲ್ಲಿ ಬ್ರಜಭಾಷೆಯಲ್ಲಿ ಕವನ ರಚಿಸುತ್ತಿದ್ದರು. ಅನಂತರ ಖಡೀಬೋಲಿಯಲ್ಲಿ ಸಾಹಿತ್ಯರಚನೆ ಕೈಗೊಂಡರು. ಅವರ ಕವನಗಳಲ್ಲಿ ಚಿತ್ರಮಯತೆ ಕಾಣುತ್ತೇವೆ. ಇದುವರೆಗೆ ೨೦ ಕೃತಿಗಳನ್ನು ನೀಡಿದ್ದಾರೆ. ಇವರು ಕಾವ್ಯರಚನೆ ಮಾಡಿದ್ದು ಪ್ರಧಾನವಾಗಿ ೧೯೨೪ರಿಂದ ೧೯೪೨ರ ತನಕ. ಉಲ್ಲೇಖಾರ್ಹ ಕೃತಿಗಳಿವು: 'ನೀಹಾರ್' (೧೯೩೦), 'ರಶ್ಮಿ' (೧೯೩೨), 'ನೀರಜಾ' (೧೯೩೫), 'ಸಾಂಧ್ಯಗೀತ' (೧೯೩೬), 'ದೀಪಶಿಖಾ' (೧೯೪೨) ಮತ್ತು 'ಯಾಮಾ' (೧೯೪೦). ಇವಲ್ಲದೇ ಇವರ ಅನುವಾದಿತ ಕೃತಿಗಳು 'ಸಪ್ತಪರ್ಣಾ' (೧೯೬೦)ದಲ್ಲಿ ಸಂಗ್ರಹಿಸಲ್ಪಟ್ಟಿವೆ.

ಗದ್ಯ ಕ್ಷೇತ್ರದಲ್ಲಿಯೂ ಇವರು ಕೈಯ್ಯಾಡಿಸಿದ್ದಾರೆ. 'ಸಂಸ್ಮರಣ' ಮತ್ತು 'ರೇಖಾಚಿತ್ರ'ದಲ್ಲಿ ಇಂಥ ಸವ್ಯಸಾಚಿ ಮತ್ತೊಬ್ಬರಿಲ್ಲ. 'ಸ್ಮೃತಿ ಕೀ ರೇಖಾಯೆ' 'ಅತೀತ್ ಕೇ ಚಲಚಿತ್ರ್' ಮತ್ತು 'ಶೃಂಖಲಾ ಕೀ ಕಡಿಯಾ' ಈ ಮೂರು ಹೊತ್ತಗೆಗಳು ಇವರ ಗದ್ಯದ ಯಶಸ್ಸನ್ನು ಸಾರುತ್ತಿವೆ. ದೇವೇಂದ್ರ ಸತ್ಯಾರ್ಥಿಯವರ ಪ್ರಕಾರ ಮಹಾದೇವಿಯವರ ಪದ್ಯಕ್ಕಿಂತಲೂ ಗದ್ಯವನ್ನು ಹೆಚ್ಚು ಪ್ರಭಾವಶಾಲಿ ಎಂದಿದೆ.

ಮಹಾದೇವಿಯವರನ್ನು 'ಆಧುನಿಕ ಮೀರಾ' ಎಂದು ಹಲವರು ಬಣ್ಣಿಸುತ್ತಾರೆ. ಹಿಂದೀ ಸಾಹಿತ್ಯದ ಭಕ್ತಿಕಾಲದಲ್ಲಿ ಮೀರಾಬಾಯಿಗೆ ಇದ್ದ ಸ್ಥಾನ ಆಧುನಿಕ ಸಾಹಿತ್ಯದಲ್ಲಿ ಮಹಾದೇವಿಯವರಿಗೆ ಇದೆ ಎಂಬುದು ಇಲ್ಲಿಯ ಇಂಗಿತ.

'ಯಾಮಾ' ಎಂಬ ಕೃತಿಯಲ್ಲಿ ಕವಯಿತ್ರಿಯ ಬಾಳಪಯಣ ಮನಂಬುಗುವಂತೆ ಚಿತ್ರಿತವಾಗಿದೆ. 'ಯಾಮಾ' ನಾಲ್ಕು ಯಾಮಗಳಲ್ಲಿ ವಿಂಗಡಿಸಲ್ಪಟ್ಟಿದೆ. ಪ್ರಥಮ ಯಾಮಕ್ಕೆ 'ನೀಹಾರ್' ಎಂದೂ ದ್ವಿತೀಯ ಯಾಮಕ್ಕೆ 'ರಶ್ಮಿ' ಯೆಂದೂ ತೃತೀಯ ಯಾಮಕ್ಕೆ 'ನೀರಜಾ' ಎಂದೂ ಮತ್ತು ಚತುರ್ಥ ಯಾಮಕ್ಕೆ 'ಸಾಂಧ್ಯಗೀತ'ವೆಂದೂ ಕವಯಿತ್ರಿ ಹೆಸರಿಸಿದ್ದಾರೆ. 'ನೀಹಾರ್', 'ರಶ್ಮಿ', 'ನೀರಜಾ', ಮತ್ತು 'ಸಾಂಧ್ಯಗೀತ್' ಈ ನಾಲ್ಕು ಯಾಮಗಳನ್ನು

ಮಹಾದೇವಿ ವರ್ಮರ ಜೀವನಯಾತ್ರೆಯ ಮೈಲುಗಲ್ಲುಗಳೆಂದು ಕರೆಯ ಬಹುದು.

'ನೀಹಾರ್'ದಲ್ಲಿ ಸಂಗ್ರಹಿಸಲ್ಪಟ್ಟ ಕವನಗಳ ರಚನಾಕಾಲ ೧೯೨೪–೨೮; 'ರಶ್ಮಿ' ೧೯೨೮–೩೧; 'ನೀರಜಾ' ೧೯೩೧–೩೪; 'ಸಾಂಧ್ಯಗೀತ' ೧೯೩೪–೩೬. 'ಯಾಮಾ'ದಲ್ಲಿ ಸಂಕಲಿತವಾದ ಗೀತೆಗಳು ಕವಯಿತ್ರಿಯ ಆತ್ಮನಿವೇದನೆಗೆ ನಿದರ್ಶನ. ಮಹಾದೇವಿಯವರ ಕಾವ್ಯದಲ್ಲಿ 'ಸ್ವಪ್ನಿಲ ಮಾನಸಿಕ ವಾತಾವರಣ' ಮತ್ತು 'ವ್ಯಥೆಯ ಸಂಮೋಹನೆ' ಪಸರಿಸಿವೆಯೆಂದು 'ಶಚೀರಾನೀ ಗುರ್ಟೂ' ಹೇಳುತ್ತಾರೆ. ಅಂತೂ ಮಹಾದೇವಿಯವರು 'ಭಾವಪ್ರಧಾನ ಕವಯಿತ್ರಿ' ಎನ್ನಿಸಿಕೊಳ್ಳುತ್ತಾರೆ. 'ಸಾಂಧ್ಯಗೀತ'ದಲ್ಲಿ ಮಹಾದೇವಿಯವರ ಕಾರಯಿತ್ರೀ ಪ್ರತಿಭೆ ಗರಿಗೆದರಿ ನರ್ತಿಸುವುದನ್ನು ಕಾಣುತ್ತೇನೆ. 'ಸಾಂಧ್ಯಗೀತ'ದ ಲಾವಣ್ಯ ಮತ್ತು ಲಾಲಿತ್ಯ ಆಧುನಿಕ ಹಿಂದೀ ಕಾವ್ಯದಲ್ಲಿ ಶ್ರೇಷ್ಠಸ್ಥಾನ ಪಡೆದಿವೆ.

ಮಹಾದೇವಿ ವರ್ಮರಿಗೆ ಅತ್ಯಂತ ಪ್ರಿಯವಸ್ತು 'ವೇದನೆ'. ಅವರ ಕಾವ್ಯದ ಮೂಲದ್ರವ್ಯವಿದು. ವೇದನೆ ಪ್ರಿಯವಾದಾಗ ಕಾವ್ಯದ ರೂಪ ತಾಳುತ್ತದೆ. 'ಪ್ರಾಪ್ತಿ' ಮತ್ತು 'ತೃಪ್ತಿ'ಯಿಂದ ಕವಯಿತ್ರಿ ದೂರವಾಗಬಯಸುತ್ತಾರೆ. ಅವರ ದೃಷ್ಟಿಯಲ್ಲಿ 'ಪ್ರಾಪ್ತಿ'ಯ ನಂತರ ವಿರಹ ಮಲಿನವಾಗುತ್ತದೆ. 'ತೃಪ್ತಿ' ಲಭಿಸಿದರೆ ಪ್ರಯತ್ನ ಕುಂಟಾಗುತ್ತದೆ. ಮಹಾದೇವಿಯವರ ಗೀತೆಗಳು ಕೇವಲ ತಲಸ್ಪರ್ಶಿಯಲ್ಲ, ಹೃದಯವನ್ನು ಮುಟ್ಟುತ್ತವೆ. ಅವು ವನ-ಕುಸುಮಗಳಂತೆ ಅಕೃತ್ರಿಮವಾಗಿವೆ.

ಆಧುನಿಕ ಹಿಂದೀ ಕಾವ್ಯದಲ್ಲಿ 'ಛಾಯಾವಾದ' ಉಲ್ಲೇಖನೀಯವಾದದ್ದು. ಭಾವುಕತೆ ಮತ್ತು ಚಿಂತನೆಯ ಸಮಾನ ಸಮ್ಮಿಶ್ರಣದಿಂದ ಮಹಾದೇವಿಯವರ ಗೀತೆಗಳು ಛಾಯಾವಾದದ ಸಂಪೂರ್ಣ ವೈಭವದ ಜ್ವಲಂತ ನಿದರ್ಶನಗಳಾಗಿವೆ. ಇವರ ವ್ಯಕ್ತಿತ್ವ ಕೃತಿಗಳನ್ನು ಮೀರಿ ಬೆಳೆದು ನಿಂತಿದೆ. ಇವರು ತಮ್ಮ ಪಾಂಡಿತ್ಯವನ್ನು ಎಂದೂ ಇನ್ನೊಬ್ಬರ ಮೇಲೆ ಹೇರಲೊಲ್ಲರು. ಕರುಣೆ ಇವರ ಕವನಗಳ ಮೂಲ ದ್ರವ್ಯ. ಬೌದ್ಧ ದರ್ಶನದಿಂದ ಪ್ರಭಾವಿತರಾದ ಈ ಕವಯಿತ್ರಿ ಕರುಣಾಮಯಿಯೆಂದು ಹೆಸರುವಾಸಿಯಾಗಿದ್ದಾರೆ. ವೇದನೆ, ವ್ಯಥೆ ಮತ್ತು ಕರುಣೆ ಮಹಾದೇವಿಯವರ ಬಾಳ-ಸಂಗಾತಿಗಳು. ಮನುಷ್ಯರು ಎಳೆಯುವ ರಿಕ್ಷಾವನ್ನು ಎಂದೆಂದೂ ಹತ್ತದ ಮಹಾದೇವಿಯವರು ಅಸದೃಶವಾದ ಕರುಣೆಯನ್ನು ಮೈಗೂಡಿಸಿಕೊಂಡಿದ್ದಾರೆ. ನೀರು ತುಂಬಿದ ಮೋಡ (ನೀರಭರೀ ಬದಲೀ) ಈ ಕವಯಿತ್ರಿಗೆ ಪ್ರಿಯವಾದ ಆದರ್ಶ, ಮೋಡ ಮಳೆ ಸುರಿಸಿ ಎಲ್ಲರ ತೃಷೆ

ಯನ್ನು ಇಂಗಿಸುವಂತೆ, ಮಹಾದೇವಿಯವರು ದೀನರನ್ನು ಬರಿಗೈಯಲ್ಲಿ ಹಿಂದಿರುಗಿಸುವದಿಲ್ಲ. ಸಾಹಿತಿಗಳ ಸ್ಥಿತಿಯನ್ನು ಸುಧಾರಿಸಲು ಸ್ಥಾಪಿಸಲ್ಪಟ್ಟ 'ಸಾಹಿತ್ಯಕಾರ ಸಂಸದ್' ಎಂಬ ಸಂಸ್ಥೆ ಮಹಾದೇವಿ ವರ್ಮರ ಜೀವನದ ಮಹತ್ಸಾಧನೆ. ನಿಕೋಲಿಸ್‌ರೋರಿಕ್‌ರಂತಹ ವಿಶ್ವವಿಖ್ಯಾತ ಕಲೆಗಾರರು ಮಹಾದೇವಿಯವರ ಚಿತ್ರಗಳನ್ನು ಶ್ಲಾಘಿಸಿದ್ದಾರೆ. 'ದರ್ಪಣ–ವಿಮುಖತೆ' ಮಹಾದೇವಿವರ್ಮರ ಸರಳತೆ ಮತ್ತು ಅನಹಂಕಾರದ ಪ್ರತೀಕ. ಗಾಂಧೀಜಿಯವರಂತೆ ಕನ್ನಡಿಯನ್ನುಪಯೋಗಿಸದ ಈ ಕವಯಿತ್ರಿಯ ವ್ಯಕ್ತಿತ್ವ ಇವರ ಕೃತಿಗಳನ್ನೇ ಮೀರಿ ನಿಂತಿದ್ದು ಗಮನಾರ್ಹ.

ಆಧುನಿಕ ಹಿಂದಿ ಕಾವ್ಯದಲ್ಲಿ ರಹಸ್ಯವಾದದ ಏಕಮಾತ್ರ ಕವಯಿತ್ರಿಯೆಂದರೆ ಮಹಾದೇವಿವರ್ಮ. ತಮ್ಮ ಅನಿಸಿಕೆಗಳನ್ನು ನೇರವಾಗಿ ಕಾವ್ಯರೂಪದಲ್ಲಿ ಬರೆಯುವ ಈ ಕವಯತ್ರಿಯ ಭಾಷೆ ಅಕೃತ್ರಿಮ, ಮಧುರ ಮತ್ತು ಕೋಮಲ. 'ಶಬ್ದಸಂಯೋಜನೆ'ಯಲ್ಲಿ 'ಒಂದಕ್ಕರವಿಟ್ಟಳು ಪದಗ್ಗಳಿಕೆ'ಯನ್ನು ಓದುಗರು ಕಂಡುಕೊಳ್ಳುತ್ತಾರೆ.

ವಿ. ಡಿ. ಹೆಗಡೆ



ಕಬ್ಬಿಣವನ್ನು ಕಾಸಿದಾಗಲೇ ಬಡಿಯಬೇಕು. ಅದಕ್ಕೆ ಮೆರಗುಕೊಡಲು ಸಾವಕಾಶವಾದರೂ ಅಡ್ಡಿಯಿಲ್ಲ.

ಅವಕಾಶಗಳೇ ಸಿಗಲಿಲ್ಲವೆಂದು ಯಾವ ಮಹಾಪುರುಷನೂ ಎಂದೂ ದೂರುವುದಿಲ್ಲ.

—ಎಮರ್ಸನ್

ವಿನ್ಯಾಸ ವಿಜ್ಞಾನಿ ಫುಲರ್

'ಹಿಂದೆ ಯಾವ ಕಾಲಕ್ಕೂ ಇಲ್ಲದ ಜೀವನ ಮಟ್ಟವನ್ನು ಪ್ರತಿಯೊಬ್ಬ ವ್ಯಕ್ತಿಗೂ ಒದಗಿಸುವ ಸಾಮರ್ಥ್ಯ ಮನುಕುಲದ ಚರಿತ್ರೆಯಲ್ಲಿ ಮೊತ್ತಮೊದಲ ಬಾರಿಗೆ ಬಂದಿದೆ'.

'ಪರಿಸರದ ನಿಯಂತ್ರಣವೇ ಬಾಳಿನ ಸಾರ. ನಮ್ಮ ವ್ಯೋಮನೌಕೆಯಲ್ಲಿ ಪಯಣಿಸುತ್ತಿರುವ ೪೦೦ ಕೋಟಿ ಜನರನ್ನು ಆರ್ಥಿಕವಾಗಿಯೂ ಆರೋಗ್ಯಕರವಾಗಿಯೂ ವಾಸಿಸಬಿಡಬೇಕು. ಅದನ್ನು ಕ್ರಿ.ಶ. ೨೦೦೦ದೊಳಗೆ ಸಾಧಿಸಬೇಕು.'

'ಕಡಮೆ ದ್ರವ್ಯದಿಂದ ಹೆಚ್ಚಿನ ಕಾರ್ಯಸಾಮರ್ಥ್ಯ. ಅತ್ಯಲ್ಪದಿಂದ ಮಹತ್ತು. ಆಗ ಪ್ರತಿಯೊಬ್ಬನಿಗೂ ಅವಶ್ಯ ಸಂಪನ್ಮೂಲ ಲಭ್ಯ; ಸ್ವಾರ್ಥ ಅನಗತ್ಯ; ಯುದ್ಧ ಅನುಪಯುಕ್ತ.'

ಈ ದೊಡ್ಡ ಮಾತುಗಳನ್ನು ಹೇಳುತ್ತ, ದೊಡ್ಡದನ್ನು ಯೋಚಿಸುತ್ತ ದೊಡ್ಡದನ್ನು ವಿನ್ಯಾಸ ಮಾಡುತ್ತ ಇದ್ದ ವಿಲಕ್ಷಣ ವ್ಯಕ್ತಿ ರಿಚರ್ಡ್ ಬಕ್‌ಮಿನಿಸ್ಟರ್ ಫುಲರ್ (ಜನನ: ಜುಲೈ ೧೨, ೧೮೯೫; ಮರಣ ಜುಲೈ ೩, ೧೯೮೩) ಎಂಥ ವ್ಯಕ್ತಿತ್ವ ಅವನದು? ಅವನ ಮಾತನ್ನೇ ನಂಬುವುದಾದರೆ 'ಹಲವು'—ಎಂಜಿನಿಯರ್, ಉಪಜ್ಞೆಗಾರ, ಗಣಿತಜ್ಞ, ವಾಸ್ತುಶಿಲ್ಪಿ, ನಕ್ಷೆಗಾರ, ತತ್ವಜ್ಞಾನಿ, ಕವಿ, ವಿಶ್ವವಿಜ್ಞಾನಿ, ಸಮಗ್ರ ವಿನ್ಯಾಸಗಾರ ಮತ್ತು ನಾಟ್ಯ ನಿರ್ದೇಶಕ.

ಅಮೆರಿಕದ ಮೆಸಾಚುಸೆಟ್ಸ್‌ನಲ್ಲಿ ಹುಟ್ಟಿದ ಫುಲರ್ ಗೌರವಸ್ಥ ಕುಟುಂಬದವನು. ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗ ಮಾತ್ರ ಏನೇನೋ ಹಗರಣಗಳಿಗಾಗಿ ಹೊರದೂಡಲ್ಪಟ್ಟ. ಮೊದಲ ಮಹಾಯುದ್ಧದಲ್ಲಿ ಅಮೆರಿಕದ ನೌಕಾ ಪಡೆಯಲ್ಲಿ ಸೇವೆ ಸಲ್ಲಿಸಿದ. ಅನಂತರ ಅನ್ನಾಪೊಲಿಸ್ ನೌಕಾ ಅಕಾಡೆಮಿಯಲ್ಲಿ ವಿಜ್ಞಾನದ ಅಧ್ಯಯನವನ್ನು ಕೈಗೊಂಡ. ಪುಟ್ಟ ಮಗಳ ಸಾವಿನಿಂದ ವರ್ಷಾನುಗಟ್ಟಲೆ ವಿಷಣ್ಣನಾಗಿದ್ದ ಫುಲರ್ 'ಬುದ್ಧ'ನಾದದ್ದು ೧೯೨೭ರ ಒಂದು ರಾತ್ರಿ. ಅಂದು ಮಿಚಿಗನ್ ಸರೋವರತೀರದಲ್ಲಿ ನಿಂತುಕೊಂಡಿದ್ದಾಗ ಅವನಿಗೆ ವಿವೇಕ ಉದಯಿಸಿತು. "ನಿನಗೆ ನಿನ್ನನ್ನು ನಾಶ ಮಾಡುವ ಹಕ್ಕಿಲ್ಲ. ನೀನು ವಿಶ್ವಕ್ಕೆ ಸೇರಿದವನು" ಎಂದು ಹೇಳಿಕೊಂಡ. ವಿಶ್ವದಲ್ಲಿ ಕಾರ್ಯಶೀಲವಾಗಿರುವ ತತ್ವಗಳನ್ನು ಕಂಡುಹಿಡಿದು ತನ್ನ ಜನರಿಗೆ ಒಪ್ಪಿಸಬೇಕೆಂದು ತನ್ನಲ್ಲೇ ಒಂದು ಒಪ್ಪಂದಕ್ಕೆ ಬಂದ. ಪ್ರಾಯಶಃ ಅಂದಿನಿಂದಲೇ ಅವನ ಸೃಜನಶೀಲ ಜೀವನದ ಆರಂಭ. ಕಟ್ಟಡ ಕಟ್ಟಣೆ ಕಂಪೆನಿ ಸ್ಥಾಪಿಸಿ ಕೆಲಸ ಮಾಡತೊಡಗಿದ. ಫುಲರ್ ಮುಂದೆ ಪ್ರವೇಶಿಸಿದ ಕ್ಷೇತ್ರಗಳು ಒಂದೆರಡಲ್ಲ.

ಯಾವುದೇ ಕೆಲಸಕ್ಕೆ ಹೂಡುವ ಒಟ್ಟು ಶಕ್ತಿ ಮತ್ತು ದ್ರವ್ಯಗಳಿಂದ ಅತ್ಯಧಿಕ ನಿವ್ವಳ ಫಲಿತಾಂಶ ಪಡೆಯುವುದು ಫುಲರ್‌ನ ಗುರಿಯಾಯಿತು. ಇಂಥ ಪರಿಸ್ಥಿತಿಯನ್ನು ಅವನು ಡೈಮೇಕ್ಸಿಯಾನ್ (Dymaxion) ಎಂದು ಕರೆದ. ಅವನು ವಿನ್ಯಾಸ ಮಾಡಿದ ಡೈಮೇಕ್ಸಿಯಾನ್ ಮನೆಯು ಸೂರು ಬಿಂದು ಕೇಂದ್ರ ಸ್ಥಂಭದಿಂದ ನೇತಾಡುತ್ತದೆ. ಅದಕ್ಕೆ ಗಾಜಿನ ಹೊರಗೋಡೆ. ಇಂಥ ಮನೆಯನ್ನು ಸುಲಭವಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಬಹುದು. ಅವನು ರಚಿಸಿದ ಡೈಮೇಕ್ಸಿಯಾನ್ ಆಟೊಮೊಬೈಲ್ ಮೂರು ಚಕ್ರಗಳ ಒಂದು ವಾಹನ. ೯೦ ಅಶ್ವ ಸಾಮರ್ಥ್ಯದ ಎಂಜಿನನ್ನು ಉಪಯೋಗಿಸಿ ಗಂಟೆಗೆ ೧೯೩ ಕಿ.ಮಿ. ವೇಗದಲ್ಲಿ ಅದನ್ನು ಓಡಿಸಿದ. ಚಪ್ಪಟೆ ಮೈಯಲ್ಲಿ ಭೂಖಂಡಗಳು ಮೊತ್ತಮೊದಲ ಬಾರಿಗೆ ವಾಸ್ತವ ರೂಪದಿಂದ ಕಾಣಿಸಿದ್ದು ಅವನು ತಯಾರಿಸಿದ ಡೈಮೇಕ್ಸಿಯನ್ ಭೂಪಟದ ವೈಶಿಷ್ಟ್ಯ.

ಫುಲರ್‌ನ ಮತ್ತೊಂದು ದೊಡ್ಡ ಸೃಷ್ಟಿ ಮಹಾ ಗುಬಟಗಳದ್ದು. ೧೭೦೦ ವರ್ಷಗಳ ಹಿಂದೆ ರೋಮಿನಲ್ಲಿ ಕಟ್ಟಿದ ಪ್ಯಾಂಥಿಯನ್‌ನಲ್ಲಿ (ಆರಾಧನಾಲಯ) ೪೩ ಮೀಟರ್ ವ್ಯಾಸದ ಗುಬಟವಿದೆ. ೪೦೦ ವರ್ಷಗಳ ಹಿಂದೆ ಮೈಕೆಲೆಂಜೆಲೋನಂಥ ಮಹಾಶಿಲ್ಪಿಗಳು ಕೂಡಿ ರೋಮಿನ ಸೇಂಟ್‌ಪೀಟರ್ ಇಗರ್ಜಿಯ ಗುಬಟವನ್ನು ಕಟ್ಟಿದರು. ಆದರೆ ಅದರ ವ್ಯಾಸ ಪ್ಯಾಂಥಿಯನ್ ಗುಬಟಕ್ಕಿಂತ ಹೆಚ್ಚಿರಲಿಲ್ಲ. ೧೯೪೭ರಲ್ಲಿ ಫುಲರ್ ಮಹಾ ಗುಬಟ ವಿನ್ಯಾಸದ ಸ್ವಾಮ್ಯ ಪಡೆದು ಗುಬಟ ವ್ಯಾಸದ ಮಿತಿಯನ್ನು ಒಮ್ಮೆಲೆ ಹೆಚ್ಚಿಸಿದ. ಅಷ್ಟಮುಖ, ಷಣ್ಮುಖ ಇಲ್ಲವೆ ಚತುರ್ಮುಖ ಘಟಕಗಳಿಂದ ಕಟ್ಟಲಾಗುವ ಅವನ ಗುಬಟಗಳಿಗೆ ಆಂತರಿಕ ಆಧಾರಗಳಿಲ್ಲ. ಗುಬಟಗಳಿಗೆ ಬೇಕಾದ ಕಡಮೆ ಸಾಮಗ್ರಿಯಿಂದ ಅವುಗಳಲ್ಲಿರುವಷ್ಟೇ ಹೆಚ್ಚು ಅವಕಾಶವನ್ನು ಇತರ ಕಟ್ಟಡಗಳಲ್ಲಿ ಪಡೆದ ಉದಾಹರಣೆಗಳಿಲ್ಲ. ಗುಬಟದ ತಾಳಿಕೆ ಗಾತ್ರದೊಂದಿಗೆ ಹೆಚ್ಚುವುದರಿಂದ ಗುಬಟ ಕಟ್ಟಡದ ಭದ್ರತೆಯೂ ಹೆಚ್ಚು. ೧೭೭ ಮೀಟರ್‌ನಿಂದ ೨೧೩ ಮೀಟರ್ ವ್ಯಾಸದವರೆಗೆ ಗುಬಟಗಳ ಗಾತ್ರವನ್ನು ಫುಲರ್ ಹೆಚ್ಚಿಸಿದ. ವಾಸಗೃಹ, ಸಭಾಭವನ, ಸಂಗೀತ ಭವನ, ಸಿನಿಮಾಗೃಹ, ಸೇನಾನೆಲೆ ಮುಂತಾದ ಹತ್ತಾರು ಉದ್ದೇಶಗಳಿಗೆ ಒದಗುವ ಸಾವಿರಾರು ಗುಬಟ ಕಟ್ಟಡಗಳು ಇಂದು ಎದ್ದುನಿಂತಿವೆ. ಔಪಚಾರಿಕವಾಗಿ ವಾಸ್ತುಶಿಕ್ಷಣವನ್ನು ಫುಲರ್ ಪಡೆಯದಿದ್ದರೂ ವಾಸ್ತುಶಿಲ್ಪ ಶಾಸ್ತ್ರಕ್ಕೆ ಅವನು ನೀಡಿದ ಕೊಡುಗೆ ಗಮನಿಸಿ 'ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಟೆಕ್ಟ್ಸ್' ಎಂಬ ಸಂಸ್ಥೆ ಸುವರ್ಣಪದಕವಿತ್ತು ಗೌರವಿಸಿತು.

ತಂತ್ರವಿದ್ಯೆಯ ಬಗ್ಗೆ ಫುಲರ್ ಮಾತನಾಡತೊಡಗಿದರೆ ಕಲ್ಪನೆಯ ಬೀಸು ಭೂತ ಭವಿಷ್ಯಗಳನ್ನು ಜೋಡಿಸುತ್ತಿತ್ತು. ಭವಿಷ್ಯದ ವಿಸ್ತಾರ, ವೈಭವಗಳ ವರ್ಣನೆ ಶ್ರೋತೃಗಳಲ್ಲಿ ಉದ್ವೇಗ, ಸಾಹಸಪ್ರಜ್ಞೆಗಳನ್ನು ಪ್ರಚೋದಿಸುತ್ತಿತ್ತು. ಪರಿಸರ ಮತ್ತು ಮನುಕುಲಗಳ ಬಗ್ಗೆ ಅನುಕಂಪ ಹಾಗೂ ಜೀವನವನ್ನು ನೋಡುವ ತಾತ್ವಿಕ ದೃಷ್ಟಿ ಅವನ ವಿಚಾರದಲ್ಲಿ ಅಂತರ್ಗತವಾಗಿದ್ದುವು.

ಒಮ್ಮೆ ಅವನು ಭಾಷಣ ಮಾಡುತ್ತ ಸನ್ನೆ ಹೇಗೆ ಬಂತು ಎಂದು ವಿವರಿಸಿದ್ದ–

"ಬಹಳ ಹಿಂದೆ—ಮನುಷ್ಯರು ಗವಿವಾಸಿಗಳಾಗಿದ್ದಾಗ ಒಂದು ಘಟನೆ ನಡೆಯಿತು. ಮನುಷ್ಯನೊಬ್ಬ ಕಲ್ಲಿನ ಮೇಲಿದ್ದ ಕೋಲಿನ ಒಂದು ತುದಿಯನ್ನು ತುಳಿದುಬಿಟ್ಟ. ಆಗ ಕೋಲಿನ ಮತ್ತೊಂದು ತುದಿಯ ಮೇಲಿದ್ದ ಮರದ ದಿಮ್ಮಿ ಎದ್ದಿತು. ಆ ಕೋಲಿನಲ್ಲೇನೋ ವಿಶೇಷವಿದೆ ಎಂದು ಕೋಲನ್ನು ತುಳಿದು ದಿಮ್ಮಿಯನ್ನು ಎಬ್ಬಿಸುತ್ತ ಉಳಿದ ಗವಿವಾಸಿಗಳನ್ನು ಆ ವ್ಯಕ್ತಿ ದಂಗುಬಡಿಸುತ್ತಿದ್ದ. ಅದರಿಂದ ಬೇರೆ ವಸ್ತುಗಳನ್ನು ಎಬ್ಬಿಸಬಹುದೇನೋ ಎಂದು ಒಂದು ದಿನ ಇನ್ನೊಬ್ಬ ಗವಿವಾಸಿ ಸೂಚಿಸಿದ. ಅವರು ಅದೇ ರೀತಿ ಒಂದು ಬಂಡೆಯನ್ನು ಎಬ್ಬಿಸಿಯೇ ಬಿಟ್ಟರು. ಆಗ ಗವಿವಾಸಿಗಳಿಗೆಲ್ಲ ಆ ಕೋಲಿನ ಮೇಲೆ ಗೌರವ; ಅದರ ಶಕ್ತಿಯನ್ನು ತಿಳಿದ ಬೇರೆಯವರು ಕದ್ದುಕೊಂಡು ಹೋಗಬಾರದಲ್ಲ, ಅಜ್ಞಾನದಿಂದ ಸೌದೆಯೆಂದು ಬೆಂಕಿಗೆ ಹಾಕಬಾರದಲ್ಲ ಎಂಬ ಆತಂಕ. ಬೇರೊಂದು ಕೋಲಿನಿಂದ ಕೂಡ ಮೊದಲ ಕೋಲಿನ ಕೆಲಸ ಸಾಧ್ಯವಾಗಬಹುದು ಎಂದು ದಿಮ್ಮಿ ಏಳಿಸಿದವನ ಹೆಂಡತಿ ಒಂದು ದಿನ ಹೇಳಿದಾಗ ಮತ್ತೊಂದು ಕೋಲಿನಿಂದ ದಿಮ್ಮಿ ಎಬ್ಬಿಸಲು ಪ್ರಯತ್ನಿಸಿದರು. ಸನ್ನೆ ಬಳಕೆಗೆ ಬಂದೇಬಂತು."

ನಿಜವಾಗಿಯೂ ಸನ್ನೆಯ ಉಪಜ್ಞೆ ಹೀಗೆ ಆಗಿರಬಹುದೇ ಎಂದರೆ, ಅದು ಫುಲರನ ಕಲ್ಪನೆ. ಅವನೇ 'ಕ್ರಿಟಿಕಲ್ ಪಾತ್' ಎಂಬ ತನ್ನ ಕೊನೆಯ ಗ್ರಂಥದಲ್ಲಿ ಸನ್ನೆಯನ್ನು ಕಂಡುಹಿಡಿದ ಗೌರವವನ್ನು ಪ್ರಾಚೀನ ಈಜಿಪ್ಟಿನ ವಾಸ್ತುಶಿಲ್ಪಿಗಳಿಗೆ ನೀಡುತ್ತಾನೆ. ದಾಖಲೆ ಇಲ್ಲದ್ದರಿಂದ ಅಸಂಭವ ಎನ್ನಬಹುದೆ? ಹಾಗೆಂದು ದಾಖಲೆ ಇರುವುದನ್ನು ಅಲ್ಲಗಳೆಯಲಾದೀತೆ? ಫುಲರ್ ನಂಬಿದ ತಂತ್ರವಿದ್ಯಾ ಪ್ರಗತಿಯನ್ನು ಸನ್ನೆಯ ಕತೆ ಪುಷ್ಟೀಕರಿಸುತ್ತದೆ.

ವಿನ್ಯಾಸ ವಿಜ್ಞಾನಕ್ಕೊಂದು ಸ್ಪಷ್ಟ ನಿರೂಪಣೆ ಕೊಟ್ಟವ ಫುಲರ್. ಪರಿಸರಕ್ಕೆ ಹಾನಿ ಒದಗಬಾರದು, ಮನುಕುಲದ ಎಲ್ಲ ಆಗತ್ಯಗಳ ಪೂರೈಕೆ ಆಗಬೇಕು—ಹೀಗೆ ಸಮಗ್ರ ಪರಿಸರವನ್ನು ಒಳಗೊಳ್ಳುವಂತೆ ವಿಜ್ಞಾನದ ತತ್ವಗಳನ್ನು ಅನ್ವಯಿಸುವುದೇ ವಿನ್ಯಾಸ ವಿಜ್ಞಾನ. ಇಟಲಿಯ ಮೇಧಾವಿ

ಲಿಯೊನಾರ್ಡೊದವಿಂಚಿ ಹಾರುವ ಯಂತ್ರದ ವಿನ್ಯಾಸ ತಯಾರಿಸಿದ್ದ. ಆದರೆ ಅದನ್ನು ಕಾರ್ಯಗತಗೊಳಿಸಲು ಸಾಧ್ಯವಾಗಿರಲಿಲ್ಲ. ಇಪ್ಪತ್ತನೆಯ ಶತಮಾನದ ಮನುಷ್ಯ ತನ್ನ ಸ್ನಾಯುಶಕ್ತಿಯಿಂದ ನಡೆಯುವ ಯಂತ್ರ ಉಪಯೋಗಿಸಿ ಹಾರಬಲ್ಲ. ಏಕೆ? ವಿಂಚಿಯ ಕಾಲದ ವಸ್ತುಗಳಿಗಿಂತ ೬೦ ಪಟ್ಟು ಹೆಚ್ಚು ತಾಳಿಕೆ ಸಾಮರ್ಥ್ಯವಿರುವ ವಸ್ತುಗಳು ಈ ಶತಮಾನದಲ್ಲಿ ಸಿಗುತ್ತವೆ. ಶತಮಾನದ ಹಿಂದೆ ಅಟ್ಲಾಂಟಿಕ್ ಸಾಗರದುದ್ದಕ್ಕೆ ಸಂದೇಶ ಸಾಗಣೆಗಾಗಿ ಹಾಕಿದ ಕೇಬಲು ತೂಕ ೧೭.೫ ಕೋಟಿ ಕೆ.ಜಿ. ಗಳಿಗೂ ಹೆಚ್ಚು. ಕೇಬಲುಗಳಿಗಿಂತ ಸಮರ್ಥವಾಗಿ ಕೆಲಸ ಮಾಡಬಲ್ಲ ಆಧುನಿಕ ಸಂಪರ್ಕ ಉಪಗ್ರಹಗಳ ತೂಕ ಸುಮಾರು ೨೫೦ ಕೆ.ಜಿ. ಹೀಗೇಕೆ? ತಂತ್ರವಿದ್ಯೆಯ ಪ್ರಗತಿಯಿಂದ ಸಂದೇಶ ಸಾಮರ್ಥ್ಯ ಹೆಚ್ಚಿರುವುದೇ ಇದರ ಕಾರಣ. ತಂತ್ರವಿದ್ಯೆಯ ಪ್ರಗತಿ ವಿಶ್ಲೇಷಿಸುತ್ತಿದ್ದ ಫುಲರ್ ಇನ್ನೊಂದು ಗಹನ ಪ್ರಶ್ನೆಯನ್ನೂ ಎತ್ತಿಕೊಂಡಿದ್ದ– 'ಕಳೆದ ಕೆಲವು ದಶಕಗಳಿಂದ ಅತ್ಯಧಿಕ ದೂರದಲ್ಲಿರುವ ಬಹಳ ಸಂಖ್ಯೆಯ ಜನರನ್ನು ಅತಿ ಕನಿಷ್ಟ ಕಾಲಾವಧಿಯಲ್ಲಿ ಕೊಲ್ಲುವ ವಿಧಾನಗಳು ಕರಗತವಾಗಿವೆಯಲ್ಲ?' ಇದಕ್ಕೂ ತಕ್ಕ ಕಾರಣಗಳುಂಟು. ಈ ತನಕ ಭೂಮಿಯ ಸಂಪನ್ಮೂಲಗಳು 'ಒಂದೋ ನನಗೆ, ಇಲ್ಲವಾದರೆ ನಿನಗೆ' ಎಂಬ ಪರಿಸ್ಥಿತಿ. ಇಬ್ಬರಿಗೂ ಸಾಲದೆಂಬ ಭಯ. ವಿನ್ಯಾಸ ವಿಜ್ಞಾನ ಕ್ರಾಂತಿಯಿಂದ ಭಯರಹಿತ ಸಮಾಜ ನಿರ್ಮಾಣವಾಗಬಹುದೆಂದು ಫುಲರ್ ಆಶಿಸಿದ. ಆದ್ದರಿಂದಲೇ ಅವನು ಮನುಷ್ಯನನ್ನು ತಿದ್ದುವುದಕ್ಕಿಂತ ಪರಿಸರವನ್ನು ತಿದ್ದಿ' ಎಂದು ಯುವಕರೊಡನೆ ಗೋಗರೆಯುವುದಿತ್ತು.

ಕಿಲೋಮೀಟರ್ ಎತ್ತರದ ತೇಲುವ ನಗರಗಳು, ಈಗಾಗಲೇ ಇರುವ ನಗರಗಳಿಗೆ ದೈತ್ಯ ಪ್ಲಾಸ್ಟಿಕ್ ಗುಬಟದ ಆವರಣಗಳು, ಬ್ರಿಟಿಷ್ ದ್ವೀಪಗಳಷ್ಟು ಗಾತ್ರದ ಜಾಗದಲ್ಲಿ ಜಗತ್ತಿನ ಜನರೆಲ್ಲ ಸುಖದಿಂದ ಬದುಕಬಹುದಾದ ವಿನ್ಯಾಸ ಪುಂಖಾನುಪುಂಖವಾಗಿ ಬರುತ್ತಿದ್ದ ಈ ಕನಸುಗಳೆಲ್ಲ ಅವನ ಆಸೆಗಳಿಗೆ ಇಂಬುಗೊಡುತ್ತಿದ್ದುವು.

ಪರಿಸರ ಮತ್ತು ತಂತ್ರವಿದ್ಯೆಯ ಬಗ್ಗೆ ನಿರಾಶೆಯ ಮಾತುಗಳೇ ತುಂಬಿದಾಗ ಫುಲರನ ಆಸೆಗಳು ಮತ್ತು ಕನಸುಗಳು ಭಿನ್ನವಾಗಿ ಕಂಡವು. ಆದರೆ ಇನ್ನೆಷ್ಟೋ ಕಾಲದವರೆಗೆ ಜನ ಅವನ್ನೆಲ್ಲ ತಮ್ಮವೆಂದೇ ನೆನೆಯಲುಂಟು.

ಅಡ್ಯನಡ್ಕ ಕೃಷ್ಣಭಟ್ಟ

ಅತೀಂದ್ರಿಯ ಶಕ್ತಿಯಿಂದ ಕೊಲೆಗಾರನ ದಸ್ತಗಿರಿ

ನಿದ್ರೆಯಲ್ಲಿ ನಡೆಯುವ ಮನುಷ್ಯರ ಬಗ್ಗೆ ನೀವು ಕೇಳಿರಬಹುದು. ನಿದ್ರೆಯಲ್ಲಿ ನಡೆಯುವ ಜನ ಅನೇಕ ವೇಳೆ ತುಂಬ ವಿಲಕ್ಷಣವಾದ, ಸಾಹಸದಿಂದ ಕೂಡಿದ, ಅಸಂಭವವೆನಿಸುವ ಕೆಲಸಗಳನ್ನು ಮಾಡುತ್ತಾರೆ. ಜಾಗ್ರತಾವಸ್ಥೆಯಲ್ಲಿ ಅಂಥ ಕೆಲಸಗಳನ್ನು ತಾವು ಮಾಡಬಲ್ಲೆವೆಂಬ ಕಲ್ಪನೆಯನ್ನು ಅವರು ಕಾಣಲಾರರು. ಇಂಥ ಅನೇಕ ರೋಗಿಗಳು ನದಿಯಲ್ಲಿ ಪಳಗಿದ ಈಜುಗಾರರಂತೆ ಈಜುವುದೂ ಉಂಟು, ಆದರೆ ನಿಜ ಜೀವನದಲ್ಲಿ ಅವರು ಈಜುವುದಿರಲಿ, ನೀರನ್ನು ಕಂಡರೇ ಹೆದರಿಕೊಳ್ಳುವವರಾಗಿರುವುದೂ ಉಂಟು.

ಈ ನಿದ್ರಾಚಲನ ರೋಗಿಗಳಂತೆಯೇ ಮತ್ತೆ ಕೆಲವರು ಹಲವಾರು ರೀತಿಯ ವಿಚಿತ್ರ ಮನಸ್ಥಿತಿಗಳಿಗೆ ಒಳಗಾಗುವುದುಂಟು. ಅಂಥ ಸಮಯಗಳಲ್ಲಿ ಅವರು ಅತ್ಯಂತ ಭಯಂಕರ ಕೃತ್ಯಗಳನ್ನು ಎಸಗಿರುವುದರ ಬಗ್ಗೆ ವರದಿಗಳಿವೆ. ಎದೆ ನಡುಗಿಸುವ ಕೆಲಸಗಳನ್ನು ಒಂದಾದಮೇಲೊಂದರಂತೆ ಮಾಡಿರುವುದುಂಟು. ಆದರೆ ವಾಸ್ತವಾಂಶವೇನೆಂದರೆ ಇಂಥ ಸಂದರ್ಭಗಳಲ್ಲಿ ತಾವು ಏನು ಮಾಡುತ್ತಿದ್ದೇವೆಂಬ ಅರಿವು ಅವರಿಗೆ ಇರುವುದೇ ಇಲ್ಲ. ಇಂಥ ವಿಚಿತ್ರ ಘಟನೆಯ ಇಂಗ್ಲಿಷ್ ಸತ್ಯಕಥೆಯೊಂದರ ವಿವರಗಳನ್ನು ಇಲ್ಲಿ ನೀಡಲಾಗಿದೆ.

ಇದು ಇಂದಿಗೆ ೯೪ ವರ್ಷಗಳಷ್ಟು ಹಿಂದೆ ನಡೆದ ಘಟನೆ. ಕ್ರಿಸ್ತಶಕ ೧೮೮೮ರ ಚಳಿಗಾಲದಲ್ಲಿ ಇಡೀ ಲಂಡನ್ ನಗರವನ್ನು ಒಂದು ಭಯಂಕರ ಕರಾಳ ನೆರಳು ಆವರಿಸಿತ್ತು. ಸಾಯಂಕಾಲವಾಗುತ್ತಿದ್ದಂತೆಯೇ ಜನ ತಮ್ಮ ಮನೆಬಾಗಿಲುಗಳನ್ನು ಮುಚ್ಚಿಕೊಂಡು ಒಳಗೆ ಸೇರಿಬಿಡುತ್ತಿದ್ದರು. ಇಡೀ ನಗರವೇ ನಿಶ್ಶಬ್ದತೆಯಿಂದ ಕೂಡಿರುತ್ತಿತ್ತು. ರಸ್ತೆಗಳೆಲ್ಲ ಖಾಲಿಖಾಲಿ. ಜನ ಮನೆಯಿಂದ ಹೊರಗೆ ಕಾಲಿಡಲೂ ಹೆದರುತ್ತಿದ್ದರು. ಇದಕ್ಕೆ ಒಂದೇ ಕಾರಣ ಎಂದರೆ 'ಜಾಕ್ ದ ರಿಪರ್' ಎಂಬ ಘೋರ ಕೊಲೆಗಡುಕ. ಕುತ್ತಿಗೆ ಸೀಳುವ ಜಾಕ್ ಎಂಬುದಾಗಿ ಅವನಿಗೆ ಜನ ಹೆಸರಿಟ್ಟಿದ್ದರು. ಅವನು ಎಷ್ಟು ಭಯಂಕರನಾಗಿದ್ದನೆಂದರೆ ಮನೆಯಲ್ಲಿ ತಾಯಂದಿರು ಜಾಕ್‌ನ ಹೆಸರು ಹೇಳಿ ಮಕ್ಕಳನ್ನು ಹೆದರಿಸುತ್ತಿದ್ದರಂತೆ.

ಆ ಚಳಿಗಾಲದುದ್ದಕ್ಕೂ ಇಂಗ್ಲೆಂಡಿನಲ್ಲಿ ಒಂದಾದ ಮೇಲೊಂದು ಕೊಲೆಗಳು ನಡೆಯುತ್ತಿದ್ದವು. ಎಲ್ಲ ಹತ್ಯೆಗಳೂ ಹೆಚ್ಚುಕಡಿಮೆ ಒಂದೇ ರೀತಿಯಲ್ಲಿ ಆಗು

೧೯೮೩ರ ಏಪ್ರಿಲ್ 'ನವನೀತ'ದಲ್ಲಿ ಪ್ರಕಟವಾದ ಸುರೇಂದ್ರ ಶ್ರೀವಾಸ್ತವ ಅವರ 'ಅತೀಂದ್ರಿಯ ಶಕ್ತಿ ನೇ ಹತ್ಯಾರೇ ಕೋ ಪಕಡಾ' ಲೇಖನದ ಕನ್ನಡಾನುವಾದ.

ತ್ತಿದ್ದವು—ಕೊಲೆಗಾರ ಕಟುಕನಂತೆ ಹೆಣವನ್ನು ಮನಸ್ಸಿಗೆ ಬಂದಂತೆ ಕತ್ತರಿಸಿ ರಸ್ತೆಯಬದಿಗೆ ಎಸೆದು ಹೋಗಿರುತ್ತಿದ್ದ. ಹೆಣದ ಹೊಟ್ಟೆ ಸೀಳಿ ಕರುಳನ್ನು ಹೊರಗೆ ಬಗೆದು ಕುತ್ತಿಗೆ ಸೀಳಿಹಾಕಿ ಹೋಗಿರುತ್ತಿದ್ದ. ಅಂದಹಾಗೆ, ಕೇವಲ ಕೊಲೆಯನ್ನಷ್ಟು ಮಾಡಿರುತ್ತಿದ್ದ, ಹೆಣದ ಮೈಮೇಲಿನ ಬೆಲೆಬಾಳುವ ಸಾಮಾನೆಲ್ಲ ಹಾಗೆಯೆ ಇರುತ್ತಿದ್ದವು. ಕೊಲೆಗೊಳಗಾದ ಹೆಂಗಸರ ಮೈಮೇಲೆ ಅತ್ಯಾಚಾರಕ್ಕೊಳಗಾದ ಗುರುತುಗಳೂ ಇರುತ್ತಿರಲಿಲ್ಲ. ಅವರಲ್ಲೂ ಅವನು ಕೊಲೆಮಾಡುತ್ತಿದ್ದುದು ಕೇವಲ ಹೆಂಗಸರನ್ನೇ.

ಮೇಲಿನ ಈ ಅಂಶಗಳನ್ನು ಗಮನಿಸಿದರೆ ಕೊಲೆ ಹಣದಾಸೆಯಿಂದ ನಡೆಯುತ್ತಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದರೆ ಕೊಲೆಗಳನ್ನು ಯಾರು ಮಾಡುತ್ತಿದ್ದರೆಂಬುದು ಗಹನವಾಗಿಯೆ ಉಳಿದಿತ್ತು. ಪೋಲೀಸರು ಹಗಲು ರಾತ್ರಿ ಕೊಲೆಗಡುಕನ ಸುಳಿವಿಗಾಗಿ ಪ್ರಯತ್ನಿಸುತ್ತಲೇ ಇದ್ದರು. ಆದರೆ ಏನೂ ಪ್ರಯೋಜನವಾಗಿರಲಿಲ್ಲ. ಹುಡುಕಿ ಹುಡುಕಿ ನಿರಾಶರಾದ ಪೋಲೀಸರು ಅವನಿಗೆ 'ಜಾಕ್ ದ ರಿಪರ್' ಅಂದರೆ ಕುತ್ತಿಗೆ ಸೀಳುವ ಜಾಕ್ ಎಂದೇ ಹೆಸರಿಟ್ಟಿದ್ದರು.

ಹತ್ಯೆಗಳು ಇನ್ನೂ ನಡೆಯುತ್ತಲೇ ಇದ್ದವು. ಪೋಲೀಸರಿಗೆ ಏನೂ ಮಾಡಲಾಗಿರಲಿಲ್ಲ. ಹೀಗೆಯೆ ತಪಾಸಣೆ ನಡೆಸುತ್ತಿರುವಾಗ ಪೋಲೀಸರಿಗೆ ಇನ್ನೊಂದು ಅಂಶ ಗಮನಕ್ಕೆ ಬಂತು. ಏನೆಂದರೆ, ಜಾಕ್ ಕೊಲೆಮಾಡುವುದರಲ್ಲಿ ಒಂದು ವೈಶಿಷ್ಟ್ಯವಿತ್ತು. ಅವನು ಮುಚ್ಚಿದ ಕೋಣೆಯಲ್ಲಿ ಅಥವಾ ನಿರ್ಜನವಾದ ಪ್ರದೇಶದಲ್ಲಿ ಕೊಲೆ ಮಾಡುತ್ತಿರಲಿಲ್ಲ. ಕೊಲೆಯಾಗುತ್ತಿದ್ದುದೆಲ್ಲ ಸಾರ್ವಜನಿಕ ಸ್ಥಳಗಳಲ್ಲಿಯೆ. ಲಂಡನ್ನಿನ 'ಈಸ್ಟ್ಎಂಡ್' ಪ್ರದೇಶ ಅವನ ಕೊಲೆಗಳ ತಾಣವಾಗಿತ್ತು. ಇದು ಲಂಡನ್ನಿನಲ್ಲಿ ತುಂಬ ಜನಸಂದಣಿಯಿರುವ ಪ್ರದೇಶ. ಇನ್ನೂ ಒಂದು ವಿಶೇಷತೆಯೆಂದರೆ ಜಾಕ್ ಕೊಲೆಮಾಡುವ ನೂರಿನ್ನೂರು ಗಜಗಳಷ್ಟು ದೂರದಲ್ಲಿಯೆ ಯಾವುದಾದರೂ ಒಂದು ಪೋಲಿಸ್‌ಸ್ಟೇಷನ್ ಅಥವಾ ಬೀಟ್ ಪೋಸ್ಟ್ ಇರುತ್ತಿತ್ತು. ಅಂಥ ಚಾಕಚಕ್ಯತೆ ಅವನದು. ಇಂತೆಡೆಯಲ್ಲಿ ಅನಾಯಾಸವಾಗಿ ಕೊಲೆಮಾಡಿ ಎಲ್ಲರ ಕಣ್ಣಿಗೂ ಮಣ್ಣೆರಚಿ ತಪ್ಪಿಸಿಕೊಂಡು ಬಿಡುತ್ತಿದ್ದ. ಪೋಲೀಸರು ಕೈಕೈ ಹಿಸುಕುತ್ತ ಕುಳಿತಿರಬೇಕಾಗಿತ್ತು.

ಪೋಲೀಸರು ಹೇಗಾದರೂ ಮಾಡಿ ಕೊಲೆಗಡುಕನನ್ನು ಹಿಡಿಯಲೇಬೇಕೆಂದು ಪಣತೊಟ್ಟಿದ್ದರು. ಅನೇಕರನ್ನು ದಸ್ತಗಿರಿ ಮಾಡಿದರು. ಏನೂ ಪ್ರಯೋಜನವಾಗಲಿಲ್ಲ. ಲಂಡನ್ನಿನ ಪೋಲೀಸರ ಜೊತೆಯಲ್ಲಿ ವಿಶ್ವವಿಖ್ಯಾತ ಸ್ಕಾಟ್‌ಲೆಂಡ್ ಯಾರ್ಡಿನ ಗುಪ್ತಚರರೂ ಸೇರಿಕೊಂಡು ಜಾಕ್‌ನನ್ನು ಹಿಡಿಯುವ ಸಾಹಸಕ್ಕೆ

ಕೈಹಾಕಿದರು. ಆದರೂ ಜಾಕ್ ಕೈಗೆ ಸಿಗಲಿಲ್ಲ. ಪೋಲೀಸರಲ್ಲಿ ನಿರಾಶೆಮೂಡಿತು.

ಜನರ, ಪೋಲೀಸರ ಹಾಗೂ ಗುಪ್ತಚರರ ಕಣ್ಣಿಗೆ ಮಣ್ಣೆರಚಿ ನುಣುಚಿಕೊಂಡು ಹೋಗುತ್ತಿದ್ದ ಜಾಕ್ ಕಡೆಗೆ ಒಂದು ದಿನ ದಸ್ತಗಿರಿಯಾದ—ಪೋಲೀಸರ ಚಾತುರ್ಯದಿಂದಲ್ಲ, ಬದಲಾಗಿ ರಾಬರ್ಟ್ ಜೇಮ್ಸ್‌ಲೀಸ್ ಎಂಬಾತನ ಅತೀಂದ್ರಿಯ ಶಕ್ತಿಯ ಮೂಲಕ.

೧೮೮೮ರ ಚಳಿಗಾಲದ ಒಂದು ದಿನ. ರಾಬರ್ಟ್ ಜೇಮ್ಸ್ ಲೀಸ್ ಎಂಬ ಈ ವ್ಯಕ್ತಿ ಲಂಡನ್ನಿನ ತನ್ನ ಮನೆಯ ಕೋಣೆಯಲ್ಲಿ ಕುಳಿತು ಏನೋ ಕೆಲಸಮಾಡುತ್ತಿದ್ದ. ಇದಕ್ಕಿದ್ದಂತೆ ಯಾವುದೋ ಅತೀಂದ್ರಿಯ ದೃಶ್ಯ ಅವನ ಮನಃಪಟಲದ ಮೇಲೆ ಮೂಡಿ ಅತ್ತ ಗಮನ ಸೆಳೆಯಿತು. ಒಬ್ಬ ಹೆಂಗಸು ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಳೆ. ಅವಳ ಹಿಂದೆಯೆ ಒಬ್ಬ ವ್ಯಕ್ತಿ ಹಿಂಬಾಲಿಸಿಕೊಂಡು ಹೋಗುತ್ತಿದ್ದಾನೆ. ಅವರಿಬ್ಬರೂ ಹಾಗೆಯೆ ಒಂದು ಓಣಿಗೆ ಬಂದರು. ಇದ್ದಕ್ಕಿದಂತೆ ಆ ವ್ಯಕ್ತಿ ಅವಳ ಹತ್ತಿರ ಹೋದ. ಅವಳ ಬಾಯನ್ನು ತನ್ನ ಕೈಯಿಂದ ಭದ್ರವಾಗಿ ಮುಚ್ಚಿ ಜೇಬಿನಿಂದ ಚಾಕು ತೆಗೆದು ಕುತ್ತಿಗೆ ಕತ್ತರಿಸಿಬಿಟ್ಟ. ಆ ಹೆಂಗಸಿಗೆ ಕೂಗಿಕೊಳ್ಳಲೂ ಸಾಧ್ಯವಾಗಲಿಲ್ಲ. ಬಿಸಿರಕ್ತದ ಬುಗ್ಗೆ ಅವನ ಬಟ್ಟೆಯಮೇಲೆ ಹಾರಿತು. ಅವನು ಅದನ್ನು ಲೆಕ್ಕಿಸದೆ ಹೆಂಗಸನ್ನು ನೆಲಕ್ಕೆ ಕೆಡವಿ ಅಮಾನುಷವಾಗಿ ಕತ್ತರಿಸಲಾರಂಭಿಸಿದ.

ಈ ಭಯಂಕರ ಕೃತ್ಯ ಮುಗಿದಮೇಲೆ ಚಾಕುವನ್ನು ಆ ಹೆಂಗಸಿನ ಬಟ್ಟೆಗಳಿಂದಲೇ ಒರೆಸಿ ಅಲ್ಲೇ ಎಸೆದುಬಿಟ್ಟ. ಅನಂತರ ಸ್ವಲ್ಪ ದೂರದಲ್ಲಿ ತೆಗೆದಿಟ್ಟಿದ್ದ ತನ್ನ ನಿಲುವಂಗಿಯನ್ನು ಧರಿಸಿ ಮೇಲಿನವರೆಗೆ ಗುಂಡಿ ಹಾಕಿಕೊಂಡ. ರಕ್ತದಿಂದ ತೊಯ್ದ ಒಳಅಂಗಿ ಸ್ವಲ್ಪವೂ ಕಾಣುತ್ತಿರಲಿಲ್ಲ. ಆಮೇಲೆ ಏನೂ ಗೊತ್ತಿಲ್ಲದವನಂತೆ ಓಣಿಯಿಂದ ಹೊರಬಿದ್ದು ರಸ್ತೆಯಲ್ಲಿ ಹೆಜ್ಜೆಹಾಕತೊಡಗಿದ.

ಈ ದೃಶ್ಯನೋಡಿ ಲೀಸ್ ಬೆವೆತುಹೋದ. ಈ ಕೊಲೆ ಇನ್ನೂ ನಡೆದಿಲ್ಲ, ಇದರ ಚಿತ್ರ ಮಾತ್ರ ಎಂದು ಹೇಗೋ ಏನೋ ಅವನ ಮನಸ್ಸಿಗೆ ಬಂತು. ಶೀಘ್ರದಲ್ಲಿಯೆ ನಡೆಯಬಹುದೇನೂ ಅನಿಸಿತು. ಅವನು ಕೂಡಲೇ ಪೋಲೀಸು ಠಾಣೆಗೆ ಹೋಗಿ ಎಲ್ಲ ವಿಷಯವನ್ನು ತಿಳಿಸಿದ. ಪೋಲೀಸ್ ಅಧಿಕಾರಿ ಅವನ ಮಾತಿಗೆ ಏನೂ ಗಮನಕೊಡಲಿಲ್ಲ. ಎಲ್ಲೋ ಅರೆಹುಚ್ಚ ಇವನು ಅಂದುಕೊಂಡು ಬಿಟ್ಟ. ಆದರೆ ಲೀಸ್ ಹೇಳಿದ್ದು ಸುಳ್ಳಾಗಲಿಲ್ಲ. ಮಾರನೆಯ ದಿನವೇ ಅವನು ಹೇಳಿದ ಸ್ಥಳದಲ್ಲಿ, ರೀತಿಯಲ್ಲಿ, ಅದೇ ಕಾಲಕ್ಕೆ ಒಂದು ಕೊಲೆ ನಡೆಯಿತು. ಪೋಲೀಸರು ಏನೂಮಾಡಲಾರದೆ ಕೈ ಕೈ ಹಿಸುಕಿಕೊಂಡರು.

ಸ್ವಲ್ಪದಿನಗಳಾದ ಮೇಲಿನ ಮಾತು. ಒಂದು ಸಾಯಂಕಾಲ ಲೀಸ್ ತನ್ನ ಮಡದಿಯೊಡನೆ ಸುತ್ತಾಡುವುದಕ್ಕೆ ಹೊರಟ. ಹಾಗೆಯೆ ಸುತ್ತಾಡಿ ಹಿಂದಿರುಗ ಬೇಕಾದರೆ ಶೆಫರ್ಡ್ಸ್ ಎಂಬೆಡೆಯಲ್ಲಿ ಒಂದು ಟ್ರಾಂ ಹತ್ತಿದ. ಅಲ್ಲಲ್ಲಿ ಟ್ರಾಂ ನಿಂತು ಜನರನ್ನು ಇಳಿಸುತ್ತಿತ್ತು, ಹತ್ತಿಸಿಕೊಳ್ಳುತ್ತಿತ್ತು. ಹೀಗೆಯೆ ಟ್ರಾಂ ನಾಟಿಂಗ್ ಹಾಲ್ ಎಂಬಲ್ಲಿಗೆ ಬಂದಾಗ ಜನಸಂದಣಿಯ ನಡುವೆಯೆ ಒಬ್ಬ ವ್ಯಕ್ತಿ ಟ್ರಾಂ ಹತ್ತಿದ. ಅವನು ಹತ್ತುತ್ತಲೇ ಲೀಸನ ಮನಸ್ಸಿನಲ್ಲಿ ವಿಚಿತ್ರವಾದ ಅನುಭವವುಂಟಾಯಿತು. ತಾನೊಬ್ಬ ಕೊಲೆಗಡುಕನ ಹತ್ತಿರ ಕುಳಿತಿದ್ದೇನೆ ಅಂತ ಅವನ ಮನಸ್ಸಿಗೆ ಅನಿಸಿತು. ಲೀಸ್ ಹೆಂಡತಿಗೆ ಮನೆಗೆ ಹಿಂದಿರುಗಲು ಹೇಳಿದ. ಆ ಮೇಲೆ ಅಂದು ಆ ವ್ಯಕ್ತಿಯ ಬೆನ್ನುಹತ್ತಿದ.

ಆ ವ್ಯಕ್ತಿ ಮಾರ್ಬಲ್ ಆರ್ಜ್ ಎಂಬಲ್ಲಿ ಇಳಿದ. ಲೀಸ್ ಸಹ ಅಲ್ಲೇ ಇಳಿದು ಅವನನ್ನು ಹಿಂಬಾಲಿಸತೊಡಗಿದ. ರಸ್ತೆಯಲ್ಲಿ ಒಂದೆಡೆ ಪೋಲೀಸಿನವ ನಿಂತಿದ್ದುದು ಕಂಡುಬಂತು. ಲೀಸ್ ಪೋಲೀಸನನ್ನು ನೋಡಿ ಹೇಳಿದ—"ನೋಡಿ, ಅಲ್ಲಿ 'ಜಾಕ್ ದ ರಿಪ್ಪರ್' ಹೋಗುತ್ತಿದ್ದಾನೆ. ಅವನು ನನಗೆ ಚೆನ್ನಾಗಿಗೊತ್ತು. ಅವನನ್ನು ಹಿಡಿದು ಪೋಲೀಸ್‌ಸ್ಟೇಷನ್ನಿಗೆ ಒಯ್ಯಿರಿ." ಪೋಲೀಸಿನವ ಅವನ ಮಾತಿನ ಕಡೆ ಗಮನ ಕೊಡಲಿಲ್ಲ. ಲೀಸ್ ಬುದ್ಧಿ ಸರಿಯಿಲ್ಲವೆಂದೆ ಅವನು ಭಾವಿಸಿದ. ಅತ್ತ ಆ ವ್ಯಕ್ತಿ ಕುದುರೆಗಾಡಿಯಲ್ಲಿ ಕುಳಿತು ಎತ್ತಲೋ, ಹೊರಟು ಹೋದ. ಲೀಸ್ ಈ ಬಾರಿಯೂ ಕೊಲೆಗಾರನನ್ನು ಹಿಡಿಯಲು ಅಸಫಲನಾದ.

ಅದೇ ದಿನ ಸಾಯಂಕಾಲ ತನ್ನ ಕೋಣೆಯಲ್ಲಿ ಕುಳಿತಿರುವಾಗ ಲೀಸ್ ತನ್ನ ಅತೀಂದ್ರಿಯ ಶಕ್ತಿಯಿಂದ ಮತ್ತೊಂದು ದೃಶ್ಯನೋಡಿದ. ಅವನು ಕೂಡಲೇ ಪೋಲೀಸ್‌ಠಾಣೆಗೆ ಧಾವಿಸಿ ಅಲ್ಲಿನ ಮುಖ್ಯಾಧಿಕಾರಿಗೆ ಈ ಬಗ್ಗೆ ವಿವರವಾಗಿ ತಿಳಿಯಪಡಿಸಿದ. ಅಧಿಕಾರಿ ಮತ್ತೆ ಅವನ ಮಾತಿನ ಕಡೆ ಗಮನವೀಯಲಿಲ್ಲ, ಈ ಹುಚ್ಚ ಮತ್ತೆ ಬಂದನಲ್ಲ ಅಂತ ಬೇಸರಪಟ್ಟುಕೊಂಡ.

ಅವರೆ ಲೀಸ್ ಕೊಲೆಗೊಳಗಾದ ಹೆಂಗಸಿನ ಕಿವಿಯ ಬಗ್ಗೆ ಹೇಳಿದಾಗ ಪೋಲೀಸ್ ಮುಖ್ಯಾಧಿಕಾರಿಗೆ ತುಂಬ ಆಶ್ಚರ್ಯವೆನಿಸಿತು. ಲೀಸನ ಮಾತಿನಲ್ಲಿ ಸ್ವಲ್ಪ ಹುರುಳಿದೆ ಎಂದು ಅವನಿಗೆ ಮನದಟ್ಟಾಯಿತು. ಕಾರಣವೇನೆಂದರೆ ಸ್ವಲ್ಪ ಸಮಯ ಮೊದಲಷ್ಟೇ ಅವನಿಗೆ ಸಮಾಚಾರ ಸಂಸ್ಥೆಯೊಂದರ ಮೂಲಕ ಒಂದು ಪತ್ರ ಬಂದಿತ್ತು. ಪತ್ರ ಬರೆದವನು ತಾನೇ 'ಜಾಕ್ ದ ರಿಪರ್' ಎಂದು ಹೇಳಿಕೊಂಡಿದ್ದ. ತಾನೇ ಕೊಲೆಗಳನ್ನು ಮಾಡುತ್ತಿರುವುದಾಗಿಯೂ ಈ ಬಾರಿ ಅದಕ್ಕೆ ಸಾಕ್ಷಿಯಾಗಿ ತನ್ನ ಹೊಸ ಬೇಟೆಯ ಕಿವಿಗಳನ್ನು ಕತ್ತರಿಸಿ ಪೋಲೀಸರಿಗೆ

ಕಳುಹಿಸಿಕೊಡುತ್ತೇನೆಂದು ಬರೆದಿದ್ದ. ಮುಖ್ಯ ಪೋಲೀಸ್ ಅಧಿಕಾರಿ ಲೀಸನನ್ನು ತನ್ನ ರಹಸ್ಯ ಕೋಣೆಗೆ ಕರೆದೊಯ್ದು ಅವನೊಡನೆ ವಿವರವಾಗಿ ಮಾತುಕತೆ ನಡೆಸಿದ.

ಲೀಸ್ ನೀಡಿದ ಮಾಹಿತಿಯ ಮೇರೆಗೆ ಪೋಲೀಸರು ಕೊಲೆಗಾರನನ್ನು ಹುಡುಕತೊಡಗಿದರು. ಆದರೆ ಜಾಕನ ಅದೃಷ್ಟ ಚೆನ್ನಾಗಿತ್ತು. ಬೆಳಗಾಗುವುದರಲ್ಲಿ ಅವನು ಎಲ್ಲರ ಕಣ್ಣಿಗೆ ಮಣ್ಣೆರಚಿ ಇಬ್ಬರು ಅಮಾಯಕ ಮಹಿಳೆಯರನ್ನು ಕೊಲೆಮಾಡಿ ನುಣುಚಿಕೊಂಡು ಹೋಗಿದ್ದ. ಪೋಲೀಸರಿಗೆ ಏನೂ ಮಾಡಲಾಗಲಿಲ್ಲ. ಕತ್ತರಿಸಿದ ಕಿವಿಗಳು ಪೋಲೀಸ್ ಠಾಣೆ ತಲಪಿದ್ದವು.

ಇದಾದ ಮೇಲೆ ಕೆಲವು ದಿನಗಳ ನಂತರದ ಮಾತು. ಒಂದು ರಾತ್ರಿ ಲೀಸ್ ತನ್ನ ಗೆಳೆಯರೊಡನೆ ಹೋಟೇಲಿನಲ್ಲಿ ಊಟಮಾಡುತ್ತಿದ್ದ. ಊಟಮಾಡುತ್ತಿದ್ದಂತೆ ಇದ್ದಕ್ಕಿದ್ದಂತೆಯೆ ಕೂಗಿಕೊಂಡ—"ಜಾಕ್ ಇನ್ನೊಂದು ಕೊಲೆ ಮಾಡಿಬಿಟ್ಟ." ಅವನು ಕೂಡಲೇ ಊಟ ಬಿಟ್ಟು ಹೋಟೇಲಿನಿಂದ ಪೋಲೀಸ್ ಠಾಣೆಗೆ ಓಡಿದ. ಪೋಲೀಸರಿಗೆ ಈ ಬಾರಿ ಅವನನ್ನು ನಂಬದೆ ಗತ್ಯಂತರವಿರಲಿಲ್ಲ. ಏಕೆಂದರೆ ಆಗತಾನೇ ಅಂಥ ಕೊಲೆಯೊಂದು ನಡೆದ ಬಗ್ಗೆ ಅವರಿಗೆ ಮಾಹಿತಿ ದೊರೆತಿತ್ತು.

ಈಗ ಪೋಲೀಸ್ ಮುಖ್ಯಾಧಿಕಾರಿ ಚಿಂತೆಗೀಡಾದ. ತುಂಬ ಹೊತ್ತು ಯೋಚನೆಮಾಡಿದ ಮೇಲೆ ಅವನಿಗೆ ಒಂದು ಉಪಾಯ ಹೊಳೆಯಿತು. ಲೀಸನ ಅತೀಂದ್ರಿಯ ಶಕ್ತಿಯನ್ನೇ ಉಪಯೋಗಿಸಿಕೊಂಡು ಕೊಲೆಗಡುಕನನ್ನು ಹಿಡಿಯಲು ನಿಶ್ಚಯಿಸಿದ. ಲೀಸ್ ತುಂಬ ಸಂತೋಷದಿಂದ ನೆರವಾಗಲು ಮುಂದಾದ.

ಮಾರನೇ ದಿನ ಪೋಲೀಸ್ ಮುಖ್ಯಾಧಿಕಾರಿ ತನ್ನ ಸಿಬ್ಬಂದಿಯೊಡನೆ ಲೀಸನ ಜೊತೆ ಜಾಕನ ಶೋಧಕ್ಕಾಗಿ ಹೊರಟ. ಲೀಸ್ ಮುಂದೆ ಮುಂದೆ ಹೋಗುತ್ತಿದ್ದ. ಅವನ ಹಿಂದೆ ಮುಖ್ಯಾಧಿಕಾರಿ ಹಾಗೂ ಸಿಬ್ಬಂದಿ ನಡೆಯುತ್ತಿದ್ದರು. ಲೀಸ್ ತನ್ನ ಅದ್ಭುತಶಕ್ತಿಯಿಂದ ಮುಂದೆ ಹೆಜ್ಜೆ ಹಾಕುತ್ತಿದ್ದ. ಅವನ ನಡೆಗೆ ಪೋಲೀಸು ನಾಯಿ ಅಪರಾಧಿಯ ವಾಸನೆ ಹಿಡಿದು ಅವರ ದಿಕ್ಕನ್ನು ಅನುಸರಿಸಿಹೋಗುವಂತೆ ಇತ್ತು. ಅನೇಕ ರಸ್ತೆಗಳನ್ನು ದಾಟಿ, ಗಲ್ಲಿಗಳನ್ನು ಹಾಯ್ದು ಲೀಸ್ ಒಂದು ಭವ್ಯವಾದ ಬಂಗಲೆಯೊಂದರ ಮುಂದೆ ನಿಂತುಕೊಂಡು ಹೇಳಿದ—"ಜಾಕ್ ದ ರಿಪ್ಪರ್ ಇಲ್ಲೇ ಇದ್ದಾನೆ. ಕೊಲೆಗಡುಕನ ನೆಲೆ ಇಲ್ಲೇ. ನಿಮಗೆ ಬೇಕಾಗಿರುವವನು ಮನೆಯ ಒಳಗೇ ಇದ್ದಾನೆ."

"ಖಂಡಿತ ಸಾಧ್ಯವಿಲ್ಲ!"—ಪೋಲೀಸ್ ಮುಖ್ಯಾಧಿಕಾರಿ ಕೂಗಿಕೊಂಡ "ನನಗೆ ನಂಬಲಾಗುತ್ತಿಲ್ಲ. ನೀನು ಸುಳ್ಳು ಹೇಳುತ್ತಿದ್ದಿ."

ವಾಸ್ತವವಾಗಿ ಅವರು ನಿಂತಿದ್ದ ಮನೆ ಒಬ್ಬ ಹೆಸರಾಂತ ಡಾಕ್ಟರಿಗೆಸೇರಿದ್ದು ತುಂಬ ಸಂಭಾವಿತ ವ್ಯಕ್ತಿಯೆಂದು ಅವರು ಹೆಸರು ಪಡೆದಿದ್ದರು. ಇಡೀ ನಗರ ಜನರಿಗೆಲ್ಲ ಅವರ ಖ್ಯಾತಿ ಗೊತ್ತಿತ್ತು. ಅಂಥವರ ಬಗ್ಗೆ ಅನುಮಾನ ಪಡುವುದ ಸಾಧ್ಯವೇ ಇರಲಿಲ್ಲ. ಮುಖ್ಯಾಧಿಕಾರಿ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡ. ಲೀಸ್ ಮತ್ತೆ ಮತ್ತೆ ಕೊಲೆಗಾರ ಅಲ್ಲಿಯೆ ಇರುವುದಾಗಿ ಒತ್ತಿ ಹೇಳಿದ.

ಲೀಸನ ದೃಢನಂಬಿಕೆಯ ಮೇಲೆ ಭರವಸೆಯಿಟ್ಟು ಮುಖ್ಯಾಧಿಕಾರಿ ತನಿಖೆ ಶುರುಮಾಡಿದ. ಮೊದಲು ಡಾಕ್ಟರನಿಂದ ಹೇಳಿಕೆ ಪಡೆಯಲಾಯಿತು. ತಾನ ಜಾಕ್ ಅಲ್ಲ ಅಂತ ಡಾಕ್ಟರ್ ಕಡ್ಡಿಮುರಿದಂತೆ ನಿರಾಕರಿಸಿದ. ಜಾಕ್ ನಡೆಸ ತ್ತಿರುವ ಹತ್ಯೆಗಳು ತನಗೆ ತುಂಬ ದುಃಖ ಉಂಟುಮಾಡಿದೆ ಅಂತ ಪೇಚಾಡಿದ ಅನಂತರ ಡಾಕ್ಟರ ಹೆಂಡತಿಗೆ ಪ್ರಶ್ನೆ ಹಾಕಿದರು. ಅವಳು ಹೇಳಿದಳು—"ಅವರಿಗೆ ಒಮ್ಮೊಮ್ಮೆ ಮೈಮೇಲೆ ಹತೋಟಿ ತಪ್ಪುವುದುಂಟು. ಹಾಗಾದಾಗ ಬೇರೆಯವ ರೊಡನೆ ತುಂಬ ಕ್ರೂರವಾಗಿ ನಡೆದುಕೊಳ್ಳುತ್ತಾರೆ. ಒಮ್ಮೆಯಂತೂ ಹಾಗಾದಾಗ ಸ್ವಂತ ಮಕ್ಕಳಿಗೇ ಕಟುಕರಂತೆ ತಮ್ಮ ಮಕ್ಕಳೇ ಅಲ್ಲವೆಂಬಂತೆ ಹೊಡೆದಿದ್ದಾರೆ." ಡಾಕ್ಟರ್‌ನ ಹೆಂಡತಿ ಹೇಳಿದ ಇನ್ನೊಂದು ಮಾತು ಗಮನಾರ್ಹವಾಗಿತ್ತು—"ಈಚೆಗೆ ಅವರು ರಾತ್ರಿ ಮನೆಬಿಟ್ಟು ಹೊರಟ ರಾತ್ರಿಯೇ ಈಸ್ಟ್ ಎಂಡ್‌ನಲ್ಲಿ ಕೊಲೆಗಳಾಗುತ್ತಿವೆ."

ಪೋಲೀಸರಿಗೆ ದೊಡ್ಡ ಪುರಾವೆಯೇ ದೊರಕಿದಂತಾಯಿತು. ಡಾಕ್ಟರಿಗೆ ಮತ್ತೆ ಮತ್ತೆ ಪ್ರಶ್ನೆ ಹಾಕಿದರು. ಅವನು ತನಗೆ ಏನೂ ಗೊತ್ತಿಲ್ಲವೆಂದೇ ಹೇಳಿದ. ಅವನ ಒಮ್ಮೊಮ್ಮೆ ಮೈ ಮೇಲೆ ಆವೇಶ ಬಂದಂತಾಗಿ ತನ್ನನ್ನು ತಾನೇ ಮರೆಯುತ್ತಿದ್ದ ನೆಂದೂ ಒಪ್ಪಿಕೊಂಡ. ಮುಖ್ಯಾಧಿಕಾರಿಗೆ ತನ್ನ ತನಿಖೆ ಉಪಯುಕ್ತವೆನಿಸಿತು ಮನೆಯನ್ನು ಶೋಧಿಸಲು ಸಿಬ್ಬಂದಿಗೆ ಆಜ್ಞೆ ಮಾಡಿದ.

ಡಾಕ್ಟರನ ಬಟ್ಟೆಯ ಕಪಾಟನ್ನು ತೆರೆದಾಗ ಅದರಲ್ಲಿ ರಕ್ತದಿಂದ ತೊಯ್ದ ಅನೇಕ ಬಟ್ಟೆಗಳು ಸಿಕ್ಕಿದವು. ಇವೆಲ್ಲ ನೋಡಿ ಡಾಕ್ಟರನೇ ಆಶ್ಚರ್ಯದಿಂದ ಹುಬ್ಬೇರಿಸಿದ. ಸಾಕಷ್ಟು ಹೊತ್ತಾದ ಮೇಲೆ ಡಾಕ್ಟರಿಗೆ ತಾನೇ 'ಜಾಕ್ ದ ರಿಪ್ಪರ್" ಎಂದು ಮನದಟ್ಟಾಯಿತು. ಅವನು ತಾನೇ ತಾನಾಗಿ ಪೋಲೀಸರಿಗೆ ವಶವಾಗಿ ಹೇಳಿದ—"ನನ್ನನ್ನು ಕೊಂದುಬಿಡಿ. ನಾನೊಬ್ಬ ನರಪಿಶಾಚಿ. ಇಷ್ಟೆಲ್ಲ ಗೊತ್ತಾದ ಮೇಲೆ ನಾನು ಬದುಕಿರಲಾರೆ."

ಪೋಲೀಸರು ಡಾಕ್ಟರನ್ನು ಜೊತೆಯಲ್ಲಿಯೆ ಕರೆದುಕೊಂಡು ಹೋದರು. 'ಜಾಕ್ ದ ರಿಪ್ಪರ್' ದಸ್ತಗಿರಿಯಾದನೆಂದು ಇಡೀ ನಗರದಲ್ಲೆಲ್ಲ ಕಿಚ್ಚಿನಂತೆ ಸುದ್ದಿ ಹರಡಿತು. ಅವನನ್ನು ನೇಣುಗಂಬಕ್ಕೇರಿಸಬೇಕೆಂದು ಜನ ಒತ್ತಾಯ ಮಾಡತೊಡಗಿದರು.

ರಾಬರ್ಟ್ ಜೇಮ್ಸ್ ಲೀಸನಿಗೆ ಜಾಕನನ್ನು ಹಿಡಿಯಲು ನೆರವಾದುದಕ್ಕಾಗಿ ಪುರಸ್ಕಾರ ನೀಡಲಾಯಿತು. ಅನಂತರ ವಿಶೇಷ ಆಯೋಗವೊಂದು ಸಭೆ ಸೇರಿ ಕೊಲೆಗಡುಕ ಡಾಕ್ಟರ್ ಒಬ್ಬ ಹುಚ್ಚನೆಂದು ಘೋಷಿಸಿದರು. ಹೆಂಗಸರ ಭಯಂಕರ ಕೊಲೆಗಡುಕ ಹುಚ್ಚಾಸ್ಪತ್ರೆ ಸೇರಿದ.

ಲಕ್ಷ್ಮೀನಾರಾಯಣ ಅರೋರಾ



ಭವಿಷ್ಯದ ಬಗ್ಗೆ ನೀನು ಯೋಚಿಸದೇ ಇರುವವನಾದರೆ ನಿನಗೆ ಭವಿಷ್ಯವೇ ಇರುವುದಿಲ್ಲ.

—ಗಾಲ್ಸವರ್ದಿ

ನಾಲ್ಕು ಸಂಗತಿಗಳು ಮರಳಿ ಬರುವುದಿಲ್ಲ. ಆಡಿದ ಮಾತು; ಬಿಟ್ಟ ಬಾಣ, ಕಳೆದ ಸಮಯ ಮತ್ತು ಜಾರಿದ ಅವಕಾಶ.

—ಎಮರ ಇಬ್ನ

ಯಾವುದೇ ಬಾಹ್ಯ ಕ್ರಿಯೆಗಿಂತ ಮೂಕ ಪ್ರಾರ್ಥನೆಯು ಅನೇಕ ಸಲ ಹೆಚ್ಚು ಸಮರ್ಥವು ಎಂದು ನನ್ನ ವಿಶ್ವಾಸ. ದೇಹಕ್ಕೆ ಅನ್ನವು ಅವಶ್ಯವಿದ್ದಂತೆ ಆತ್ಮನಿಗೆ ಪ್ರಾರ್ಥನೆ ಅವಶ್ಯ.

—ಮಹಾತ್ಮಾ ಗಾಂಧಿ

ಜೇನುನೊಣಗಳ ಭಾಷೆ

ಜೇನು ಎಂದಾಕ್ಷಣ ಎಂತಹವರ ಬಾಯಲ್ಲಿಯೂ ನೀರೂರುತ್ತದೆ. ಜೇನು ಒಂದು ನೊಣದಿಂದ ತಯಾರಿಸಲ್ಪಡುತ್ತದೆ, ಎಂಬುದು ಮಾತ್ರ ನಿಮಗೆ ತಿಳಿದಿರಬೇಕು. ಜೇನನ್ನು ತಯಾರಿಸಲು ಮಧುವನ್ನು ಅರಸುವ ಹಾಗೂ ಮಧು ದೊರೆಯುವ ಸ್ಥಳವನ್ನು ತಮ್ಮ ಸಹೋದ್ಯೋಗಿ ನೊಣಗಳಿಗೆ ತಿಳಿಸಲು ತಮ್ಮದೇ ಆದ ಸಾಂಕೇತಿಕ ಭಾಷೆಯನ್ನು ಹೊಂದಿವೆ ಎಂಬುದು ನಿಮಗೆ ತಿಳಿದಿರಲಿಕ್ಕಿಲ್ಲ. ಈ ಸಾಂಕೇತಿಕ ಭಾಷೆಯನ್ನು ಅಧ್ಯಯನ ಮಾಡಲು ಕಾರ್ಲ್ ಫಾನ್ ಫ್ರಿಷ್ ಎಂಬ ವಿಜ್ಞಾನಿ ೩೦ ವರ್ಷ ಕಾಲ ಪ್ರಯೋಗಗಳನ್ನು ನಡೆಸಿ ಜೇನುನೊಣಗಳು ವಿಶಿಷ್ಟ ನೃತ್ಯದ ಮೂಲಕ ಉಳಿದ ನೊಣಗಳಿಗೆ ಸುದ್ದಿಯನ್ನು ತಿಳಿಸುತ್ತವೆ ಎಂದು ಕಂಡು ಹಿಡಿದನು.

ಮಧು ದೊರೆಯುವ ಸ್ಥಳವು ೧೦೦ ಗಜಕ್ಕಿಂತ ಕಡಿಮೆ ದೂರದಲ್ಲಿದ್ದರೆ ಮಧುವನ್ನು ತುಂಬಿಕೊಂಡು ಬಂದ ಅನ್ವೇಷಕ ನೊಣವು ಗೂಡಿನ ಮೇಲ್ಭಾಗದಲ್ಲಿ ವೃತ್ತ ನೃತ್ಯವನ್ನು ಮಾಡುತ್ತವೆ. ಹೀಗೆ ವೃತ್ತ ನೃತ್ಯ ಮಾಡುವಾಗ ಒಂದು ಬಿಂದುವಿನಿಂದ ಒಂದು ಸುತ್ತು ಸುತ್ತಿ ನಂತರ ಅದರ ವಿರುದ್ಧ ದಿಕ್ಕಿನಲ್ಲಿ ಸುತ್ತುತ್ತದೆ.

ನೃತ್ಯದ ಗತಿ ಮಧುವಿನ ಸಾಂದ್ರತೆ ಹಾಗೂ ಮಾಧುರ್ಯವನ್ನು ತಿಳಿಸುತ್ತದೆ. ನೃತ್ಯ ಮಂದಗತಿಯಲ್ಲಿದ್ದರೆ ಮಧು ಉತ್ತಮವಾಗಿಲ್ಲವೆಂದೂ ತೀವ್ರಗತಿಯಲ್ಲಿದ್ದರೆ ಮಧು ಸಾಂದ್ರವಾಗಿದ್ದು ಬಹು ಮಧುರವಾಗಿದೆ ಎಂದೂ ಅರ್ಥ. ಇತರ ನೊಣಗಳು ಅನ್ವೇಷಕ ನೊಣವನ್ನು ತಮ್ಮ ಕುಡಿಮೀಸೆಗಳಿಂದ ಮುಟ್ಟಿ ಹಾಗೂ ವಾಸನೆಯನ್ನು ಹೀರುವುದರ ಮೂಲಕವೂ ಮಧುವಿನ ಸಾಂದ್ರತೆ ಮಾಧುರ್ಯಗಳನ್ನು ತಿಳಿದುಕೊಳ್ಳುತ್ತವೆ. ಈ ನೃತ್ಯದಿಂದ ಉದ್ರೇಕಗೊಂಡ ಅಥವಾ ಭಾಷೆಯನ್ನು ಅರ್ಥಮಾಡಿಕೊಂಡ ಉಳಿದ ನೊಣಗಳೂ ನೃತ್ಯದಲ್ಲಿ ಭಾಗವಹಿಸುತ್ತ ಅನ್ವೇಷಕ ನೊಣವನ್ನು ಹಿಂಬಾಲಿಸುತ್ತವೆ. ಗೂಡಿನ ಎಲ್ಲ ನೊಣಗಳಿಗೂ ಹೀಗೆ ಸಂದೇಶ ತಲುಪಿದಾಗ ಅನ್ವೇಷಕ ನೊಣವು ಮಧುವನ್ನು ಗೂಡಿನ ಮೇಲೆ ಸುರಿಸಿ ಪುನಃ ಮಧು ಸಂಗ್ರಹಣೆಗೆ ಚಲಿಸುತ್ತದೆ. ಉಳಿದ ನೊಣಗಳು ಅನ್ವೇಷಕ ನೊಣವನ್ನು ಹಿಂಬಾಲಿಸುತ್ತವೆ.

ಮಧು ತುಂಬಾ ದೂರದಲ್ಲಿದ್ದರೆ ಅನ್ವೇಷಕ ನೊಣವು ಬಾಲವಾಡಿಸುವ ನೃತ್ಯವನ್ನು ಮಾಡುತ್ತದೆ. ಈ ನೃತ್ಯದಲ್ಲಿ ಅನ್ವೇಷಕ ನೊಣವು ಒಮ್ಮೆ ಬಲಕ್ಕೆ ಅರ್ಧಚಂದ್ರಾಕಾರವಾಗಿ ಸುತ್ತಿ ನಂತರ ನೇರವಾಗಿ ಆರಂಭದ ಬಿಂದುವಿನವರೆಗೆ

ಚಲಿಸಿ ಬಳಿಕ ಎಡಭಾಗಕ್ಕೆ ಅರ್ಧ ಚಂದ್ರಾಕಾರವಾಗಿ ಸುತ್ತುತ್ತದೆ. ನೃತ್ಯ ಮಂದಗತಿಯಲ್ಲಿದ್ದರೆ ಮಧುವಿನ ತಾಣ ತುಂಬಾ ದೂರವೆಂದೂ ತ್ವರಿತಗತಿಯಲ್ಲಿದ್ದರೆ ಮಧು ಹತ್ತಿರದಲ್ಲಿದೆ (೧೦೦ ಗಜಗಳಿಗಿಂತ ಹೆಚ್ಚು) ಎಂದರ್ಥ. ಮಧು ೨೦೦ ಗಜ ದೂರದಲ್ಲಿದ್ದರೆ, ಪ್ರತಿ ೩೦ ಸೆಕೆಂಡಿಗೆ ೯ ರಿಂದ ೧೦ ಬಾರಿ, ೫೦೦೦ ಗಜ ದೂರದಲ್ಲಿದ್ದರೆ ಇಷ್ಟೇ ಸಮಯದಲ್ಲಿ ಕೇವಲ ೨ ರಿಂದ ೩ ಬಾರಿ ಸುತ್ತುತ್ತದೆ.

ಗೂಡಿನ ಮೇಲ್ಭಾಗದಿಂದ ಕೆಳಭಾಗಕ್ಕೆ ತನ್ನ ಹೊಟ್ಟೆಯನ್ನು ಬಾಗಿಸುತ್ತ ಕುಣಿದರೆ ಮಧು ಸೂರ್ಯನಿಗೆ ವಿರುದ್ಧ ದಿಕ್ಕಿನಲ್ಲಿಯೂ ಕೆಳಭಾಗದಿಂದ ಮೇಲ್ಭಾಗಕ್ಕೆ ಕುಣಿದರೆ ಸೂರ್ಯನ ದಿಕ್ಕಿನಲ್ಲಿಯೂ ಇದೆ ಎಂದರ್ಥ. ಒಂದು ಗೂಡಿನ ಕೆಳಭಾಗದಿಂದ ೬೦° ಕೋನದಲ್ಲಿ ಕುಣಿದರೆ ಸೂರ್ಯನ ಬಲಕ್ಕೆ, ಮೇಲ್ಭಾಗದಿಂದ ಕೆಳಭಾಗಕ್ಕೆ ಇದೇ ಕೋನದಲ್ಲಿ ಕುಣಿದರೆ ಸೂರ್ಯನ ಎಡಭಾಗಕ್ಕೆ ಚಲಿಸಬೇಕು ಎಂದು ತಿಳಿಸುತ್ತದೆ. ಗೂಡಿನ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಚಲಿಸಿದರೆ ಅದು ಮಧು ಇಂಥ ದಿಕ್ಕಿನಲ್ಲಿ ಇಷ್ಟು ದೂರ ಚಲಿಸಬೇಕು ಎಂದು ತಿಳಿಸುತ್ತದೆ.

ಆಲ್ಡ್ರಿಯನ್ ವೆನ್ನರ್ ಎಂಬ ಮಹಾಶಯನು ಅನ್ವೇಷಕ ನೊಣವು ಕೇವಲ ನೃತ್ಯದ ಮೂಲಕ, ಮಾತ್ರವಲ್ಲದೆ ಶಬ್ದಗಳ ಮೂಲಕವೂ ಸಂದೇಶವನ್ನು ಕಳಿಸುತ್ತದೆ ಎಂದು ಕಂಡು ಹಿಡಿದನು. ಬಾಲವಾಡಿಸುವ ನೃತ್ಯದೊಂದಿಗೆ ನೊಣವು ರೆಕ್ಕೆಯನ್ನು ಕಂಪಿಸುತ್ತದೆ. ಈ ಕಂಪನದೊಂದಿಗೆ ಶಬ್ದವು ಹೊರಡುತ್ತದೆ. ಕಂಪನವು ವೇಗವಾಗಿದ್ದರೆ ಮಧು ಹತ್ತಿರದಲ್ಲಿದೆ ಎಂದೂ ಕಂಪನ ನಿಧಾನವಾಗಿದ್ದರೆ ಮಧು ದೂರದಲ್ಲಿದೆಯೆಂದೂ ಸಹೋದ್ಯೋಗಿ ನೊಣಗಳು ಅರ್ಥ ಮಾಡಿಕೊಳ್ಳುತ್ತವೆ. ಈ ಶಬ್ದವನ್ನು ಕುಡಿಮೀಸೆಯ ಬುಡದಲ್ಲಿರುವ ಜಾನ್ಸ್ಟನ್ ಅಂಗದ ಮೂಲಕ ಗ್ರಹಿಸುತ್ತವೆ.

ಡಾ॥ ಎಸ್. ಎನ್. ಹೆಗಡೆ

ನಿನಗೆ ಅಪಕೀರ್ತಿಯನ್ನುಂಟುಮಾಡುವ, ದುರ್ಗತಿಯನ್ನುಂಟುಮಾಡುವ, ಪರಲೋಕಗತಿಯನ್ನು ಕೆಡಿಸುವ ಯಾವ ಕೆಲಸವನ್ನು ಎಂದೆಂದಿಗೂ ಮಾಡಬೇಡ.

—ಎಮರ್ಸನ್

ಕೊನೆಯ ಸಂಜೆ

ಆಫೀಸಿನಿಂದ ಹೊರ ಬಂದಾಗ ಶಶಿಕಾಂತನಿಗೆ ಸ್ವಾತಂತ್ರ್ಯ ಸಿಕ್ಕಂತೆ ಭಾಸವಾಯಿತು. ಇಷ್ಟೊಂದು ದೀರ್ಘಾವಧಿಯ ಬಳಿಕ ಇಂದು ಸ್ವಾತಂತ್ರ್ಯ ಲಭಿಸಿದೆ. ಆಫೀಸಿನ ಮುಖ್ಯ ದ್ವಾರ ಮೌನವಾಗಿ ನಿಂತಿದೆ. ಶಶಿಕಾಂತ ಉಳಿದವರಂತೆ ಅಲ್ಲೇ ತನ್ನ ಸರ್ವಸ್ವವನ್ನು ಅರ್ಪಿಸಿರುವ ತಾರುಣ್ಯ, ಆರೋಗ್ಯ, ಸುಖವಿಲಾಸ, ಸ್ವಚ್ಛಂದತೆ—ಎಲ್ಲವೂ ಇದಕ್ಕೆ ಬಲಿಯಾಗಿವೆ. ಆದರಿಂದು? ಇಂದಿನಿಂದ ಆತ ಸ್ವತಂತ್ರ. ಶಶಿಕಾಂತ ಬಿಡುಗಡೆಯ ನಿಟ್ಟುಸಿರಿಟ್ಟ.

ತಿರುವಿಗೆ ಬಂದು ಶಶಿಕಾಂತ ಒಮ್ಮೆ ಕೊನೆಯಸಲ ತಿರುಗಿ ಆಫೀಸಿನತ್ತ ದೃಷ್ಟಿ ಹರಿಸಿದ. ಕೆಂಬಣ್ಣದ ಆಫೀಸು . . . ಈ ಕೆಂಬಣ್ಣದ ಕಟ್ಟಡದಲ್ಲಿ ಕಪ್ಪು ಬಣ್ಣದ ಮನುಷ್ಯರು ದಿನವಿಡೀ ಪ್ರಾಣಿಗಳಂತೆ ಇರುತ್ತಾರೆ. ಆಫೀಸಿನ ಕುರ್ಚಿಯ ಮೇಲೆ ಕುಳಿತೇ ಎಷ್ಟೋ ಜನ ಎಚ್ಚರ ತಪ್ಪುವುದನ್ನು ಆತ ಕಂಡಿದ್ದ. ಎಷ್ಟೋ ಮಂದಿಗೆ ಹುಚ್ಚು ಹಿಡಿದಿತ್ತು. ಒಂದು ರೀತಿಯಿಂದ ಎಲ್ಲರೂ ಹುಚ್ಚರೇ. ಏನಿಲ್ಲದಿದ್ದರೂ ಫೈಲುಗಳಮೇಲೆ ಹಕ್ಕಿಯ ಚಿತ್ರವನ್ನಾದರೂ ಬಿಡಿಸುತ್ತಿದ್ದರು. ಆದರೆ ಶಶಿಕಾಂತ ಮಾತ್ರ ಈ ೪೨ ವರ್ಷಗಳಲ್ಲಿ ಬರೀ ಕೆಲಸ ಮಾಡಿರುವ. ಅದು ಶುದ್ಧ ಹಾಗೂ ನಿರ್ದೋಷ ಕೆಲಸ. 'ಹೆಡ್ ಕ್ಲರ್ಕ್ ಮನುಷ್ಯನಲ್ಲ-ಯಂತ್ರ' — ಎಂದು ಆಫೀಸಿನವರೇ ಆಗಾಗ ಹೇಳುತ್ತಿದ್ದರು.

ತಿರುವಿನ ಬೀಡಾ ಅಂಗಡಿಯ ಬಳಿ ತಲುಪುತ್ತಲೇ ಅಂಗಡಿಯಾತ ನಿಯಮದಂತೆ ಎರಡು ಬೀಡಾ ಕಟ್ಟಿಕೊಟ್ಟ. ಒಂದಿಷ್ಟು ಸುಣ್ಣ. . . ಒಂದಿಷ್ಟು ಜರ್ದಾ ಕೂಡ ಕೊಟ್ಟ. ಕಳೆದ ೪೨ ವರ್ಷಗಳಿಂದ ಕೊಡುತ್ತಿದ್ದಾನೆ. ತಪ್ಪಾಗುವಂತೆಯೇ ಇಲ್ಲ.

"ಲೆಕ್ಕ ಹೇಳಿರಿ"—ಎಂದ ಶಶಿಕಾಂತ.

ಅಂಗಡಿಯಾತನಿಗೆ ಅದರ ಚಿಂತೆಯಿಲ್ಲ. ೪೨ ವರ್ಷಗಳಿಂದ ಮುಂಜಾನೆ ಹಾಗೂ ಸಂಜೆ ಬೀಡಾ ಕೊಡುತ್ತಿದ್ದಾನೆ . . . ಲೆಕ್ಕಕ್ಕೇನೂ ಮೋಸವಿಲ್ಲ. ಸಂಬಳ ಬರುತ್ತಲೇ ಚುಕ್ತಾ . . . ಎಂದೂ ಬಾಕಿಯಿಲ್ಲ.

೧೯೬೬ರ ಮೇ ತಿಂಗಳ ನವನೀತ್ ಹಿಂದೀ ಮಾಸಪತ್ರಿಕೆಯ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ 'ವಿಮಲಮಿತ್ರ'ರ ಬಂಗಾಳೀ ಕಥೆಯ ಹಿಂದೀ ಅನುವಾದ 'ಅಖಿರೀ ಶಾಮ್' ಎಂಬುದರ ಸರಳಾನುವಾದ.

"ಇಂದೇಕೆ, ಬಾಬೂಜಿ? ಎಂದಾದರೂ ಬಿಡುವಿನ ವೇಳೆ ನೋಡುವೆ"—ಎಂದ ಅಂಗಡಿಗಾರ.

"ಇಲ್ಲ . . . ಈಗಲೇ ನೋಡು"—ಇಷ್ಟೇ ಹೇಳಿದ ಶಶಿಕಾಂತ.

ಜೀವನದಲ್ಲಿ ಎಂದೂ ಇತರರೆದುರು ಕೈಚಾಚಿಲ್ಲ. ಉದ್ದರಿ ಪಡೆಯುವ ಅಭ್ಯಾಸವೂ ಇಲ್ಲ. ಉದರಿ ಪಡೆಯಲು ಭಯವೆನಿಸುತ್ತದೆ. ಆಫೀಸಿನಲ್ಲಿ ಸಿಗುವ ಸಂಬಳಕ್ಕನುಗುಣವಾಗಿ ಖರ್ಚುಮಾಡಿದ. ಆದರೆ ಯಾರ ಬಾಕಿಯನ್ನೂ ಇಟ್ಟುಕೊಳ್ಳಲಿಲ್ಲ.

ಶಶಿಕಾಂತ ಪರ್ಸಿನಿಂದ ೧೧ ಆಣೆ (ಈಗಿನ ೬೯ ಪೈಸೆ) ತೆಗೆದು ಅಂಗಡಿಗಾರನಿಗೆ ಕೊಟ್ಟ ಮತ್ತು ಮುಂದರಿದ.

ಇಲ್ಲಿಂದಲೂ ಆಫೀಸು ಕಾಣಿಸುತ್ತಿತ್ತು. ಸಂಜೆಯಾಗಿತ್ತು. ಆಫೀಸಿನವರೆಲ್ಲ ೫ ಗಂಟೆಗೇ ಹೊರಟು ಹೋಗಿದ್ದರು. ಎಲ್ಲಿಂದಲೂ ಬೀಳ್ಕೊಂಡು ಕೆಲವು ಆಗತ್ಯದ ಕೆಲಸ ಮಾಡುತ್ತಮಾಡುತ್ತ ಶಶಿಕಾಂತನಿಗೆ ತಡವಾಗಿತ್ತು. ಆದರೆ ಇದೇನೂ ವಿಶೇಷವಲ್ಲ. ರಾತ್ರಿ ಆತ ನಿದ್ರಿಸಲೆಂದೇ ಮನೆಗೆ ಬರುತ್ತಿದ್ದ. ರಾತ್ರಿ ೮, ೯ ಅಥವಾ ೧೦ ಗಂಟೆಯವರೆಗೂ ಆಫೀಸಿನಲ್ಲಿರುವ ಕೆಲಸದ ನಡುವೆ ಗಡಿಯಾರ ನೋಡುವುದೂ ಮರೆತುಹೋಗುತ್ತಿತ್ತು. ಆಫೀಸಿನ ಪೇದೆ ಬಂದು—'ಬಾಬೂಜಿ'—ಎಂದಾಗಲೇ ಈ ಲೋಕದ ಪರಿವೆ. ಗಡಿಯಾರದತ್ತ ದೃಷ್ಟಿ ಹರಿದಾಗ ೧೦ ಗಂಟೆ!

ಈಗ ಏನಿದ್ದರೂ ಆತ ಮುಕ್ತ. ಯಾವುದೇ ಬಂಧನವಿಲ್ಲ . . . ಜವಾಬ್ದಾರಿಯಿಲ್ಲ . . . ಕಟ್ಟುಪಾಡಿಲ್ಲ . . . ಕೆಲಸದ ಹೊರೆಯಿಲ್ಲ . . .

ನಡೆಯುತ್ತಿದ್ದಾಗ, ದಾರಿಯ ಕಲ್ಲುಗಳೂ ತನಗೆ ಚಿರಪರಿಚಿತ ಎಂಬುದು ನೆನಪಾಯಿತು. ರಸ್ತೆಯ ಯಾವ ತಿರುವಿನಲ್ಲಿ ಯಾವ ಕಲ್ಲು ಒಡೆದಿದೆ—ಎಂಬುದನ್ನು ಆತ ಬಲ್ಲ. ಕೆಲ ವರ್ಷಗಳ ಹಿಂದೆ ಈ ಅಂಗಡಿಗಳೂ ಇಲ್ಲಿರಲಿಲ್ಲ. ಇದು ಬರೇ ಖಾಲಿ ಜಾಗವಾಗಿತ್ತು. ಎಷ್ಟೋ ಬಾರಿ ಆತ ಆ ಕಲ್ಲಿನಮೇಲೆ ಕುಳಿತು ವಿಶ್ರಾಂತಿ ಪಡೆದಿದ್ದ.

ಒಂದು ದಿನದ ಘಟನೆ. ಮಳೆಗಾಲದ ದಿನಗಳವು....೨ ದಿನಗಳಿಂದ ಒಂದೇ ಸಮನೆ ಜಡಿಮಳೆ ಸುರಿಯುತ್ತಿತ್ತು. ಧೋತ್ರವನ್ನು ಮೊಣಕಾಲು ಗಂಟಿನ ಮೇಲೇರಿಸಿ ಆಫೀಸಿಗೆ ಬರಬೇಕಾಗಿತ್ತು. ಬಂದು ಒದ್ದೆ ಅಂಗಿಯನ್ನು ಒಣಗಲು ಹಾಕುತ್ತಿದ್ದ. ಮನೆಗೆ ಮರಳುವಾಗ ಪುನಃ ಅದೇ ಅವಸ್ಥೆ....ಇಡೀ ದೇಹ ತೊಯ್ದು ಹೋಗುತ್ತಿತ್ತು. ಒದ್ದೆ ಅಂಗಿ ತೊಟ್ಟು ಸಾಹೇಬರ ಬಳಿಗೆ ಫೈಲುಗಳ

ನೊಯ್ಯಲು ಶಶಿಕಾಂತನಿಗೆ ನಾಚಿಕೆಯಾಗುತ್ತಿತ್ತು. ಹಾಗೆಂದು ಆಫೀಸಿನ ಕೆಲಸ ನಿಲ್ಲಿಸಲುಂಟೆ?

ಆ ದಿನ ರಸ್ತೆಯ ಮೇಲೂ ನೀರು ನಿಂತಿತ್ತು. ಕಷ್ಟಪಟ್ಟು ಶಶಿಕಾಂತ ಆಫೀಸಿಗೆ ತಲುಪಿದಾಗ ೧೧ ಗಂಟೆ. ಈ ನಡುವೆ ಸಾಹೇಬರು ೫ ಸಲ ಪೇದೆಯನ್ನು ಕಳುಹಿಸಿದ್ದರು. ಸಾಹೇಬರಿಗೇನು? ಕಾರಿನಲ್ಲಿ ಬಂದು, ಕುಳಿತು ಕೊಳ್ಳುವರು!

ಅಂದು ಬಂದ ಜನರೇ ಬಲು ಕಡಿಮೆ. ಮಧ್ಯಾಹ್ನದ ಬಿಡುವಿನ ಬಳಿಕ ಸಂದರ್ಭಸಾಧಿಸಿ ಒಬ್ಬೊಬ್ಬರಾಗಿ ಜಾರಿಬಿಟ್ಟರು. ಶಶಿಕಾಂತ ಮಾತ್ರ ತನ್ನ ಕೆಲಸದಲ್ಲಿ ಮುಳುಗಿದ್ದ, ಬಹುಹೊತ್ತಿನ ಬಳಿಕ ತಲೆಯೆತ್ತಿ ನೋಡಿದಾಗ ಯಾರೂ ಇರಲಿಲ್ಲ. ಫೈಲುಗಳ ರಾಶಿ ಮಾತ್ರ ಬಿದ್ದಿತ್ತು. ಮಳೆ ಕಡಿಮೆಯಾಗುತ್ತಲೇ ಹೋಗುವೆ—ಎಂದು ಯೋಚಿಸಿದ. ಆದರೆ ರಾತ್ರಿ ೯ ಗಂಟೆಗೆ-ಹಿಂದೆ ೨೦ ವರ್ಷಗಳಲ್ಲಿ ಬರದಂತಹ ಭಯಂಕರ ಮಳೆ ಬಂದುಬಿಟ್ಟಿತು.

ಆ ಬಳಿಕ ಆತ ಕಾವಲುಗಾರನ ಕೈಯ ರೊಟ್ಟಿ ತಿಂದು ಆಫೀಸಿನಲ್ಲೇ ರಾತ್ರಿ ಕಳೆಯಬೇಕಾಯಿತು. ರಾತ್ರಿ ೧೨ರ ವೇಳೆ ಆಫೀಸಿನಲ್ಲಿ ಯಾರೋ ನಡೆದಂತೆ ಭಾಸವಾಯಿತು. ರಾಶಿರಾಶಿ ಫೈಲುಗಳು ಬಿದ್ದಂತೆ ತೋರಿತು. ಯಾವುದೋ ಅಶರೀರಿಯ ಆತಂಕದಿಂದ ಶಶಿಕಾಂತ ಇರುಳಿಡೀ ಎಚ್ಚರತಪ್ಪಿದವನಂತೆ ಬಿದ್ದಿದ್ದ. ಆ ರಾತ್ರಿಯ ಘಟನೆ ಕಾವಲುಗಾರನನ್ನು ಬಿಟ್ಟು ಬೇರಾರಿಗೂ ತಿಳಿದಿಲ್ಲ. ಕೆಲಸದ ಇಷ್ಟೊಂದು ಅಮಲು ಶಶಿಕಾಂತನಿಗೆ ಅದೆಲ್ಲಿಂದ ಅಡಗಿತೋ ಯಾರು ಬಲ್ಲರು? ಆದರೆ ಈ ದೀರ್ಘಾವಧಿಯಲ್ಲಿ ದೊರೆತ ಭಡ್ತಿಯೆಂದರೆ ಕ್ಲಾರ್ಕ್‌ನಿಂದ ಹೆಡ್‌ಕ್ಲಾರ್ಕ್! ಶಶಿಕಾಂತ ಕತ್ತೆಯಂತೆ ದುಡಿದವನೇ ಹೊರತು, ಇತರರ ಕೈಕಾಲು ಕಟ್ಟಿ ಎತ್ತರಕ್ಕೇರಲಿಲ್ಲ. ಆ ಕಲೆ ಅವನಿಗೆ ಸಿದ್ಧಿಸಿಯೂ ಇರಲಿಲ್ಲ.

* * *

೭ ದಿನಗಳ ಹಿಂದೆ ಶಶಿಕಾಂತನಿಗೆ ಬೀಳ್ಕೊಡುಗೆ ನೀಡಲಾಯಿತು. ಪುಟ್ಟದೊಂದು ಮೀಟಿಂಗ್....೨-೩ ಭಾಷಣಗಳು....ಹೂಮಾಲೆ....ಮಂತ್ರಿ ಸಾಹೇಬರೊಂದಿಗೆ ನಗುತ್ತ ಕೈಕುಲುಕುವುದು....

ಸಾಹೇಬರೆಂದರು....“ನಿಮ್ಮ ಭವಿಷ್ಯ ಸುಖಮಯವಾಗಲೆಂದು ಹಾರೈಸುತ್ತೇನೆ. ಇಷ್ಟು ದಿನಗಳವರೆಗೆ ನೀವು ಮಾಡಿದ ಕೆಲಸ ಹಾಗೂ ನಿಮ್ಮ ನಡತೆ ಇತರರಿಗೆ ಉದಾಹರಣೆಯಾಗಿರುವುದು. ಜೀವನವಿಡೀ ನೀವು ಅವಿವಾಹಿತ

ರಾಗಿಯೇ ಇದ್ದೀರೆಂದು ಕೇಳಿರುವೆ. ರೈಲುಕಂಪೆನಿ ಕೃತಜ್ಞತಾಪೂರ್ವಕ ನಿಮ್ಮ ಸೇವೆಯನ್ನು ಸ್ಮರಿಸುವುದು...." ಈ ಕೃತಜ್ಞತೆಯ ರೂಪದಲ್ಲಿ ಅವನಿಗೆ ಒಂದು ಫ್ರೀ ಪಾಸ್ ನೀಡಲಾಯಿತು. ಬದುಕಿರುವವರೆಗೆ ಆತ ಅದನ್ನು ಬಳಸ ಬಲ್ಲ.

ಶಶಿಕಾಂತನ ದೇಹದಲ್ಲೇನೋ ಅವ್ಯಕ್ತ ವೇದನೆ ಉಂಟಾಯಿತು. ಒಮ್ಮೆಲೇ, ತಾನು ತುಂಬ ದುರ್ಬಲ ಎನ್ನಿಸಿತು.

ಶಶಿಕಾಂತ ಎದುರು–ದೂರ, ಬಲುದೂರ–ನೋಡತೊಡಗಿದ. ಅಂಗಡಿ, ಮನೆ, ಟ್ರಾಮ್, ಬಸ್ ಹಾಗೂ ರಸ್ತೆ ಬಿಟ್ಟು ಬಲುದೂರ ಶೂನ್ಯದತ್ತ ನಿಟ್ಟಿಸಿದ.... ಈಗ ಅವನಿಗಾರೂ ಆಸರೆಯಿಲ್ಲ....ತನ್ನವರೆಂದು ಹೇಳಲು ಯಾರಿದ್ದಾರೆ? ಮುಂದಿನ ದಿನಗಳನ್ನು ಅದೆಂತು ಕಳೆಯಬೇಕು? ಊರಿನ ಆ ಸಣ್ಣ ಮನೆಯ ನೆನಪಾಯಿತು. ಇಂದಿನ ರಾತ್ರಿ ಎಂತೋ ಕಳೆಯುವುದು....೨ ತಿಂಗಳು ಅಥವಾ ೨ ವರ್ಷ ಹೇಗೋ ಕಳೆದಾವು. ಆದರೆ ಮುಂದೆ? ಬೆಳಿಗ್ಗೆ ಜನ ಆಫೀಸಿಗೆ ಹೊರಟಾಗ ಶಶಿಕಾಂತ ತನ್ನ ಕೋಣೆಯಲ್ಲಿ ಏನುತಾನೆ ಮಾಡುವ? ಇಷ್ಟು ಕಾಲ ತಾನು ಕೆಲಸ ಮಾಡಿದ್ದ ಆ ರೈಲು ಕಂಪೆನಿಯೂ ತನ್ನನ್ನು ತೊರೆಯಿತು. ಅವನ ಪಾಲಿಗೆ ಅಲ್ಲಿ ಸ್ಥಾನವಿಲ್ಲ....ವಾಸ್ತವವಾಗಿ, ಹೊರದಬ್ಬುವುದೆಂದರೆ ಇದೇ ಅಲ್ಲವೆ? ಕಂಪೆನಿಯ ದೃಷ್ಟಿಯಲ್ಲಿ ಆತ ವ್ಯರ್ಥ....ಶಶಿಕಾಂತನಿಗೀಗ ತುಂಬ ಬೇಸರವಾಯಿತು. ಜೀವನಪೂರ್ತಿ ಈ ಕಂಪೆನಿಯ ಸೇವೆ ಮಾಡಿದ್ದ. ಪ್ರತಿಯಾಗಿ ಏನನ್ನೂ ಆಶಿಸಿರಲಿಲ್ಲ. ಸಿಕ್ಕಿದುದೇ ಮಹಾ ಪ್ರಸಾದವೆಂದು ತೃಪ್ತಿ ಪಡೆದ, ಒಮ್ಮೆಯೂ ಕಂಪೆನಿಗೆ ದ್ರೋಹ ಬಗೆಯಲಿಲ್ಲ....ಸೋಮಾರಿಯಾಗಿ ಕಾಲ ಕಳೆಯಲಿಲ್ಲ. ಕಂಪೆನಿಗೆ ಒಂದು ಕಾಸು ನಷ್ಟವಾದರೂ ಅದು ತನ್ನ ನಷ್ಟವೆಂದೇ ಬಗೆದ. ಅದೊಂದು ಅಮಲು....ಅಮಲಿನಲ್ಲೇ ದಿನಗಳುರುಳಿದವು. ಇಂದು ಆತ ಸ್ವತಂತ್ರ....ಆಃ! ಈ ಸ್ವಾತಂತ್ರ್ಯವನ್ನಾತ ಬಯಸಿದ್ದನೆ?

ದೊಡ್ಡ ಹಾಲಿನಲ್ಲಿ ಅವನ ಕುರ್ಚಿ ಈಗಲೂ ಅಲ್ಲೇ ಇದೆ. ಮುಂದೆ ಕೂಡ ಅಲ್ಲೇ ಇರುವುದು. ಆದರೆ ನಾಳೆಯಿಂದ ಅದರ ಮೇಲೆ ಭೂಪತಿಬಾಬೂ ಕುಳಿತು ಕೊಳ್ಳುವ. ಭೂಪತಿ ಒಳ್ಳೇ ಮನುಷ್ಯ. ಶಶಿಕಾಂತ ಒಮ್ಮೆ ಕಾಹಿಲೆಬಿದ್ದಾಗ ಆತ ಸ್ವತಃ ವೈದ್ಯರ ಬಳಿ ಹೋಗಿ ಔಷಧ ತಂದು ಕುಡಿಸಿದ್ದ. ಸೇವೆ, ಸ್ನೇಹ, ಪ್ರೇಮ—ಮೊದಲಾದವುಗಳ ಅಗತ್ಯ ಶಶಿಕಾಂತನಿಗೆ ಎಂದೂ ಉಂಟಾಗಿರಲಿಲ್ಲ. ಅದು ದೊರೆಯಲಿಲ್ಲ. ಅವುಗಳ ಬಗ್ಗೆ ಯೋಚಿಸಲು ಅವನಿಗೆ ಬಿಡುವೂ ಇಲ್ಲ.... ಕಂಪೆನಿ ತಾನು ಕೊಟ್ಟ ಸಂಬಳವನ್ನು ಬಡ್ಡಿ ಸಹಿತ ವಸೂಲು ಮಾಡಿದೆ.

ಬಹುಕಾಲದ ಹಿಂದೆ ಶಶಿಕಾಂತ ಪರಿವಾರದವರೊಡನೆ ಜಗಳವಾಡಿ ಮನೆ ಬಿಟ್ಟು ಓಡಿಬಂದಿದ್ದ. ನಾಗಪುರ, ರಾಯಪುರ. ಬಿಲಾಸಪುರ—ಮೊದಲಾದ ಊರುಗಳನ್ನೆಲ್ಲ ಸುತ್ತಿಸುತ್ತಿ ಕಟ್ಟಕಡೆಗೆ ಹೆಡ್ ಆಫೀಸ್ ಕಲಕತ್ತೆಗೆ ಬಂದಿದ್ದ. ಬಿಟ್ಟಮನೆಯನ್ನು ಆತ ಮತ್ತೆ ಸೇರಲಿಲ್ಲ. ಸಂಸಾರ ಕಟ್ಟಿಕೊಳ್ಳಲಿಲ್ಲ. ಕಂಪೆನಿ ಶಶಿಕಾಂತನಿಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಿದಾಗ, ಅವನಿಗೆ ತನ್ನ ಒಂಟಿತನದ ಅರಿವಾಯಿತು. ಆದರೀಗ ತುಂಬ ವಿಳಂಬವಾಗಿತ್ತು.

ಬರುವ ವೇಳೆ ಶಶಿಕಾಂತ ಪೇದೆಗೆ ಒಂದು ರೂಪಾಯಿ ಇನಾಮು ಕೊಟ್ಟಿದ್ದ. ಅವನಿಗೆ ತುಂಬ ಸಂತೋಷವಾಯಿತು. ಒಂದಿಷ್ಟು ದುಃಖವೂ ಆಗಿರಬಹುದು. ದಿನಾಲೂ ತಪ್ಪದೆ ಹತ್ತಿರದ 'ಮದ್ರಾಸಿ ಟಿಫಿನ್'ದಿಂದ ಚಹ ತಂದುಕೊಡುತ್ತಿದ್ದ ಎಂದೂ ಆ ಬಗ್ಗೆ ಹೇಳಬೇಕಿರಲಿಲ್ಲ. ಹೀಗೆಯೇ ೪೨ ವರ್ಷಗಳುರುಳಿದ್ದವು. ಪ್ರತಿದಿನ—ಪ್ರತಿಕ್ಷಣದ ಕೆಲಸವೂ ನಿಶ್ಚಿತವಿತ್ತು....ಶಶಿಕಾಂತ ಹೆಜ್ಜೆಹೆಜ್ಜೆಗೂ ಮುಂದರಿಯುತ್ತಿದ್ದ—ವಿನಾಶದತ್ತ?

ರಾತ್ರಿ ಎಷ್ಟೋ ಬಾರಿ ತನ್ನ ಏಕಾಕಿ ಮಂಚದ ಮೇಲೆ, ನಿದ್ರಿಸುತ್ತ, ಶಶಿಕಾಂತ ಒಮ್ಮೆಲೇ ಜೋರಾಗಿ—'ದ್ವಿಜಪದ....ದ್ವಿಜಪದ'—ಎಂದು ಒದರುತ್ತಿದ್ದ. ಅವನ ಪೇದೆಯ ಹೆಸರು ದ್ವಿಜಪದ, ಆತ ಇರದಿದ್ದರೆ ಸಾಹೇಬರಿಗೆ ಫೈಲ್ ಕೊಡಲು ಅದಾರು ಹೋಗಬೇಕು ! ಶಶಿಕಾಂತ ಕನಸಿನಲ್ಲೂ ಸಾಹೇಬರಿಗೆ ಫೈಲ್ ಕಳುಹಿಸುತ್ತಿದ್ದ !

....ಆ ವೇಳೆ ಆತನಿಗೆ ಬರೇ ೧೮ ವರ್ಷ. ಆ ವಯಸ್ಸಿನಲ್ಲೇ ಓಡಿ ಬಹು ದೂರದ ನಾಗಪುರಕ್ಕೆ ಬಂದಿದ್ದ. ಚಿಕ್ಕಪ್ಪನೊಡನೆ ಜಗಳಾಡಿದ್ದ....ಓ.... ಇನ್ನೊಂದು ವ್ಯಕ್ತಿಯ ನೆನಪಾಗುತ್ತಿದೆ.....

ಟ್ರಾಮ್.... ಬಸ್ .... ಜನಸಂದಣಿ .... ಕೋಲಾಹಲ .... ಇವೆಲ್ಲದರಿಂದ ತುಂಬಿದ್ದ ಈ ನಗರಿಯಲ್ಲೂ ಸಂಜೆಯ ಮಸಕುಬೆಳಕಿನಲ್ಲಿ ಬಹುದೂರದ ಆ ಮುಗ್ಧ ಮುಖ–ಕಣ್ಣೀರು ತುಂಬಿದ ಆ ಮುಖ ಕಣ್ಣೆದುರು ನಲಿಯುತ್ತಿದೆ.

ಆಗ ಚಿಕ್ಕಪ್ಪ ಹೀಗೆಂದಿದ್ದ:—"ಮದುವೆ....? ನೀನು ಮದುವೆಯಾಗುತ್ತೀಯಾ? ಆದರೆ ಆಕೆಗೇನು ತಿನ್ನಿಸುವಿ? ಅವಿವೇಕಿ! ಈ ವಯಸ್ಸಿನಲ್ಲಿ ನರಕದ ಗಾಳಿ ಬೀಸಿತೆ ನಿನಗೆ? ಹೂಂ....ಹೊರಟುಹೋಗು ಮನೆಯಿಂದ."

ಶಶಿಕಾಂತ ನರಕಕ್ಕೆ—ನಿಜಕ್ಕೂ ನರಕಕ್ಕೆ ಬಂದು ಸೇರಿದ್ದ, ಆದರೀಗ ಆ ಆಸರೆಯೂ ತಪ್ಪಿಹೋಗಿತ್ತು.

ಈ ಹಾದಿಯೆಂದೂ ಮುಗಿಯದೆಂದು ಶಶಿಕಾಂತನಿಗನ್ನಿಸಿತು. ಒಂದು

ಗೋಳಪೊಳಗೆ ಸುತ್ತುತ್ತಿದ್ದಂತೆ ಭಾಸವಾಯಿತು. ಅವನಿಗೀಗ ಏನೂ ಕೆಲಸ ವಿಲ್ಲ....ಉಳಿದವರೆಲ್ಲ ಕೆಲಸಮಾಡುತ್ತಿದ್ದಾರೆ....ಆತ ಒಬ್ಬನೇ ನಿರುದ್ಯೋಗಿ.... ಇಲ್ಲ....ನಾಳೆಯೇ ಆತ ಇಲ್ಲಿಂದ ಹೊರಟುಹೋಗುವ....ಮನಬಂದಂತೆ ಮನ ಬಂದಲ್ಲಿಗೆ ಹೋಗುವ....ಹೇಗೂ ಪುಕ್ಕಟೆ ಪಾಸ್ ಇದೆ....ರೈಲನ್ನೇರುವ.... ಮನಸ್ಸಾಗುವವರೆಗೆ ಸಾಗುತ್ತಿರುವ....ರೇಲ್ವೇ ಕಂಪೆನಿ ನೀಡಿದ ಸವಲತ್ತನ್ನು ಬಳಸಿಕೊಳ್ಳಬೇಡವೆ? ರೈಲು ಯಾತ್ರೆ....ಹಗಲಿರುಳೂ ನಿರಂತರ ಯಾತ್ರೆ.... ಆತ ಎಷ್ಟೋ ವರ್ಷಗಳಿಂದ ರೈಲನ್ನೇರಿಲ್ಲ....ರೈಲು ಕಂಪೆನಿಯಲ್ಲೇ ಉದ್ಯೋಗ ವಿದ್ದೂ ರೈಲನ್ನೇರಿಲ್ಲವೆಂದರೆ....?

ಮೇಜಿನ 'ಅರೆ' (ಡ್ರಾಯರ್)ಯ ಕೀಲಿಕೈ ತನ್ನ ಬಳಿಯೇ ಉಳಿಯಿತೆಂದು ಆಕಸ್ಮಾತ್ ಶಶಿಕಾಂತನಿಗೆ ನೆನಪಾಯಿತು. ನಿತ್ಯದಂತೆ ಆತ ಅದನ್ನು ಕಿಸೆಯಲ್ಲಿ ಇಟ್ಟು ತಂದಿದ್ದ. ನಾಳೆಯಿಂದ ಅದು ಭೂಪತಿಯ ಬಳಿ ಇರಬೇಕು. ಈ ಕೀಲಿಕೈ ಇಲ್ಲದೆ ಆತ ಕೆಲಸ ಮಾಡುವುದೆಂತು!

ಮತ್ತೆ ಅದೇ ದಾರಿ....೪೨ ವರ್ಷಗಳ ಪರಿಚಿತ ದಾರಿ....ನಾಳೆಯಿಂದ ಆಫೀಸಿಗೂ ಅವನಿಗೂ ಯಾವ ಸಂಬಂಧವೂ ಇರದು. ಹೀಗಾಗಿ ಕೀಲಿಕೈಯನ್ನು ಈಗಲೇ ಒಪ್ಪಿಸಬೇಕು....'ಭೂಪತಿ ಬರುತ್ತಲೇ ಅವರಿಗೆ ಕೊಡು'—ಎಂದು ಕಾವಲುಗಾರನಿಗೆ ಕೊಟ್ಟು ಬರುವ. ೪೨ ವರ್ಷ ಕೆಲಸ ಮಾಡಿದ ಬಳಿಕ ಕೊನೆಯ ದಿನ ಈ ತಪ್ಪು ನಡೆಯಬೇಕೆ?

ಆಫೀಸಿನಲ್ಲಿ ಕತ್ತಲು ತುಂಬಿತ್ತು....ಅಲ್ಲಲ್ಲಿ ಒಂದೆರಡು ಬಲ್ಬ್ ಉರಿಯು ತ್ತಿದ್ದುವು. ಶಶಿಕಾಂತ ಸದ್ದು ಮಾಡದೆ ಒಳ ನಡೆದ. ಕಾವಲುಗಾರ ಅಲ್ಲಿರಲಿಲ್ಲ. ಬಹುಶಃ ಹತ್ತಿರದಲ್ಲೇ ಎಲ್ಲೋ ಹೋಗಿರಬಹುದು.

ತನ್ನ ಅಭ್ಯಸ್ತ ವಾತಾವರಣಕ್ಕೆ ಬಂದಾಗ, ಶಶಿಕಾಂತನಿಗೆ ತುಂಬಾ ಸಮಾಧಾನವಾಯಿತು. ಇಲ್ಲಿ ಕಳೆದ ೪೨ ವರ್ಷಗಳಲ್ಲಿ ಅವನಿಗೆ ಏನನ್ನಾದರೂ ಹೇಳಲು ಯಾರಿಗೂ ಧೈರ್ಯವಾಗುತ್ತಿರಲಿಲ್ಲ.

ಶಶಿಕಾಂತ ತನ್ನ ಕುರ್ಚಿಯ ಮೇಲೆ ಕುಳಿತು ಚಿರಪರಿಚಿತ ಪುಟ್ಟದೀಪ ಉರಿಸಿದ. ಮತ್ತೆ, ಕಪಾಟು ಹಾಗೂ ಮೇಜಿನ ಅರೆಯ ಬಾಗಿಲು ತೆರೆದ. ನಾಳೆಯಿಂದ ಇದೆಲ್ಲವನ್ನು ಬಿಟ್ಟುಹೋಗಬೇಕು. ನಾಳೆ ಈ ಕಪಾಟನ್ನು ಬೇರೊಬ್ಬ ತೆರೆಯುವ....ಓ! ಇದು ಅನ್ಯಾಯ....ಈ ರೀತಿ ರಾತ್ರಿ ವೇಳೆ ಬರುವುದು ಅನಧಿಕೃತ ಪ್ರವೇಶವಲ್ಲವೆ?—ಎಂದೂ ಯೋಚಿಸಿದನಾತ.

ಸುತ್ತಲೂ ಫೈಲ್‌ಗಳು....ನೋಡಲು ಎಷ್ಟೊಂದು ಸೊಗಸು! ಈ ಸುಖ

ಶಶಿಕಾಂತನಿಗೆ ಬೇರೆಲ್ಲೂ ದೊರೆಯಲಿಲ್ಲ. ಕುಳಿತಲ್ಲೇ ಶಶಿಕಾಂತ ಮೇಜಿನ ಅರೆಯೊಳಗಿನ ಎಲ್ಲ ವಸ್ತುಗಳನ್ನೂ ತೆಗೆದು ಮೇಲಿಟ್ಟ. ಎಷ್ಟೋ ದಿನಗಳ ಎಷ್ಟೋ ನೆನಪುಗಳು ಆ ವಸ್ತುಗಳೊಡನೆ ಸೇರಿದ್ದವು....ಒಡೆದ ಟಿಫಿನ್ ಬಾಕ್ಸ್....ಟಿಂಚರ್ ಅಯೋಡಿನ್‌ನ ಒಂದು ಸೀಸೆ....ಸಣ್ಣದೊಂದು ಹರಿದ ಬಟ್ಟೆ....ಎಷ್ಟೋ ವಸ್ತುಗಳು ಅಲ್ಲಿದ್ದವು.

ವೇಳೆ ಎಷ್ಟಾಗಿರಬಹುದು? ಇತರ ದಿನಗಳಲ್ಲಿ ಆತ ಈ ಹೊತ್ತಿಗೂ ಕೆಲಸ ಮಾಡುತ್ತಿದ್ದ.

'ಅರೆ'ಯ ಕೆಳಭಾಗದಲ್ಲಿ ಒಂದು ಕವರು ಸಿಕ್ಕಿತು. ಶಶಿಕಾಂತನಿಗೇ ಬಂದ ಪತ್ರವಿದು....ಕವರನ್ನು ಬೆಳಕಿನ ಹತ್ತಿರ ಹಿಡಿದ. ಹೌದು; ಅವನಿಗೇ ಬಂದ ಕವರು....೩೫ ವರ್ಷಗಳ ಹಿಂದೆ ಬಂದಿದ್ದ ಪತ್ರ....ಅದನ್ನಾತ ಒಡೆದು ನೋಡಿರಲಿಲ್ಲ ಒಳಗಿಟ್ಟು ಸುಮ್ಮನಾಗಿದ್ದ. ಇದುವರೆಗೂ ಅದು ಸುರಕ್ಷಿತವಾಗಿಯೇ ಉಳಿದಿದೆಯಲ್ಲಾ—ಎಂದು ಆಶ್ಚರ್ಯವಾಯಿತು. ಆಫೀಸಿನಲ್ಲಿ ಕೆಲಸದ ಒತ್ತಡ ಬಹಳ ಇದ್ದುದರಿಂದ 'ಮತ್ತೆ ಓದೋಣ'—ಎಂದು ಒಳಗಿಟ್ಟಿದ್ದ. ಆಮೇಲೆ ಪೂರ್ತಿ ಮರೆತುಬಿಟ್ಟಿದ್ದ.

ಶಶಿಕಾಂತ ಬೇಗಬೇಗ ಕವರು ಒಡೆದ. ಕವರಿನ ಮೇಲೆ ಹಲವು ಅಂಚೆ ಕಚೇರಿಗಳ ಮುದ್ರೆಯಿತ್ತು. ಅಂದರೆ ಹಲವು ಊರುಗಳಿಗೆ ಹೋಗಿ ಕಟ್ಟಕಡೆಗೆ ಇಲ್ಲಿ ಬಂದಿತ್ತು.

"ಮಗು ಶಶಿಕಾಂತ,

ಕಳೆದ ಸಂಕ್ರಾಂತಿಯಂದು ನಿನ್ನ ಚಿಕ್ಕಪ್ಪ ಸ್ವರ್ಗಸ್ಥರಾದರು. ಈಗ ನಿನ್ನ ಜತೆ ತಿಲೋತ್ತಮೆಯ ಮದುವೆ ಮಾಡಲು ಯಾರೂ ಆಕ್ಷೇಪಿಸುವುದಿಲ್ಲ. ನನಗೂ ಈ ಸಂಬಂಧ ಒಪ್ಪಿಗೆ. ನೀನು ರಜೆ ಪಡೆದು ಬಂದುಬಿಡು. ಈ ತಿಂಗಳಲ್ಲೇ ಮದುವೆ ಮಾಡುವ ಇಚ್ಛೆಯಿದೆ."

ಶಶಿಕಾಂತ ಪತ್ರದ ದಿನಾಂಕ ನೋಡಿದ. ೩೫ ವರ್ಷಗಳ ಹಿಂದಿನ ಪತ್ರ....

ಶಶಿಕಾಂತ ಕುರ್ಚಿಯ ಮೇಲೆ ಕುಳಿತು ನಟ್ಟ ದೃಷ್ಟಿಯಿಂದ ಪತ್ರವನ್ನು ನೋಡತೊಡಗಿದ. ಒಮ್ಮೆಲೇ ಜೋರಾಗಿ ಚೀರಿಬಿಡುವ ಇಚ್ಛೆಯಾಯಿತು....ನಿಜಕ್ಕೂ ಆತ ಹುಚ್ಚನಾಗುವ.... ಮೋಸ.... ಭಯಂಕರ ಮೋಸ.... ವಿಧಿ ಅವನನ್ನು ಅದೆಷ್ಟು ಕ್ರೂರವಾಗಿ ಶಿಕ್ಷಿಸಿತು! ಪ್ರಪಂಚದ ಜನರು ಬಯಸುವ ಸುಖದಿಂದ ಆತ ವಂಚಿತನಾದ. ಇದು ವಿಧಿಯ ಆಣಕವಲ್ಲವೆ? ತನಗೆ ಮಾಡಿದ ದ್ರೋಹವಲ್ಲವೆ? ೪೦ ವರ್ಷಗಳಿಂದ ನಡೆಯುತ್ತಿದ್ದ ಸಂಚು ಇಂದು ಬಯ

ಲಾಯಿತು. ಓ! ಇಂದು ಅವನಿಗಾರೂ ಇಲ್ಲ. ಸ್ನೇಹಹಸ್ತ ಚಾಚುವವರಾಗಲೀ ಸಾಂತ್ವನ ನೀಡುವವರಾಗಲೀ ಇಲ್ಲ....

ಆ ಬಳಿಕ ಆ ಆಫೀಸಿನಲ್ಲೇ ಭಯಂಕರ ಸಾಗರದ ಅಲೆಗಳು ಭೋರ್ಗರೆಯ ತೊಡಗಿದವು. ಭೂಮಿಯಿಂದ ದೂರ ಸ್ವಪ್ನಲೋಕದಲ್ಲಿ ಯಾರೋ ತನ್ನನ್ನು ಕರೆಯುತ್ತಿರುವಂತೆ ಭಾಸವಾಯಿತು. ಹೋಯಿತು.... ಸರ್ವಸ್ವವೂ ಹೋಯಿತು. ಎಂದೆನ್ನಿಸಿತು.

ಆಃ! ಇದೇನಾಯಿತು? ಪ್ರಪಂಚದ ಒಂದು ಮೂಲೆಯಲ್ಲಿ ಯಾರೋ ಒಂದು ದೀಪ ಹಚ್ಚಿದ್ದರು. ಆದರೆ ಅದರಿಂದ ಬೆಳಕಿನ ಬದಲು ಬರೀ ಹೊಗೆ ಹೊರಡುತ್ತಿದೆ....

ಶಶಿಕಾಂತನ ತಲೆಯಲ್ಲಿ ಏನೇನೋ ವಿಚಾರತರಂಗಗಳೆದ್ದವು. ಮಿಲನ–ವಿಯೋಗ, ಜೀವನ ಮರಣ, ಆಶೆ ನಿರಾಶೆ.... ಈ ಎಲ್ಲ ಭಾವನೆಗಳೂ ಒಮ್ಮೆಲೇ ಅವನೆದುರು ಕುಣಿದಾಡಿದವು.... ಮತ್ತೆ ಎಲ್ಲವೂ ಮುನಿದಂತೆ, ಅಳಿದಂತೆ, ಅವನಿಗನ್ನಿಸಿತು.

* * *

ಮರುದಿನ ಎಲ್ಲರಿಗಿಂತ ಮೊದಲು ಕಸಗುಡಿಸುವ ಆಳು ಕೋಣೆಯೊಳಗೆ ಬಂದು ಈ ದೃಶ್ಯ ನೋಡಿದ. ಆಮೇಲೆ ಒಬ್ಬೊಬ್ಬರಾಗಿ ಕ್ಲಾರ್ಕ್, ಭೂಪತಿ, ದ್ವಿಜಪದ ಎಲ್ಲರೂ ಬಂದರು.

ಶಶಿಕಾಂತನನ್ನು ಕಂಡು ಅವರೆಲ್ಲ ಅವಾಕ್ಕಾದರು. ಆತ ಕುರ್ಚಿಯ ಮೇಲೆ ಕುಳಿತುದನ್ನು ಕಂಡರವರು. ಮೇಜಿನ ಮೇಲೆ ಫೈಲುಗಳ ರಾಶಿ. ಶಶಿಕಾಂತ ಒಂದೇ ಸಮನೆ ಕೆಲಸ ಮಾಡುತ್ತಿದ್ದಾನೆ.... ಆದರೆ ಈ ಶಶಿಕಾಂತನೊಡನೆ ಮಾತಾಡಲು ಯಾರಿಗೂ ಧೈರ್ಯವಿಲ್ಲ. ಅವನ ಮೋರೆ ಕಾಣುತ್ತಲೇ ಅವನಿಗೆ ಹುಚ್ಚು ಹಿಡಿದಿದೆಯೆಂದು ಎಲ್ಲರಿಗೂ ಮನದಟ್ಟಾಯಿತು.

ಬಿ. ಸುಬ್ರಾಯ ಅಡಿಗ

———

ಪಾರಮಾರ್ಥಿಕರಾದ ಮಹನೀಯರ ದೇಶಾಭಿಮಾನವೇ ಸುಜನಸಮ್ಮತ ವಾದುದು. ಕೀರ್ತಿಪ್ರತಿಷ್ಠೆಗಳ ಸಂಪಾದನಾಪೇಕ್ಷೆಯಿಂದ ದೇಶಾಭಿಮಾನದ ಮೊಗವಾಡವನ್ನು ಧರಿಸಿದವರು ದೇಶದ್ರೋಹಿಗಳಲ್ಲದೆ, ದೇಶಾಭಿಮಾನಿ ಗಳಾಗಲಾರರು.

—ನೇತಾಜಿ

ಕನಸುಗಳ ನಗರ—"ಬೊಂಬಾಯಿ"

"ವಿಪರೀತ ಜನಜಂಗುಳಿಯೊಂದಿಗೇ ಕೊಳಕನ್ನೂ ತುಂಬಿಕೊಂಡಿರುವ ಬೊಂಬಾಯಿ ಎಲ್ಲರಿಗೂ ಒಂದಲ್ಲ ಒಂದು ವಿಧದಲ್ಲಿ ಬದುಕುವ ಬಗ್ಗೆ ಭ್ರಮೆ ಹುಟ್ಟಿಸುತ್ತದೆ."

ಬೊಂಬಾಯಿ ನಗರ ವಾಸಿಗಳಿಗೆ ಯಾವದೇ ತೆರನಾದ ರಿಯಾಯಿತಿಯನ್ನೂ ತೋರಿಸದೆ ತನ್ನೊಳಗೆ ಸೆಳೆದುಕೊಳ್ಳುತ್ತದೆ. ಒಂದು ಮುಂಜಾನೆ, ತುಂತುರು ಇಬ್ಬನಿ ಬೀಳುತ್ತಿದ್ದಾಗ ನಾನಿಲ್ಲಿಗೆ ಬಂದಿಳಿದೆ. ಸಾಗರದ ಬೂದು ಬಣ್ಣದ ಅಲೆಗಳ ಕಿರಣಗಳು ವಿಮಾನ ನಿಲ್ದಾಣದ ಗಾಜಿನ ಬಾಗಿಲುಗಳಿಗೆ ಎಸೆಯುತ್ತಿದ್ದವು. ಯಾಕೆ ಮತ್ತು ಯಾರಿಗೆ ಅವು ಕಾಯುತ್ತಿದ್ದವು? ಅವು ಏನನ್ನು ನಿರೀಕ್ಷಿಸುತ್ತಿದ್ದವು? ಎನ್ನುವುದು ಅರ್ಥವಾಗದೆ, ಆ ಸಂದರ್ಭದ ಹಿನ್ನೆಲೆಯಲ್ಲಿ ಅನಿಶ್ಚಿತತೆಯಿಂದ ಕೂಡಿದ ಭಯ ನನ್ನನ್ನು ಕಾಡಿತು.

ಆ ಬೆಳಗಿನ ಹಿತಕರ ವಾತಾವರಣದಲ್ಲಿ ಪಟ್ಟಣದ ಹೊರವಲಯವನ್ನು ಸುತ್ತಿದಂತೆಲ್ಲ ಕಂಡದ್ದು ಅದೇ ಹಳೆಯ ಮತ್ತು ಕಪ್ಪಾಗುತ್ತಿರುವ ವಾಸಗೃಹಗಳು, ಹಾದಿಯ ಇಕ್ಕೆಲಗಳಲ್ಲಿ ಅರೆನಗ್ನ ದೇಹ ಪ್ರದರ್ಶನ ನೀಡಲು ಹಚ್ಚಿದ ಚಲನಚಿತ್ರ ಭಿತ್ತಿಪತ್ರಗಳು, ಅತಿಯಾಗಿ ಅಲಂಕರಿಸಿಕೊಂಡು ತಿರುಗುತ್ತಿರುವ ಹೆಂಗಸರು, ಸುತ್ತೆಲ್ಲ ಹಬ್ಬಿದ ಅಂಗಡಿಯ ಸಾಲು—ಅದೇ ಜನಜಂಗುಳಿಯ ನಗರ. ರಸ್ತೆದೀಪದ ಬುಡದಲ್ಲಿ ಹೊಟ್ಟೆಪಾಡಿಗಾಗಿ ಹಾಡುತ್ತ ಬೇಡುವ ಭಿಕ್ಷುಕರು.

ಬೊಂಬಾಯಿಯ ರಹಸ್ಯ ಸುಲಭವಾಗಿ ಭೇದಿಸುವಂತಹವಲ್ಲ. ಇದಕ್ಕೆ ಬಹುಶಃ ಬಹುಕಾಲ ಬೇಕಾದೀತು! ಇಲ್ಲಿಯ ಆ ಹಳೆಯ ಮನೆಗಳು ಸಾಮಾನ್ಯವಾಗಿ ಮಧ್ಯಮವರ್ಗಕ್ಕೆ ಸೇರಿದವರದ್ದು. ಹೆಚ್ಚಾಗಿ ಗುಮಾಸ್ತೆ ಕೆಲಸಕ್ಕೆ ಸೇರಿ ತಿಂಗಳಿಗೆ ರೂ. ೩೦೦ ರಿಂದ ೪೦೦ ಸಂಪಾದಿಸುವವರು ಇಲ್ಲಿ ವಾಸಿಸುತ್ತಾರೆ.

ವಿಮೋಚನೆ: ಬೊಂಬಾಯಿಯ ಕುರಿತಾದ ಭಯಾನಕ ಕಲ್ಪನೆ ಮಸುಕಾದಾಗ ಅದನ್ನು ಇನ್ನೊಂದು ದೃಷ್ಟಿಯಿಂದಲೂ ನೋಡಬಹುದು. ಇಲ್ಲಿಯ ರಸ್ತೆಗಳು ಅಂಕು–ಡೊಂಕಾಗಿದ್ದರೂ ಸುಂದರವಾಗಿವೆ. ಈ ದೃಶ್ಯವನ್ನು ಮೆರೀನ್ ಡ್ರೈವ್‌ದಿಂದ ನೋಡಬಹುದು. ನಗರದ ತೀರ ಅರಬ್ಬಿ ಸಮುದ್ರದ

೧೯೮೩ರ ಸೆಪ್ಟೆಂಬರ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟಗೊಂಡ ಶಿವ ನೈಪಾಲ್ ಅವರ "ಬಾಂಬೆ—ಸಿಟಿ ಆಫ್ ಡ್ರೀಮ್ಸ್" ಲೇಖನದ ಅನುವಾದ.

ಹೊಡೆತದಿಂದ ಸ್ನಾನಮಾಡುತ್ತಿರುವ ದೃಶ್ಯ ಆತ್ಯಾಕರ್ಷಕವಾಗಿದ್ದು ಪ್ರವಾಸಿಗಳನ್ನು ಮರುಳುಗೊಳಿಸಬಲ್ಲದು.

ಬೊಂಬಾಯಿ ಸಿನೇಮಾ ಜಗತ್ತಿನ ಬಗ್ಗೆ ಭ್ರಮೆಯನ್ನುಂಟುಮಾಡುತ್ತದೆ. ಇಲ್ಲಿ ಭಾರತದ ಚಲನಚಿತ್ರ ಉದ್ದಿಮೆ, ವರ್ಷಕ್ಕೆ ಸುಮಾರು ನೂರೈವತ್ತು ಚಲನಚಿತ್ರಗಳನ್ನು ನಿರ್ಮಿಸುತ್ತದೆ. ಸಿರಿವಂತರ ಸುಂದರ ಯುವತಿಯರ ಮತ್ತು ಮುಗ್ಧ ಗ್ರಾಮೀಣ ಜನರ ಆಸೆ–ಆಕಾಂಕ್ಷೆಗಳನ್ನಿದು ಸೃಷ್ಟಿಸುತ್ತದೆ.

ಬೊಂಬಾಯಿಯ ಕುರಿತು ವಿಪರೀತ ಅಭಿಮಾನ ಉಳ್ಳವರು ಇದೊಂದು "ಭಾರತದ ನಿಜವಾದ ನಗರ" ಎನ್ನುತ್ತಾರೆ. ದೆಹಲಿ ಪಂಜಾಬಿಗಳಿಂದ, ಕಲ್ಕತ್ತಾ ಬಂಗಾಳಿಗಳಿಂದ ಮತ್ತು ಮದ್ರಾಸ್ ಸಂಪ್ರದಾಯಸ್ಥ ದಕ್ಷಿಣ ಭಾರತದ ಹಿಂದುಗಳಿಂದಲೂ ಪ್ರಾಮುಖ್ಯತೆ ಪಡೆದಿದೆ. ಆದರೆ ಬೊಂಬಾಯಿ ಯಾವ ಒಂದು ನಿರ್ದಿಷ್ಟ ಜಾತಿಯವರಿಂದಲೂ ಪ್ರಾಮುಖ್ಯತೆ ಪಡೆದಿಲ್ಲ. ಇದು ಎಲ್ಲ ಜಾತಿಯವರ ಪ್ರಾಮುಖ್ಯವನ್ನೂ ಸಮಷ್ಟಿಯುತವಾಗಿ ಕಾಯ್ದುಕೊಂಡಿದೆ. ಹಿಂದು, ಮುಸ್ಲಿಂ, ಪಾರ್ಸಿ, ಬ್ರಿಟಿಷ್—ಈ ಎಲ್ಲರೂ ಇದರ ನಿರ್ಮಾಣದ ಪ್ರಕ್ರಿಯೆಯಲ್ಲಿ ಪಾಲುದಾರರಾಗಿದ್ದಾರೆ.

ಯಾವನಾದರೂ ನಿಮಗೆ "ಬೊಂಬಾಯಿ ತನ್ನ ಮನೆ" ಎಂದರೆ ನಾನು ಧೈರ್ಯವಾಗಿ ಹೇಳಬಲ್ಲೆ—ಆತ "ನೆಲೆಯಿಲ್ಲದವನು". ಇಲ್ಲಿನವರಿಗೆ ತಮ್ಮ ಮೂಲದ ಕೊರತೆ ಉಂಟು. ಅವರ ಪರಂಪರೆಯನ್ನು ಒತ್ತಾಯಪೂರ್ವಕವಾಗಿ ಅಳಿಸುತ್ತಲೇ, ಸ್ಥಳೀಯಾಧಿಕಾರ ತತ್ತ್ವ, ಕುಟುಂಬ, ಜಾತಿ, ಧರ್ಮ, ಪ್ರದೇಶ—ಈ ಎಲ್ಲ ಭಾವನೆಗಳನ್ನೂ ಅಳಿಸುತ್ತಿದೆಯಲ್ಲದೇ, ವ್ಯಕ್ತಿಯ ವ್ಯಕ್ತಿತ್ವಕ್ಕೂ ಕೊಡಲಿಯೇಟನ್ನು ಹಾಕುತ್ತಿದೆ. ಈ ದೃಷ್ಟಿಯಿಂದ ಬೊಂಬಾಯಿ ವಿಮೋಚನೆಯನ್ನು ನೀಡುತ್ತದೆ.

ಮಲಬಾರ್ ಬೆಟ್ಟದ ಮೇಲೆ ಒಂದು ಸಾರ್ವಜನಿಕ ಉದ್ಯಾನವನ ಉಂಟು. ಎತ್ತರದಲ್ಲಿ ಸೊಂಪಾಗಿ ಬೆಳೆಸಿದ ಹೂಗಳು, ಸರಿಯಾಗಿ ತೆಂಡೆ ಕಟ್ಟಿರುವ ಹುಲ್ಲು, ಜುಳು ಜುಳು ಹರಿವ ಝರಿ, ಎಲ್ಲ ನಯನಮನೋಹರವಾಗಿದೆ. ಜನಜಂಗುಳಿಯಿಂದ, ವಾಸ್ತವ್ಯದ ಮನೆಗಳಿಂದ ಈ ನಗರ ಗಿಟುಗಿರಿದಿದ್ದಾಗ್ಯೂ, ನಗರಸಭೆ ಇಂಥ ಉದ್ಯಾನ ವನವನ್ನು ನಿರ್ಮಾಣ ಮಾಡಿರುವುದು ನಿಜಕ್ಕೂ ಒಂದು ಸೋಜಿಗ! ಈ ಉದ್ಯಾನವನವನ್ನು ಭೇಟಿಮಾಡುವುದು ಇನ್ನೊಂದು ದೃಷ್ಟಿಯಿಂದ ಒಳ್ಳೆಯದು. ಇದು ಎತ್ತರದಲ್ಲಿ ಇರುವುದರಿಂದ ಬೊಂಬಾಯಿಯ ಸಂಕ್ಷಿಪ್ತ ಸಾರಾಂಶವನ್ನು ದೃಷ್ಟಿಗೆ ಒದಗಿಸಿಕೊಡುತ್ತದೆ. ಪಟ್ಟಣದ ಪಶ್ಚಿಮಕ್ಕೆ

ಸಾಗರ ಮತ್ತು ವಾಸ್ತವ್ಯದ ಮನೆಗಳು–ನಿಜಕ್ಕೂ ಕನಸನ್ನು ಸೃಷ್ಟಿಸುತ್ತವೆ. ಪೂರ್ವಕ್ಕೆ ಇಕ್ಕಟ್ಟಿನಿಂದ ನರಳುತ್ತಿರುವ ಗುಡಿಸಲುಗಳ ಸಾಲು. ಇದರೊಟ್ಟಿಗೆ ಬಟ್ಟೆಗಳನ್ನುತ್ಪಾದಿಸುವ ಬೃಹತ್ ಗಿರಣಿಗಳು. ಅವು ಹೊರಹಾಕುವ ಇಂಗಾಲದ ಗಾಳಿ ವಾಯುಮಾಲಿನ್ಯಕ್ಕೆ ಕಾರಣವಾಗಿದೆ. ಈ ನಗರ ಯಾಂತ್ರಿಕ ಮತ್ತು ಪರಿಶ್ರಮಕ್ಕೆ ಹೆಸರಾಗಿದೆ. ಅಲ್ಲಿಯದು ಯಾಂತ್ರಿಕ ಬದುಕು.

ಈ ಗಿರಣಿಗಳು ಕೈಗಾರಿಕಾ ಉನ್ನತಿಗೆ ಸಾಕ್ಷಿಯಾಗಿವೆ ಮತ್ತು ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಿಂದ ಜನಸಂಖ್ಯಾ ಏರಿಕೆಗೂ ಕಾರಣವಾಗಿದೆ. ಅನಂತರದಲ್ಲೇ ನಗರ ನಿಧಾನಗತಿಯಲ್ಲಿ ಬೆಳೆಯಲು ಪ್ರಾರಂಭಿಸಿದ್ದು. ಈ ನಗರದ ಬೆಳವಣಿಗೆಗೆ ಮೊದಲು ಯೂರೋಪಿನಿಂದ ಬಂದ ಪೋರ್ಚುಗೀಸ್ ಪ್ರಭುಗಳು ಅಷ್ಟಾಗಿ ಕಾರಣರಾಗಿಲ್ಲ. ಆದರೆ ಅನಂತರ ೧೬೬೧ರಲ್ಲಿ ಇಂಗ್ಲೆಂಡಿನಿಂದ ಬಂದ ಚಾರ್ಲ್ಸ್ II ನಿಗೆ ಬ್ರಾಂಗಾಯಾದ ಕ್ಯಾಥರೀನ್ (ಪೋರ್ಚುಗೀಸ್ ವಧು) ಕಡೆಯಿಂದ ವರದಕ್ಷಿಣೆಯಾಗಿ ಈ ಪ್ರದೇಶ ಸಂದಿತು. ಏಳು ವರ್ಷದ ಅನಂತರ, ವರ್ಷಕ್ಕೆ ಹತ್ತು ಪೌಂಡ್ ಬಾಡಿಗೆಯಂತೆ ಈತ ಇದನ್ನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ಈ ಪ್ರದೇಶವನ್ನು ನೀಡಿದ. ಲಾಭದಾಯಕ ಮತ್ತು ಕಿರುಕುಳ ರಹಿತ ವ್ಯಾಪಾರವೇ ಕಂಪನಿಯ ಮೂಲೋದ್ದೇಶವಾಗಿತ್ತು.

ಅಸ್ತಿತ್ವಕ್ಕಾಗಿ ಒದ್ದಾಟ: ಹದಿನೇಳನೇ ಶತಮಾನದ ಅಂತ್ಯದಲ್ಲೇ ಬೊಂಬಾಯಿ ತನ್ನದೇ ಆದ ಲಕ್ಷಣಗಳನ್ನು ಬೆಳೆಸಿಕೊಂಡಿತ್ತೆಂಬುದನ್ನು ಇವತ್ತಿಗೂ ನಾವು ಗುರುತಿಸಬಹುದು—ಆ ಕಾಲದಲ್ಲಿ ಅಲ್ಲಿ ಬದುಕಿದ್ದ ಪ್ರತಿಯೊಬ್ಬನೂ ಒಂದಲ್ಲ ಒಂದು ಮಟ್ಟದಲ್ಲಿ ಸಾಹಸಿಯಾಗಿದ್ದ. ಜನರು ಇಲ್ಲಿಗೆ ತಮ್ಮ ಜೀವನೋಪಾಯವನ್ನು ಕಂಡುಕೊಳ್ಳಲು ಬರುತ್ತಿದ್ದರು. ಆದ್ದರಿಂದಲೇ ಮೂರುನೂರು ವರ್ಷದ ಅನಂತರವೂ ಇಂತಹವರು ಇಲ್ಲಿಗೆ ಬಂದು ಸೇರುತ್ತಲೇ ಇದ್ದಾರೆ.

ದಿನವೊಂದಕ್ಕೆ ಇಲ್ಲಿಗೆ ವಲಸೆ ಬರುವವರ ಸಂಖ್ಯೆ ಮೂರುನೂರು. ಹತ್ತು ವರ್ಷದ ಕೆಳಗೆ ಇಲ್ಲಿನ ಜನಸಂಖ್ಯೆ ಆರು ಮಿಲಿಯನ್ ಇತ್ತು. ಇಂದು ಇದು ಎಂಟು ಮಿಲಿಯನ್‌ಗಿಂತಲೂ ಅಧಿಕ. ಇದೇ ರೀತಿಯಲ್ಲಿ ಜನಸಂಖ್ಯೆ ಏರುತ್ತಿದ್ದರೆ ಬರುವ ೨೦೦೦ನೇ ಇಸವಿಯಲ್ಲಿ ಬಹುಶಃ ೧೪ರಿಂದ ೧೫ ಮಿಲಿಯನ್ ಆಗಬಹುದು. ರಾತ್ರಿಯಲ್ಲಿ ಕನಿಷ್ಟಪಕ್ಷ ೧.೨ ಮಿಲಿಯನ್ ಜನರು ರಸ್ತೆಯ ಬದಿಗಳಲ್ಲಿ ಮಲಗಿರುವುದನ್ನು ನೋಡಬಹುದು.

ಈ ನಗರ ಕಿರಿದಾದ ನಡುಗಡ್ಡೆಗಳ ಶ್ರೇಣಿಯಿಂದ ಕೂಡಿದೆ. ನಗರದ ಹೊರ ವಲಯ ಉತ್ತರದೆಡೆ ಅಸಂಬದ್ಧವಾಗಿ ಹರಡಿಕೊಂಡಿದೆ. ಇಲ್ಲಿಯ ಜನರಿಗೆ ತಾವು ಕೆಲಸಮಾಡುವ ಸ್ಥಳಗಳಿಗೆ ಹೋಗಿಬರಲು ದಿನದಲ್ಲಿ ನಾಲ್ಕು ಅಥವಾ ನಾಲ್ಕಕ್ಕಿಂತ ಹೆಚ್ಚು ಘಂಟೆ ವ್ಯಯವಾಗುತ್ತದೆ. ದಿನದ ವಿಪರೀತ ಚಟುವಟಿಕೆಗಳು ನಡೆಯುವ ಸಮಯದಲ್ಲಿ, ವಿಪರೀತ ಜನಸಂದಣಿಯಿಂದ ಜನರು ದಿಕ್ಕೆಟ್ಟವರಂತೆ ಅತ್ತಿಂದಿತ್ತ-ಇತ್ತಿಂದತ್ತ ಓಡಾಡುವ ವಿಕ್ಟೋರಿಯನ್ ಟರ್ಮಿನಸ್ ಮತ್ತು ಚರ್ಚ್‌ಗೇಟ್ ನಿಲ್ದಾಣ ನೋಡಲು ಭಯಾನಕವಾಗಿರುತ್ತವೆ. ನಗರದ ಹೊರವಲಯಕ್ಕೆ ಹೋಗಿ ಬರುವ ರೈಲಿನಲ್ಲಿ ಸರಾಸರಿಗಿಂತ ಎರಡುಪಟ್ಟು ಹೆಚ್ಚಾಗಿ ಜನರನ್ನು ತುರುಕಿಕೊಂಡಿರುತ್ತಾರೆ. ಪ್ರಯಾಣಿಕರಲ್ಲಿ ಕೆಲವರು ಹಿಡಿತ ತಪ್ಪಿ ಹಳಿಗಳ ಮೇಲೆ ಬೀಳುವುದೂ ಉಂಟು. ಇನ್ನು ಕೆಲವರು ವಿದ್ಯುತ್ ಕಂಬಗಳಿಗೆ ಅಪ್ಪಳಿಸಿದ್ದೂ ಉಂಟು. ಇದೆಲ್ಲದರ ಪರಿಣಾಮವಾಗಿ, ದಿನಕ್ಕೆ ಸರಾಸರಿ ಮೂರು ನಾಲ್ಕು ಪ್ರಯಾಣಿಕರು ಇಲ್ಲಿ ಸಾವನ್ನಪ್ಪುತ್ತಾರೆ ಅಥವಾ ಅಂಗವಿಕಲರಾಗುತ್ತಾರೆ.

ನಗರದ ನೀರು ಸರಬರಾಜು ವ್ಯವಸ್ಥೆ ಅತ್ಯಂತ ಹದಗೆಟ್ಟು ನಿರಾಶಾದಾಯಕವಾಗಿದೆ. ಇದನ್ನು 'ವಿಶ್ವಬ್ಯಾಂಕಿ'ನ ಸಹಾಯದಿಂದ ಉತ್ತಮ ಪಡಿಸಿದಷ್ಟೂ ಏರುತ್ತಿರುವ ಬೇಡಿಕೆಯಿಂದ ಅದು ಕಡಿಮೆಯಾಗುತ್ತಿದೆ. ಚರಂಡಿಯ ಹೊಲಸು ನೀರು ಸಮುದ್ರ ಸೇರುತ್ತದೆ. ಹೆಚ್ಚು ಕಡಿಮೆ ಮೂರನೇ ಒಂದು ಭಾಗದಷ್ಟು ಜನರು ಶೌಚಗೃಹದ ವ್ಯವಸ್ಥೆ ಇಲ್ಲದೆ ಇಲ್ಲಿ ಬಳಲುತ್ತಿದ್ದಾರೆ.

ಬೊಂಬಾಯಿಯಲ್ಲಿ ಸದಾಕಾಲ ಕೆಲಸ ನಡೆಯುತ್ತಲೇ ಇರುತ್ತದೆ. ಹಣ ಗಳಿಸಲು ದಾರಿಗಳನ್ನು ಹುಡುಕುವಲ್ಲಿ ದೇಹ ಮತ್ತು ಹೃದಯ ಎರಡನ್ನೂ ಒತ್ತೆಯಿಟ್ಟು ದುಡಿಯಬೇಕಾಗುತ್ತದೆ. ಹಾದಿಯಲ್ಲಿ ಹೋಗುತ್ತಿದ್ದಂತೆಯೇ ನೂರಾರು ವಿಧದಲ್ಲಿ ಬದುಕಲು ಹೆಣಗಾಡುತ್ತಿರುವವರು ನಿಮಗೆ ಗೋಚರಿಸುತ್ತಾರೆ. ಕಡಲೆಕಾಯಿ, ಕಡಿಮೆ ದರ್ಜೆಯ ಪೆನ್ನುಗಳು, ಟೈ, ನವಿಲುಗರಿ, ಹಳೆಯ ಧಾರ್ಮಿಕ ಪೀಠೋಪಕರಣಗಳು, ಅರಳೆಕಾಯಿ ಪಂಡಿತರ ಔಷಧಿ, ಪ್ಲಾಸ್ಟಿಕ್ ಹೂಗಳು, ಕಾಮೋದ್ದೀಪಕ ಪುಸ್ತಕಗಳು, ಚಿತ್ರಗಳು, ಲಾಟರೀ ಟಿಕೆಟ್‌ಗಳು, ಪತ್ತೇದಾರಿ ಕಥೆ ಪುಸ್ತಕಗಳು ಇತ್ಯಾದಿ ಇತ್ಯಾದಿ ನಿಮಗಿಲ್ಲಿ ದೊರಕುತ್ತದೆ. ನೀವು ಬೇಕಾದರೆ ಇಲ್ಲಿ ಬಣ್ಣದ ಕನ್ನಡಕವನ್ನು ಪಡೆಯಬಹುದು, ಹಳೆಯ ಬೀಗವನ್ನು ಸರಿಪಡಿಸಿಕೊಳ್ಳಬಹುದು. ಒಂದೆಡೆ ಪಂಜರದಲ್ಲಿ ಪಕ್ಷಿಯನ್ನಿಟ್ಟುಕೊಂಡು ಗ್ರಹಗತಿ ಹೇಳುವವರು, ಸರ್ಪಮದ್ದು ಎಂದು

ಬೇರನ್ನು ನೀಡುವವರು, ಕನಸನ್ನು ವ್ಯಾಖ್ಯಾನಿಸುವವರು, ಎಲ್ಲರೂ ದೊಡ್ಡ ದಾಗಿ ಅರಚುತ್ತ ನಿಮ್ಮ ಕಿವಿಯನ್ನು ತೂತಾಗಿಸುತ್ತಾರೆ. ನೀವಿಲ್ಲಿ ಮಂಗ ನನ್ನು ಆಡಿಸುತ್ತಾ ಸಾಗುವವರನ್ನು, ದೊಂಬರಾಟದವರನ್ನು, ಕಿಸೆ ಕತ್ತರಿಸು ವವರನ್ನು ಅಲಕ್ಷಿಸುವಂತಿಲ್ಲ.

ವಸತಿ ಸಮಸ್ಯೆ : ಪ್ರತಿದಿನ ಸಂಜೆಗೆ ಸ್ವಲ್ಪ ಮುಂಚೆಯೇ ಅನೇಕ ಅಂತಸ್ತುಗಳುಳ್ಳ ಮನೆಯ ವಿವಿಧ ಕೊಠಡಿಗಳ ಹಳದಿ ಗಾಜಿನ ಬಾಗಿಲುಗಳು ಒಲೆಯ ಗ್ಯಾಸ್ ಮತ್ತು ಆಹಾರದ ವಾಸನೆಯನ್ನು ಹೊರಹಾಕುತ್ತಿರುತ್ತವೆ. ಜೊತೆಗೆ ಟ್ರಾನ್ಸಿಸ್ಟರ್ ರೇಡಿಯೋದ ತುಂಬುಧ್ವನಿ, ಮೋಟಾರು-ಕಾರುಗಳ ಕರ್ಕಶ ಶಬ್ದ. ಜನರ ಅರಚಾಟ-ಕಿರುಚಾಟ ಎಲ್ಲ ಸೇರಿ ಚಿತ್ತಕ್ಷೋಭೆಯನ್ನು ಉಂಟುಮಾಡುತ್ತವೆ. ಬೊಂಬಾಯಿ ಜಾಗ್ರತ ಸ್ಥಿತಿಯಲ್ಲಿರುವಾಗ ಇವಕ್ಕೆ ಶಾಂತಿ, ಮೌನ ಎನ್ನುವುದೇ ಇಲ್ಲ. ಕೇವಲ ಮಧ್ಯರಾತ್ರಿಯ ತರುವಾಯ ಸ್ವಲ್ಪಮಟ್ಟಿಗೆ ಶಾಂತಿ ನೆಲೆಸುತ್ತದೆ. ರಸ್ತೆಯ ವೃತ್ತಗಳಲ್ಲಿನ ಹಳದಿ ದೀಪಗಳು ಕಣ್ಣು ಮಿಟುಕಿಸುವದನ್ನು ನಿಲ್ಲಿಸುತ್ತವೆ. ಕಾರುಗಳು ಅದೃಶ್ಯವಾಗುತ್ತವೆ ಮತ್ತು ಜಾರರು ರಸ್ತೆಯ ಪಕ್ಕದ ನೆಲಗಟ್ಟಿನೊಂದಿಗೆ ತಮ್ಮ ವರ್ತನೆಗೆ ಸ್ವಲ್ಪ ವಿಶ್ರಾಂತಿ ನೀಡಿರುತ್ತಾರೆಂದು ಭಾವಿಸಬಹುದು.

ಬೊಂಬಾಯಿ ತನ್ನದೇ ಭಾಗವಾದ ಹೊಸ ಬೊಂಬಾಯಿಯ ಉಳಿವಿಗಾಗಿ ಎದುರುನೋಡುತ್ತಿದೆ. ಆ ನಿಟ್ಟಿನಲ್ಲಿ ಘನೋದ್ದೇಶ ಮತ್ತು ಸವಿಸ್ತಾರವಾದ ಯೋಜನೆಯನ್ನು ಹೊಂದಿದೆ. ಆದರೆ ಹೊಸ ಬೊಂಬಾಯಿಯಲ್ಲಿ ಏನಿದೆ?— ಉದ್ದಕ್ಕೆ ಕೆಳನರೆಗೂ ಹಬ್ಬಿರುವ ಅಂಗಡಿ ಮಟ್ಟುಗಳು, ಬಂಡವಾಳ ಶಾಹಿಗಳ ಫ್ಯಾಕ್ಟರಿಗಳ ಸಮೂಹ. ಇಷ್ಟಿದ್ದರೂ ಇದು ಹತಾಶ ವಾತಾವರಣದ ಮಧ್ಯ ದಲ್ಲೇ ತನ್ನನ್ನು ನಂಬುವಂತೆ ಮಾಡುವ ಗುಣ ಹೊಂದಿದೆ. ಆಗ ಹೊಸ ಬೊಂಬಾಯಿ ಆಸಕ್ತಿ ಕಳೆದುಕೊಂಡಿರುತ್ತದೆ ಮತ್ತು ಹಳೆ ಬೊಂಬಾಯಿ ಹೊಸ ದಾಗಿ ನಿರ್ಮಾಣಗೊಳ್ಳದ ಭಾರತದ ಹಳ್ಳಿಯಾಗಿ, ಸಮೃದ್ಧ ಮಾನವೀಯತೆ ಯನ್ನು ಹೊಂದಿದಂತೆ ಮುಂದುವರಿಯಲು ಪ್ರಯತ್ನಿಸುತ್ತದೆ.

ಇತ್ತೀಚಿನ ದಶಕದಲ್ಲಿ ಏರುತ್ತಿರುವ ಜನಸಂಖ್ಯೆ ಮತ್ತು ಬೆಲೆ ಏರಿಕೆಯಿಂದ 'ವಸತಿ ಸಮಸ್ಯೆ' ಉಲ್ಬಣಗೊಳ್ಳುತ್ತಿದೆ. ಒಂದೇ ಒಂದು ಕೊಠಡಿ ಸಿಗುವುದೂ ಇಲ್ಲಿ ಕಷ್ಟಸಾಧ್ಯ. ನಾಗರಿಕತೆಯ ಪೋಷಾಕು ಧರಿಸಿದ ಒಬ್ಬ ಅಧಿಕಾರಿ "ನಾನು ಇನ್ನು ಮೂವರು ಜನರೊಂದಿಗೆ ಒಂದೇ ಕೊಠಡಿಯಲ್ಲಿ ಪಾಲುದಾರ ನಾಗಿದ್ದೇನೆ. ಆದರೆ ಈಗ ನಾನು ಮದುವೆಯಾಗಲಿಚ್ಛಿಸುತ್ತೇನೆ. ಆದರೆ ನನ್ನ

ಪತ್ನಿಯು ವಾಸ್ತವ್ಯಕ್ಕೇನು ಮಾಡಲಿ?" ಎಂದು ಪ್ರಶ್ನಿಸುತ್ತಾನೆ.

ನಾರಾಯಣ ಅಚ್ಚುಮೊಳೆ ಜೋಡಿಸುವ ಕೆಲಸ ಮಾಡುವವನಾಗಿದ್ದ. ಈಗ ಅನೇಕ ತಿಂಗಳುಗಳಿಂದ ಈತ ನಿರುದ್ಯೋಗಿಯಾಗಿ, ಹಿಂದೆ ಗಳಿಸಿದ್ದರಲ್ಲಿ ದಿನ ದೂಡುತ್ತಿದ್ದಾನೆ. ಆತ ನನಗೆ, ಒಂದೆಡೆ ಕಟ್ಟುಕಟ್ಟಿಟ್ಟ ದಾಖಲೆ ಪತ್ರಗಳು, ಪಾಸ್‌ಪೋರ್ಟ್, ಆರೋಗ್ಯ ತಪಾಸಣೆ ಪತ್ರ, ಅಚ್ಚುಮೊಳೆ ಜೋಡಿಸುವಲ್ಲಿ ಡಿಪ್ಲೋಮಾ ಪಡೆದ ಪತ್ರ, ಹಿಂದಿನ ಯಜಮಾನ ಈತನ ಒಳ್ಳೆಯತನ ಮತ್ತು ಕೆಲಸದಲ್ಲಿ ಪ್ರಾಮಾಣಿಕತೆಯ ಬಗ್ಗೆ ನೀಡಿದ 'ಮೆಚ್ಚುಗೆ ಪತ್ರ' ಎಲ್ಲವನ್ನೂ ತೋರಿಸಿದ. ಆದರೆ ಈಗ ತಾನು ಗಲ್ಫ ದೇಶಗಳಿಗೆ ಹೋಗಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿದ. ಯಾವುದೇ ಕ್ಷೇತ್ರದಲ್ಲಿ ಪರಿಣಿತರಾದವರಿಗೆ ಅರೇಬಿಯಾ 'ಹೊಸ ಸುವರ್ಣನಾಡು'. ತೈಲರಾಷ್ಟ್ರದವರು "ಭಾರತದ ಅಸಂಖ್ಯ ಮಧ್ಯಮ ಹಾಗೂ ಕೆಳವರ್ಗದ ಜನರು ತಾಂತ್ರಿಕ ಪರಿಣತೆ ಪಡೆದಿದ್ದಲ್ಲಿ ಅವರನ್ನೇ ಹೆಚ್ಚಾಗಿ ಬಯಸುತ್ತಾರೆ". ಆದರೆ ನಾರಾಯಣ ಅಲ್ಲಿಗೆ ಹೋಗಲು ಅಂಜುತ್ತಾನೆ. ಕಾರಣ ಅಲ್ಲಿ ಮೊದಲಿನಿಂದ ಇದ್ದ ದಲ್ಲಾಲಿಗಳು ಹೊಸಬರನ್ನು ನಿಯಂತ್ರಿಸುತ್ತಾರೆ. ಅವರು ಯಾವುದಕ್ಕೂ ಹೇಸುವುದಿಲ್ಲ. ಆದರೆ ಬೇರೆ ವಿಧಿಯಿಲ್ಲದೆ, ನಾರಾಯಣ ಬೇಸರ ಪಡುತ್ತಿದ್ದಾನೆ. ಏತನ್ಮಧ್ಯೆ ಗಳಿಸಿಕೊಂಡಿದ್ದ ಹಣ ಕರಗುತ್ತಿದೆ.

....ಮತ್ತು ಮತ್ತಷ್ಟು ಕನಸಗಳು : ನಾರಾಯಣ "ತನ್ನ ಚಿಕ್ಕಮ್ಮನನ್ನು ತೋರಿಸುತ್ತೇನೆ" ಎಂದು ನನ್ನನ್ನು ತನ್ನೊಟ್ಟಿಗೆ ಗಾಳಿ-ಬೆಳಕಿಲ್ಲದ ಕೊಠಡಿಯೊಂದಕ್ಕೆ ಕರೆದೊಯ್ದನು. ಸುಮಾರು ಮೂರು ಮೀ. ಚೌಕಾಕಾರದಲ್ಲಿ ನೆಲದ ಮಚ್ಚಿನ ಮೇಲೆ ಆ ಕೊಠಡಿ ಇತ್ತು. ಒಬ್ಬ ವಯಸ್ಸಾದ ಹೆಂಗಸು ಕಾಲನ್ನು ಮಡಚಿಕೊಂಡು ಅಲ್ಲಿ ಕುಳಿತಿದ್ದಳು. ಅವಳೆದುರಿಗೆ ತಂಬಾಕಿನ ಹುಡಿಯನ್ನು ತುಂಬಿದ ಬುಟ್ಟಿಯೊಂದಿತ್ತು. ಹಿಂದೂ ದೇವ-ದೇವತೆಯರ ಚಿತ್ರಪಟಗಳು ಅವಳ ಹಿಂದಿದ್ದ ಗೋಡೆಯನ್ನು ಅಲಂಕರಿಸಿದ್ದವು.

ಆ ಒಂದು ಕೊಠಡಿಯಲ್ಲಿ ಒಟ್ಟು ಏಳು ಜನ ಬದುಕುತ್ತಿದ್ದಾರೆ. ಆ ಹೆಂಗಸು, ಅವಳ ಮಗಳು-ಅಳಿಯ ಮತ್ತು ಅವಳ ನಾಲ್ಕು ಮೊಮ್ಮಕ್ಕಳು. ಆ ಹೆಂಗಸು 'ಬೀಡಿ'ಯನ್ನು ಕಟ್ಟುತ್ತಿದ್ದಳು. ಅವಳು ಹನ್ನೆರಡು ತಾಸಿನಲ್ಲಿ ಒಂದು ಸಾವಿರ 'ಬೀಡಿ'ಗಳನ್ನು ಕಟ್ಟಬಲ್ಲವಳಾಗಿ ವಾರವಿಡೀ ದುಡಿಯುತ್ತಿರುತ್ತಾಳೆ. ಒಂದು ತಿಂಗಳಿಗೆ ಅವಳ ವರಮಾನ ಸರಾಸರಿ ರೂ. ೨೫೦-೦೦. ಅವಳು ಸುಮಾರು ನಲವತ್ತು ವರ್ಷಗಳಿಂದ ಇದೇ ಕೆಲಸದ ಮೂಲಕ ಜೀವನ ನಡೆಸುತ್ತಿದ್ದಾಳೆ.

ನಾರಾಯಣನ ಕೊಠಡಿ ಕೂಡ ಅದೇ ಕಟ್ಟಡದ ಮೇಲಿನ ಅಂತಸ್ತಿನಲ್ಲಿದೆ. ಅಲುಗುತ್ತಿರುವ ಏಣಿಯೇ ಮೇಲೇರುವ ಸಾಧನ. ಇದು ಕೂಡ ಹಿಂದೆ ಹೇಳಿದ ಕೊಠಡಿಯಂತೆಯೇ ಸಣ್ಣದಾಗಿದ್ದು, ಗಾಳಿ ಬೆಳಕುಗಳಿಂದ ವಂಚಿತವಾಗಿದೆ. ಆದರೆ ಇಲ್ಲಿ ಸ್ವಲ್ಪ ಸುಧಾರಣೆಯನ್ನು ಗುರುತಿಸಬಹುದಾಗಿದೆ—ಹೆಸರಿನ ಹಲಗೆ ಬಾಗಿಲಿಗೆ ಬಡಿದಿದೆ. ಗಾಜಿನ ಕನ್ನಡಿ ಹೊಂದಿದ ಒಂದು ಬೀರು, ಒಂದು ಸಾಲಿನಲ್ಲಿದ್ದ ಪುಸ್ತಕಗಳು, ಎಲ್ಲಕ್ಕಿಂತ ಆಶ್ಚರ್ಯಕರವಾದದ್ದು ಒಂದು ಗಾಜಿನ ಪೆಟ್ಟಿಗೆಯ ತುಂಬ ಇದ್ದ ಬಣ್ಣಬಣ್ಣದ ಉಷ್ಣವಲಯದ ಮೀನುಗಳು.

ನಾರಾಯಣನಿಗೆ ಮೂರು ಮಕ್ಕಳು—ಎರಡು ಹೆಣ್ಣು ಮತ್ತು ಒಂದು ಗಂಡು. ಅವೆಲ್ಲ ನೆಲದ ಮೇಲೆ ಮಲಗಿದ್ದವು. ಕಬ್ಬಿಣದ ಮಡಚುವ ಕುರ್ಚಿ ಮಾತ್ರ, ಅವರ ನಡುವೆ, ಅಲ್ಲಿಯ ಅಲಂಕಾರ ಸಾಮಗ್ರಿಯಾಗಿತ್ತು. ಅವನ ಮಗ ಸುಮಾರು ಏಳು ವರ್ಷ ದೊಡ್ಡವನಾಗಿದ್ದ. ನಾರಾಯಣ ಹೇಳಿದ— "ನಾನು ನಿಜಕ್ಕೂ ಗಲ್ಫ ದೇಶಕ್ಕೆ ಹೋಗಲಿಚ್ಛಿಸುವುದು ಇವನಿಗೋಸ್ಕರವೇ. ಅವನನ್ನು ವಿದ್ಯಾವಂತನನ್ನಾಗಿ ಮಾಡಲು ಬೇರೆ ದಾರಿಯೇ ಇಲ್ಲವಾಗಿದೆ.... ಮುಂದೊಂದು ದಿನ 'ನನ್ನ ಮಗ ದೊಡ್ಡ ಮನುಷ್ಯನಾಗಬಹುದು' ನಾನು ಅವನ ಮೇಲೆಯೇ ನಂಬುಗೆಯನ್ನಿರಿಸಿಕೊಂಡಿದ್ದೇನೆ".

ಚೌಪಾಥಿ ದಡದ ಮೇಲೆ ಮಲಮೂತ್ರಗಳ ದುರ್ಗಂಧ ಸಮುದ್ರದ ವಾಸನೆಯೊಂದಿಗೆ ಬೆರೆತುಕೊಂಡಿತ್ತು. ಅಲ್ಲಿಯ ಆಹಾರ ಮಾರುವ ಅಂಗಡಿಯ ಬೆಳಕು ನೋವಿನಿಂದ ಮಿಡಿಯುತ್ತಿದ್ದಂತೆ ಅನ್ನಿಸಿತು. ಈ ದೀಪಗಳೇ ಸುಂದರವಾದ ಗೋಪುರಗಳನ್ನು ಹೊಂದಿದ ಈ ಕನಸಿನ ನಗರ ಕುರಿತು ಎಲ್ಲೆಡೆಗೂ ಸಾರುತ್ತಿರುವಂತೆ ಇದೆ. ಅಲ್ಲೇ ಸಮೀಪದಲ್ಲಿ ಮರಳು ದಂಡೆಯ ಮೇಲೆ ಗಂಡಸರು ಮತ್ತು ಹೆಂಗಸರ ಗುಂಪೊಂದು ವರ್ತುಲಾಕಾರದಲ್ಲಿ ಕುಳಿತು ಮದ್ದಲೆ ಬಡಿಯುತ್ತ ಹಾಡುತ್ತಿದ್ದರು. ಅಲ್ಲೇ ಪಕ್ಕದಲ್ಲಿ ಆನೆಯ ಶಿರವನ್ನು ಹೊಂದಿದ ದೇವ ಗಣೇಶನ ವಿಗ್ರಹವಿದ್ದು ಅದಕ್ಕೆ ವಿಲಕ್ಷಣವಾಗಿ ಬಣ್ಣ ಬಳಿದಿತ್ತು ಮತ್ತು ಅದನ್ನು ವಿಪರೀತವಾಗಿ ಅಲಂಕರಿಸಿದ್ದರು. ವಿಗ್ರಹದ ಬುಡದಲ್ಲಿ ಹಣ ಮತ್ತು ಹೂವುಗಳು ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿದ್ದವು.

ಅದ್ಭುತ ನಗರ! ಇದು ಆಸೆಯನ್ನು ಭಗ್ನಗೊಳಿಸುತ್ತದೆ ಮತ್ತು ಹತಾಶೆಯನ್ನು ಹುಟ್ಟಿಸುತ್ತದೆ. ಇಲ್ಲಿ ಯಾವೊಬ್ಬನಿಗೂ ತಾನು ಯಾವ ಗುರಿಯನ್ನು ಮುಟ್ಟುತ್ತೇನೆ ಮತ್ತು ಮುಂದೇನು ಆಗುತ್ತೇನೆ ಎಂಬ ಬಗ್ಗೆ ಖಾತ್ರಿಯಿಲ್ಲ. ಅದು ಅಷ್ಟರಮಟ್ಟಿಗೆ ಅಸ್ಪಷ್ಟವಾಗಿ ಗೋಜಲುಗೋಜಲಾಗಿ, ವಾಸ್ತವಿಕ

ಮತ್ತು ಕಾಲ್ಪನಿಕ ಬದುಕಿನ ನಡುವೆ ಡೋಲಾಯಮಾನವಾಗಿದೆ.

"ಒಂದು ದಿನ ನನ್ನ ಮಗ ದೊಡ್ಡ ಮನುಷ್ಯನಾಗಬಹುದು...." ನಾನು ಆ ಮದ್ದಳೆ ಬಡಿತ ಮತ್ತು ಸಂಗೀತವನ್ನು ಆಲಿಸಿದೆ.

"ಬೊಂಬಾಯಿ ಬದುಕುತ್ತಿದೆ. ಯಾಕೆಂದರೆ ಇದು ಭಯವನ್ನು ಅಲ್ಲಗಳೆಯುತ್ತದೆ".

ರವೀಂದ್ರ ಭಟ್ಟ



ಅಪಾಯದಲ್ಲಿ ಧೈರ್ಯ, ಕಷ್ಟದಲ್ಲಿ ತಾಳ್ಮೆ, ನಷ್ಟದಲ್ಲಿ ಸಹನೆ, ತೊಂದರೆಯಲ್ಲಿ ಶಾಂತಿ, ದುಃಖದಲ್ಲಿ ಸಮಾಧಾನವೇ ಶೀಲದ ಲಕ್ಷಣ.

—ಪರಮಹಂಸ

ಶೀಲ ಮನುಷ್ಯನ ಬಂಡವಾಳ ಹೇಗೋ ಹಾಗೆಯೇ ಅದು ಆತನ ಅಚ್ಚಳಿಯದ ಸ್ಮಾರಕ.

—ಗಾಂಧೀಜಿ

ಅಲ್ಪ ಅವಕಾಶಗಳೇ ಎಷ್ಟೋ ವೇಳೆ ಮಹಾ ಉಪಕ್ರಮಗಳ ಆರಂಭ ಆಗುತ್ತವೆ.

—ಡೆಮೋಸ್ತನೀಸ

ಶೀಲವೆಂಬುದು ಕಣ್ಣಿಗೆ ಕಾಣದ ಆತ್ಮದ ಬೆರಳುಗಳು ಸದಾ ನೈಯುತ್ತಿರುವ ಅಮೂಲ್ಯ ಉಡಿಗೆ.

—ಸ್ಪೆನ್ಸರ್

ನಿಷ್ಠೆ

ಮಹಾರಾಷ್ಟ್ರದಲ್ಲಿ ಪಂಢರಪುರ ಒಂದು ಹಳ್ಳಿ. ಆ ಹಳ್ಳಿಯಲ್ಲಿ ಕಮಲಾಕರ ನೆಂಬ ಒಬ್ಬ ಬ್ರಾಹ್ಮಣನಿದ್ದ. ಅವನ ಬಳಿ ಸ್ವಲ್ಪ ಜಮೀನಿತ್ತು. ಅದರಿಂದಲೇ ತನ್ನ ಕುಟುಂಬವನ್ನು ನಿರ್ವಹಿಸುತ್ತಿದ್ದ. ಮನೆಯಲ್ಲಿ ಹೆಂಡತಿ ಹಾಗೂ ಒಬ್ಬ ಮಗ. ಬಡವನಾಗಿದ್ದರೂ ಮನೆಗೆ ಬಂದ ಅತಿಥಿ ಹಾಗೂ ಸಾಧು-ಸಂತರನ್ನು ಬಹಳ ಆದರಿಸುತ್ತಿದ್ದ.

ಒಂದು ದಿನ ಕಮಲಾಕರ ತನ್ನ ಮಗನನ್ನು ಪೇಟೆಗೆ ಸುತ್ತಾಡಿಸಿಕೊಂಡು ಬರಲು ಕರೆದುಕೊಂಡು ಹೋಗುತ್ತಿದ್ದ. ಆಗ ಅವನಿಗೆ ಭಕ್ತರ ಗುಂಪೊಂದು ಕೀರ್ತನೆ ಹಾಡುತ್ತಿದ್ದುದು ಕಂಡಿತು. ಸಾಧುಸಂತರನ್ನು ಕಂಡು ಅವನಿಗೆ ಬಹಳ ಸಂತೋಷವಾಯಿತು. ಆತ ನಮಸ್ಕರಿಸಿ, "ಇಂದು ತಾವೆಲ್ಲರೂ ನನ್ನ ಮನೆಯಲ್ಲಿ ಭೋಜನ ಸ್ವೀಕರಿಸಬೇಕು" ಎಂದು ವಿನಂತಿಸಿದ.

ನಾಮದೇವ, ಜ್ಞಾನೇಶ್ವರರಂತಹ ಪ್ರಮುಖ ಸಂತರುಗಳಿದ್ದ ಗುಂಪಿನಲ್ಲಿ ಹಲವರಿಗೆ ಆತನ ಬಡತನದ ಪರಿಚಯವಿತ್ತು. ಅವರು "ಕಮಲಾಕರ, ನಿಮ್ಮ ಸ್ಥಿತಿ ನಮಗೆ ಗೊತ್ತಿದೆ. ನೀವು ನಿಮ್ಮ ಜೀವನವನ್ನೇ ಕಷ್ಟದಿಂದ ನಡೆಸುತ್ತೀರಿ. ನೀವು ಹೇಳಿದಷ್ಟೇ ಸಾಕು. ನಾವು ನಿಮ್ಮ ಮನೆಗೆ ಮತ್ತೊಂದು ದಿನ ಊಟಕ್ಕೆ ಬರುತ್ತೇವೆ" ಎಂದರು. ಆದರೆ ಕಮಲಾಕರ ಹಠ ಹಿಡಿದನು. ಹೆಚ್ಚು ಹಠ ಮಾಡಿದ ಮೇಲೆ ಸಂತರು ಊಟಕ್ಕೆ ತಯಾರಾದರು. ಅವರು ಕಮಲಾಕರನಿಗೆ "ನೀವು ಮನೆಗೆ ಹೋಗಿ, ಊಟದ ಏರ್ಪಾಡು ಮಾಡಿ. ನಾವು ಸ್ನಾನ-ಧ್ಯಾನ ಮಾಡಿ ಬರುತ್ತೇವೆ" ಎಂದರು.

ಕಮಲಾಕರ ತನ್ನ ಮಗನೊಡನೆ ಸಂತೋಷದಿಂದ ಮನೆಗೆ ಹಿಂದಿರುಗಿದ. ತನ್ನ ಹೆಂಡತಿಗೆ ಎಲ್ಲ ವಿಷಯವನ್ನೂ ತಿಳಿಸಿದ. ಹೆಂಡತಿ ಹಾಗೂ ಮಗ ಮನೆಯಲ್ಲಿ ಅಡಿಗೆ ಮಾಡಲು ತೊಡಗಿದರು. ಕಮಲಾಕರನ ಹೆಂಡತಿ ಪೂರಿ ಮಾಡುತ್ತಿದ್ದಳು. ಸೌದೆಯೆಲ್ಲಾ ಮುಗಿದುಹೋಯಿತು. ಆಕೆ ತನ್ನ ಮಗನಿಗೆ ಒಣಗಿದ ಸೌದೆ ತರಲು ಕೊಠಡಿಗೆ ಕಳುಹಿಸಿದಳು. ಕತ್ತಲೆಯಾದ ಕೊಠಡಿಯಲ್ಲಿ ಒಣಗಿದ ಕಾಷ್ಠ ತರಲು ಹೋದಾಗ ಅಲ್ಲಿಯೇ ಕುಳಿತಿದ್ದ ನಾಗವೊಂದು ಹೊಡೆಯಿತು. ಅವಳ ಮಗ ಅಮ್ಮಾ....ಅಮ್ಮಾ...." ಎನ್ನುತ್ತಾ ಬಿದ್ದುಬಿಟ್ಟ. ಮಗನ ಶಬ್ದ ಕೇಳಿ ತಾಯಿ ಬಂದಳು. ಮಗನನ್ನು ನೋಡಿದಳು. ಅವನ ಪ್ರಾಣ ಹಾರಿ ಹೋಗಿತ್ತು. ಅವಳು ಅತ್ತುಕರೆಯಲು (ಪುರುಸೊತ್ತು) ಸಮಯವಿರಲಿಲ್ಲ. ಇದರಿಂದ ಆಕೆ ಮಗನನ್ನು ಅಲ್ಲಿಯೇ ಮಲಗಿಸಿ ಒಂದು ದುಪ್ಪಟಿಯನ್ನು

ಹೊದಿಸಿ ಊಟದ ಏರ್ಪಾಡಿಗೆ ಹೋದಳು. ಕಮಲಾಕರ ಬಂದ. ಅವನಿಗೂ ಕೇಳಿ ಬಹಳ ದುಃಖವಾಯಿತು. ಆದರೂ ಅವನು ಮನಸ್ಸು ಕಲ್ಲುಮಾಡಿ ಬೇರೆ ಕೆಲಸಗಳಲ್ಲಿ ತೊಡಗಿದ.

ಸ್ವಲ್ಪ ಹೊತ್ತಿನಲ್ಲಿಯೇ ಸಂತರು ನದಿಯಲ್ಲಿ ಸ್ನಾನ ಮಾಡಿ ಹಿಂದಿರುಗಿದರು. ಕಮಲಾಕರ ಎಲ್ಲರ ಕೈಕಾಲು ತೊಳೆದು ಆಸನಗಳಲ್ಲಿ ಕುಳ್ಳಿರಿಸಿದ. ಮತ್ತೆ ತಟ್ಟೆಗಳಲ್ಲಿ ಊಟ ಬಡಿಸಿದ. ಆಗ ನಾಮದೇವರು "ಕಮಲಾಕರ, ನಿನ್ನ ಮಗನೇ ಕಾಣುತ್ತಿಲ್ಲ, ಅವನನ್ನು ಕರೆ" ಎಂದರು.

"ತಾವು ಊಟ ಮಾಡಿ. ನನ್ನ ಮಗ ಎಲ್ಲೋ ಆಡಲು ಹೋಗಿರಬಹುದು" ಎಂದ ಕಮಲಾಕರ.

ನಾಮದೇವರು ಸಿದ್ಧಿ ಪಡೆದ ಸಂತರು. ಅವರಿಗೆ ಸಿದ್ಧಿಯಿಂದ ಎಲ್ಲವೂ ತಿಳಿದಿತ್ತು. ಆದರೂ ಅವರು, "ನಿನ್ನ ಮಗ ಬರುವವರೆವಿಗೆ ನಾವು ಊಟ ಮಾಡುವುದಿಲ್ಲ" ಎಂದರು.

ಕಮಲಾಕರ ಮಗನ ಮೃತ್ಯುವಿನ ವಿಷಯವನ್ನು ನಾಮದೇವರಿಗೆ ತಿಳಿಸಿದ. ಮತ್ತೆ ಬಿಕ್ಕಿ ಬಿಕ್ಕಿ ಅತ್ತ.

ಇದನ್ನು ಕೇಳಿದ ಸಂತಜ್ಞಾನೇಶ್ವರರು ನಾಮದೇವರಿಗೆ, "ನಾಮದೇವ, ನೀನು ಭಗವಾನ್ ವಿಠಲನಿಂದ ಪ್ರಾರ್ಥನೆ ಮಾಡಿಕೋ. ಇವನ ಮಗ ಬದುಕುತ್ತಾನೆ" ಎಂದರು.

ನಾಮದೇವರು ಪ್ರಾರ್ಥಿಸತೊಡಗಿದರು. ಮಧ್ಯಾಹ್ನದಿಂದ ಸಂಜೆಯಾಯಿತು. ಆಗ ಭಗವಾನ್ ವಿಠಲರು ನಾಮದೇವರ ಧ್ಯಾನದಲ್ಲಿ ಬಂದು, "ನಿನ್ನಿಷ್ಟವೇನು ?" ಎಂದು ಕೇಳಿದರು. —"ಪ್ರಭು, ಈ ಬಡ ಬ್ರಾಹ್ಮಣನ ಮಗನನ್ನು ಬದುಕಿಸಿ ಕೊಡಿ" ಎಂದರು.

ಭಗವಾನ್— "ಹಾಗೇ ಆಗಲಿ" ಎಂದು ಕಣ್ಮರೆಯಾದರು. ನಾಮದೇವರು ಕಣ್ಣು ತೆರೆದರು. ಆಗ ಕಮಲಾಕರನ ಮಗ ಕೋಣೆಯಿಂದ ಹೊರಟುಬಂದ. ಬಂದವನೇ ನೀರು ಕೇಳಿದ. ಕಮಲಾಕರ ಮತ್ತು ಆತನ ಹೆಂಡತಿ ಹರ್ಷಚಿತ್ತರಾಗಿ ಸಂತರ ಪಾದಗಳಿಗೆ ವಂದಿಸಿದರು.

ಮೂರ್ತಿರಾಮನಾಥಪುರ

ಶೀಲವು ಪ್ರಗತಿಗೆ ಮೂಲ, ಸಂಪತ್ತಿಗೆ ತಳಹದಿ, ಆನಂದ ಶಾಂತಿಗಳಿಗೆ ರಾಜ ಮಾರ್ಗ.

—ಗಾಂಧೀಜಿ

ಬಕ್ರೀದ್

ಬಕ್ರೀದ್ ಮುಸ್ಲಿಮರ ಅತಿ ದೊಡ್ಡ ಮತ್ತು ಪವಿತ್ರ ಹಬ್ಬ. ಇದು ರಂಜಾನ್ ಹಬ್ಬಕ್ಕಿಂತಲೂ ದೊಡ್ಡದು. ಇದು ಅರಬ್ಬೀ ವರ್ಷದ ಕೊನೆಯ ತಿಂಗಳಾದ ಜಿಲ್‌ಹಜ್ಜಃದ ೧೦ ನೆಯ ದಿವಸ ಬರುತ್ತದೆ. ಇದನ್ನು 'ಈದ್–ಎ–ಸುಹಾ', 'ಈದುಲ್ ಅಜ್‌ಹಾ', 'ಈದುಜ್ಜುಹ' ಅಥವಾ ಬಲಿದಾನ ಮಾಡುವ ಹಬ್ಬ ಎಂದು ಕರೆಯುತ್ತಾರೆ. ತುರ್ಕಿ ಮತ್ತು ಈಜಿಪ್ಟ್ ದೇಶಗಳಲ್ಲಿ ಇದನ್ನು 'ಬೈರಾಂ' ಎಂದೂ ಪರ್ಶಿಯಾ, ಇರಾನ್ ದೇಶಗಳಲ್ಲಿ ಇದನ್ನು ಈದ್–ಎ–ಖುರ್ಬಾನ್ (ಅಂದರೆ ಬಲಿದಾನದ ಹಬ್ಬ) ಎಂದೂ ಭಾರತದಲ್ಲಿ 'ಬಕ್ರೀದ್' ಎಂದೂ ಕರೆಯುತ್ತಾರೆ. ಇದನ್ನು 'ಈದ್–ಎ–ಕಬೀರ್' ಅಂದರೆ 'ದೊಡ್ಡ ಹಬ್ಬ'ವೆಂದೂ ಕರೆಯುತ್ತಾರೆ. ಮಕ್ಕಾದಲ್ಲಿ ಈ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಇದು ಗಂಭೀರವಾದ ಧಾರ್ಮಿಕ ಹಬ್ಬ. ಪ್ರಾಣಿಯನ್ನು ಬಲಿ ಕೊಡುವುದು ಈ ಹಬ್ಬದ ಒಂದು ವಿಶಿಷ್ಟ ಆಚರಣೆ.

ಈದ್ ಶಬ್ದ ಅರಬ್ಬಿ ಭಾಷೆಯ 'ವೂದ್' ಅಥವ 'ಜಾದ್' ಎಂಬ ಶಬ್ದದಿಂದ ಹುಟ್ಟಿದೆ. ಇದರ ಅರ್ಥ 'ಹಿಂತಿರುಗು' ಎಂದು. ಬಹುಶಃ ಹಬ್ಬ ಪ್ರತಿವರ್ಷವೂ ತಿರುಗಿ ಬರುವುದರಿಂದ ಹೀಗೆ ಕರೆದಿರಬಹುದು. ಅನೇಕರು ಇದರ ಸಂಬಂಧ 'ಬಕರಿ' ಅಂದರೆ 'ಕುರಿ' ಯೊಂದಿಗೆ ಇರಬಹುದೆಂದು ಅಭಿಪ್ರಾಯ ಪಡುತ್ತಾರೆ. ಏಕೆಂದರೆ ಈ ಹಬ್ಬದ ದಿವಸ ಕುರಿಯನ್ನು ಬಲಿ ಕೊಡುತ್ತಾರೆ.

ಇಸ್ಲಾಂ ಧರ್ಮದ ಉದಯದ ಮೊದಲಿನಿಂದಲೇ ಈ ಹಬ್ಬದ ಆಚರಣೆ ನಡೆದುಬಂದಿದೆ. ಇದು ಇಸ್ಲಾಂ ಧರ್ಮದಲ್ಲಿ ಹೇಗೆ ಸೇರಿಕೊಂಡು ಆಚರಣೆಗೆ ಬಂದಿತು ಎಂಬ ವಿಷಯದಲ್ಲಿ ಎರಡು ಬಗೆಯ ಅಭಿಪ್ರಾಯಗಳಿವೆ. ಪಾಶ್ಚಾತ್ಯ ಇತಿಹಾಸಕಾರರ ಪ್ರಕಾರ ಇಸ್ಲಾಂ ಮತಸ್ಥಾಪಕ ಮೊಹಮದ್ ಪೈಗಂಬರ್ ಅವರು ಮಕ್ಕಾದಿಂದ ಮದೀನಕ್ಕೆ ಬಂದು ನೆಲೆಸಿದಾಗ ಯಹೂದಿಗಳು 'ಜಿಲ್ ಹಜ್ಜಃ' ಎಂಬ ಹನ್ನೆರಡನೆಯ ತಿಂಗಳ ಹತ್ತನೆಯ ದಿವಸ ಪ್ರಾಯಶ್ಚಿತ್ತದ ರೂಪದಲ್ಲಿ ಉಪವಾಸ ಮಾಡುವುದನ್ನು ಕಂಡರು. ಇದರ ವಿಚಾರದಲ್ಲಿ ಫೆರ್‌ಜಾನ್ ಎಂಬ (ಈಜಿಪ್ಟ್) ಪ್ರಸಿದ್ಧ ಅತ್ಯಾಚಾರಿ ಬಾದಷಹನ ಕೈಕೆಳಗೆ ಪೀಡೆಗೊಳಗಾದ ಮೂಸಾ ಮತ್ತು ಇಸ್ರೇಲ್ ದೇಶದ ಮಕ್ಕಳ ಬಂಧವಿಮೋಚನೆಯಾದ ಪ್ರಯುಕ್ತ ಈ ಹಬ್ಬವನ್ನು ಆಚರಿಸಲಾಗುತ್ತಿದೆ ಎಂದು ತಿಳಿಯಿತು. ಯಹೂದ್ಯರು ಈ ಹಬ್ಬವನ್ನು 'ಮ್ಹಾಂದನ್' ಎನ್ನುತ್ತಾರೆ. ಹಜರತ್ ಮೂಸಾರವರ ಮೇಲೆ ಯಹೂದ್ಯರಿಗಿಂತ ನಮ್ಮ ಅಧಿಕಾರ ಹೆಚ್ಚಿನದು ಎಂದು

ಮೊಹಮ್ಮದ್ ಪೈಗಂಬರ್‌ರವರು ತಿಳಿಸಿದರು. ಅವರು ಯಹೂದ್ಯರೊಂದಿಗೆ ತಾವೂ ಉಪವಾಸ ಮಾಡಿದುದಲ್ಲದೆ ತಮ್ಮ ಅನುಯಾಯಿಗಳಿಗೂ ಉಪವಾಸ ವನ್ನಾಚರಿಸುವುದಕ್ಕೆ ಆದೇಶವನ್ನಿತ್ತರು. ಆಮೇಲೆ ಯಹೂದ್ಯರಿಗೂ ಮುಸ್ಲಿಮ ರಿಗೂ ಪರಸ್ಪರ ಕಲಹ ಉಂಟಾಗಿ ಮೊಹಮದ್ ಪೈಗಂಬರ್ ಅವರು ಉಪ ಕಾರಕ್ಕೆ ಬದಲಾಗಿ ಬಲಿದಾನದ ಪದ್ಧತಿಯನ್ನು ಜಾರಿಗೆ ತಂದರು. ಈ ರೀತಿ ಬಕ್ರೀದ್ ಹಬ್ಬ ಪ್ರಾರಂಭವಾಯಿತು ಎಂದು ಹೇಳುತ್ತಾರೆ.

ಯಹೂದ್ಯರ ಧರ್ಮವನ್ನು ಇಸ್ಲಾಮಿನಿಂದ ಬೇರೆ ಎಂದು ಭಾವಿಸು ವುದಾದರೆ ಮುಸ್ಲಿಮರ ಈ ಹಬ್ಬವನ್ನು ಯಹೂದ್ಯರಿಂದ ಕಲಿತುಕೊಂಡರೆಂದು ಹೇಳಬೇಕಾಗುತ್ತದೆ. ಆದರೆ ಮುಸ್ಲಿಮರ ನಂಬಿಕೆಯ ಪ್ರಕಾರ ಇಸ್ಲಾಂ ಧರ್ಮ ಹಜರತ್ ಆದಮ್ ಎಂಬ ಪೈಗಂಬರ್ ಅವರಿಂದ ಪ್ರಾರಂಭವಾಗದೆ–ಅಲ್ಲದೆ ಹಜರತ್ ಮೊಹಮದ್ ಸಾಹೇಬರು ಮುಸ್ಲಿಮರ ಕೊನೆಯ ಪೈಗಂಬರರು. ಆದುದರಿಂದ ಮೊಹಮದ್ ಪೈಗಂಬರ್ ಅವರಿಗಿಂತ ಮೊದಲಿನ ಎಲ್ಲಾ ಪೈಗಂಬರ್‌ರೂ ಇಸ್ಲಾಮಿನ ಪೈಗಂಬರರೂ ಹೌದು. ಈ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ವಿಚಾರಿಸಿದ ಪಕ್ಷದಲ್ಲಿ ಬಕ್ರೀದ್ ಹಬ್ಬ ಮುಸ್ಲಿಮರ ಹಬ್ಬವೆಂದೇ ಹೇಳಬೇಕಾಗುತ್ತದೆ.

ಮುಸ್ಲಿಂ ಇತಿಹಾಸಕಾರರು ಪಾಶ್ಚಾತ್ಯ ಇತಿಹಾಸಕಾರರ ಅಭಿಪ್ರಾಯಗಳನ್ನು ಒಪ್ಪುವುದಿಲ್ಲ. ಹಜರತ್ ಇಬ್ರಾಹೀಮ್–ಖಲೀಲುಲ್ಲಾಹ್ ಅವರ ಕಾಲ ದಿಂದಲೂ ಬಕ್ರೀದ್ ಹಬ್ಬ ಆಚರಣೆಗೆ ಬಂದಿದೆ ಎಂದು ಅವರು ವಾದಿಸುತ್ತಾರೆ. ಧರ್ಮಪ್ರವಾದಿಗಳಾದ ಇಬ್ರಾಹೀಮ್ ಖಲೀಲುಲ್ಲಾಹ್ ಅವರ ಸತ್ವಪರೀಕ್ಷೆ ಮಾಡಲು ಅಲ್ಲಾಹನು ಒಮ್ಮೆ ಅವರಿಗೆ "ನಿನ್ನ ಅತಿ ಪ್ರೀತ್ಯಾದರಗಳಿಗೆ ಪಾತ್ರ ವಾದ ಜೀವ ಒಂದನ್ನು ಬಲಿಕೊಡಬಲ್ಲೆಯೋ?" ಎಂದು ಕೇಳಿದನಂತೆ. ಪಿತೃ ವಾತ್ಸಲ್ಯದ ಪ್ರತೀಕವೆನಿಸಿದ ತಮ್ಮ ಏಕೈಕ ಪುತ್ರನಾದ ಇಸ್ಮಾಯಿಲ್ ಜಬೀ ಯುಲ್ಲಾಹ್ ಅವರನ್ನೇ ಬಲಿದಾನ ಮಾಡಬೇಕೆಂದು ಅಲ್ಲಾಹ್‌ನ ಇಚ್ಛೆ ಎಂದು ಅವರಿಗೆ ಮನವರಿಕೆಯಾಗಿ ತಮ್ಮ ಮಗನನ್ನು ಬಲಿಕೊಡಲು ಸಿದ್ಧ ರಾದರು. ಆದರೆ ಅನೇಕಸಲ ಪ್ರಯತ್ನಪಟ್ಟರೂ ಮಗನ ಗಂಟಲಿನ ಮೇಲೆ ಕತ್ತಿ ಹರಿಯಲಿಲ್ಲ. ಇದನ್ನು ಕಂಡ ಮಗ ಇಸ್ಮಾಯಿಲ್ ಜಬೀಯುಲ್ಲಾಹ್, ತನ್ನ ತಂದೆಗೆ ಹೀಗೆ ಹೇಳಿದರು. 'ಅಪ್ಪಾ, ನಿನ್ನನ್ನು ಪುತ್ರವಾತ್ಸಲ್ಯ ಕಾಡಿಸುತ್ತಿದೆ. ಆದ್ದರಿಂದ ಕಣ್ಣಿಗೆ ಪಟ್ಟಿಯನ್ನು ಕಟ್ಟಿಕೊಂಡು ಕತ್ತಿಹರಿಸು'. ಇದರಂತೆ ತಂದೆ ಇಬ್ರಾಹೀಮ್ ಖಲೀಲುಲ್ಲಾಹ್ ಅವರು ತಮ್ಮ ಕಣ್ಣುಗಳಿಗೆ ಪಟ್ಟಿಯನ್ನು

ಕಟ್ಟಿ 'ಬಿಸ್ಮಿಲ್ಲಾಹ್' ಎಂದು ಹೇಳಿ ಒಮ್ಮೆಲೇ ಮಗನ ಮೇಲೆ ಕತ್ತಿಯನ್ನು ಜೋರಾಗಿ ಹರಿಸಿದರು. ಆದರೆ ತಕ್ಷಣವೇ ದೇವದೂತ ಜಿಬ್ರಾಯಿಲ್ (Gibrial) ಬಂದು ಇಸ್ಮಾಯಿಲ್‌ರನ್ನು ಒತ್ತಟ್ಟಿ ಅವರ ಬದಲು ಒಂದು ಕುರಿಯನ್ನು ಇಡುತ್ತಾನೆ. ಈ ಕಾರಣ ಬಲಿ ಕೊಡಲ್ಪಟ್ಟ ಜೀವ ಒಂದು ಕುರಿ ಆಗುತ್ತದೆ. ಇದು ಬಕ್ರೀದ್ ಹಬ್ಬದ ಹಿನ್ನೆಲೆ. ಅರಬ್ಬೀಸ್ಥಾನದ ಮಕ್ಕಾ ಕ್ಷೇತ್ರದಲ್ಲಿರುವ 'ಮನಾ' ಎಂಬ ಸ್ಥಳವೇ ಇಬ್ರಾಹೀಮ್ ಖಲೀಲುಲ್ಲಾಹ್ ಅವರು ಮೊದಲನೆಯ ಬಲಿದಾನ ಮಾಡಿದ ಸ್ಥಳ.

ಒಟ್ಟಿನಲ್ಲಿ ಜೀವಜಂತುವಿನ ಬಲಿದಾನದ ಮೂಲಕ ಈ ಹಬ್ಬವನ್ನು ಆಚರಿಸುತ್ತಾರೆ. ಬಲಿಯಾದ ಪ್ರಾಣಿ ಮುಂದೆ ಪರೋಕ್ಷವಾಗಿ ಸಹಕಾರಿಯಾಗುತ್ತದೆ ಎಂಬ ನಂಬಿಕೆ ಮುಸ್ಲಿಮರದು. ಪ್ರಪಂಚ ಕೊನೆಗೊಳ್ಳುವಾಗ ಒಂದು ದೊಡ್ಡ ಪ್ರಳಯವಾಗುತ್ತದೆ. ಇದನ್ನು 'ಖಯಾಮತ್' ಎನ್ನುತ್ತಾರೆ. ಅಂದು ಮಾನವನ ಒಳ್ಳೆಯ ಮತ್ತು ಕೆಟ್ಟ ನಡತೆಗಳ ತುಲಾಭಾರವಾಗುತ್ತದೆ. ಒಂದು ವೇಳೆ ಕೆಟ್ಟ ನಡತೆಗಳ ತಕ್ಕಡಿ ಭಾಗ ಭಾರವಾಗಿ ಕೆಳಗಿಳಿದರೆ, ಬಲಿ ಕೊಟ್ಟ ಪ್ರಾಣಿ ಕೂಡಲೇ ಬಂದು ಅತ್ತ ಕಡೆಯ ಭಾಗದಲ್ಲಿ ತನ್ನ ಭಾರವನ್ನು ಬಿಟ್ಟು ನೆರವು ನೀಡುತ್ತದೆ ಎಂಬ ನಂಬಿಕೆ ಇದೆ. ಆದ ಕಾರಣ ಈ ಹಬ್ಬದಲ್ಲಿ ಮುಸ್ಲಿಮರು ಕುರಿ, ಒಂಟೆಗಳನ್ನು ಹೆಚ್ಚುಹೆಚ್ಚಾಗಿ ಬಲಿ ಕೊಡುತ್ತಾರೆ. ಇದನ್ನು 'ಖುರ್ಬಾನ್' ಎಂದು ಕರೆಯುತ್ತಾರೆ. ಒಟ್ಟಿನಲ್ಲಿ ಇಬ್ರಾಹೀಂ ಖಲೀಲುಲ್ಲಾಹ್ ಅವರ ಆ ದೈವಾಜ್ಞೆಪಾಲನೆಯ ನೆನಪನ್ನು ಬಲಿದಾನದ ಮೂಲಕ ಆಚರಿಸುತ್ತಾರೆ.

ಇಸ್ಲಾಂನ ಕಾಲಗಣನೆ ಚಂದ್ರದರ್ಶನವನ್ನು ಅವಲಂಬಿಸಿದೆ. ಆದುದರಿಂದಲೇ ಕೆಲವು ವೇಳೆ ಚಂದ್ರದರ್ಶನವಾಗದಿದ್ದಲ್ಲಿ ಹಬ್ಬದ ದಿವಸ ಇಪ್ಪತ್ತನಾಲ್ಕು ಗಂಟೆ ಮುಂದಕ್ಕೆ ಹೋಗುತ್ತದೆ. ಬಾಲಚಂದ್ರನನ್ನು ಕಂಡ ಹತ್ತನೆಯ ದಿವಸ ಈ ಹಬ್ಬವನ್ನು ಆಚರಿಸುತ್ತಾರೆ. ಆ ದಿವಸ ಬೆಳಿಗ್ಗೆ ಸ್ನಾನವಾದ ಕೂಡಲೇ 'ಸದಖಾ' ಅಥವಾ ದಾನವನ್ನು ಕೊಡುತ್ತಾರೆ. ತಮ್ಮ ಸಂಪಾದನೆಯಲ್ಲಿ ನಲವತ್ತನೆಯ ಒಂದಂಶವನ್ನು ಧಾನ್ಯ, ಬಟ್ಟೆ ಹಣದ ರೂಪದಲ್ಲಿ ಫಕೀರರಿಗೂ ಬಡವರಿಗೂ ದಾನ ಕೊಡಬೇಕೆಂಬ ನಿಯಮವಿದೆ. ಇದಾದ ನಂತರ ಗಂಡಸರು ಮತ್ತು ಮಕ್ಕಳು ಮಡಿ ಬಟ್ಟೆ ಧರಿಸಿ ನಗರದ ಹೊರಗೆ ಇರುವ 'ಈದ್‌ಗಾಹ್' ಅಂದರೆ ಪ್ರಾರ್ಥನಾ ಸ್ಥಳಕ್ಕೆ ನಮಾಜು ಅಂದರೆ ಪ್ರಾರ್ಥನೆ ಮಾಡಲು ಹೋಗುತ್ತಾರೆ. ಪ್ರಾತಃಕಾಲ ಸುಮಾರು ಹತ್ತು ಗಂಟೆಯ ಸಮಯಕ್ಕೆ ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ. ಈ ಪ್ರಾರ್ಥನೆ ನಿಜವಾಗಿಯೂ ಬಹಳ ಆಕರ್ಷಕ ಮತ್ತು

ಪ್ರಭಾವಶಾಲಿಯಾಗಿರುತ್ತದೆ, ಮುಖ್ಯ ಖಾಜೀ ಅಥವಾ ಪೇಶ್ ಇಮಾಮ್ ಅವರ ಹಿಂದೆ ಸಾಲುಸಾಲಾಗಿ ನಿಂತು 'ಅಲ್ಲಾಹು ಅಗ್ಬರ್', 'ಅಲ್ಲಾಹು ಅಗ್ಬರ್' ಅಂದರೆ ದೇವರು ದೊಡ್ಡವನು, ದೇವರು ದೊಡ್ಡವನು ಎಂಬ ಘೋಷಣೆಗಳೊಂದಿಗೆ ಸಾಮೂಹಿಕವಾಗಿ ಎಲ್ಲರೂ ತಲೆ ತಗ್ಗಿಸುವ, ಕುಳಿತುಕೊಳ್ಳುವ, ಏಳುವ ಮತ್ತು ದೇವರಿಗೆ ಶರಣು ಹೋಗುವ ಆ ಅಭೂತಪೂರ್ವ ದೃಶ್ಯ ರೋಮಾಂಚನಕಾರಿಯಾಗಿಯೂ ನಯನಮನೋಹರವಾಗಿಯೂ ಇರುತ್ತದೆ. ನಮಾಜಿನ ನಂತರ ಪೇಶ್ ಇಮಾಮ್ ಅವರು ವೇದಿಕೆಯ ಮೇಲೆ ನಿಂತು ಅರಬ್ಬಿ ಮತ್ತು ಉರ್ದು ಭಾಷೆಗಳಲ್ಲಿ ಈ ಹಬ್ಬದ ಮಹತ್ವ ಕುರಿತು ಭಾಷಣ ಮಾಡಿ ನೆರೆದ ಜನರಿಗೆ ಸಂಬೋಧನೆ ಮಾಡುತ್ತಾರೆ. ಇದಕ್ಕೆ 'ಖುತ್‌ಬಾ' ಎನ್ನುತ್ತಾರೆ. ಇದಾದ ನಂತರ ಒಬ್ಬರನ್ನೊಬ್ಬರು ಆಲಿಂಗನ ಮಾಡಿಕೊಳ್ಳುವುದು ಕೈಕುಲುಕುವುದು, "ಈದ್ ಮುಬಾರಕ್" ಅಂದರೆ ಈ ಹಬ್ಬ ನಿಮಗೆ ಶುಭವನ್ನುಂಟುಮಾಡಲಿ ಎನ್ನುವುದು ಗಮನಾರ್ಹ. ಈ ಸಂದರ್ಭದಲ್ಲಿ ಬಡವ ಬಲ್ಲಿದ, ಶತ್ರು–ಮಿತ್ರ, ಪರಿಚಿತ ಅಪರಿಚಿತ ಎಂಬ ಯಾವ ಭೇದಭಾವವು ಯಾರಲ್ಲೂ ಇಲ್ಲದೆ ನಾವೆಲ್ಲರೂ ಸಹೋದರರು, ಇಡೀ ಸಮಾಜವು ಒಂದೇ ಅವಿಭಾಜ್ಯ ಎಂಬ ಭಾವನೆ ಎಲ್ಲರ ಮನಸ್ಸಿನಲ್ಲೂ ಇರುತ್ತದೆ.

ಬಕ್ರೀದ್ ಮತ್ತು ರಂಜಾನ್ ಹಬ್ಬಗಳಲ್ಲಿ ನಮಾಜಿನಿಂದ ಮನೆಗಳಿಗೆ ಮರಳಿದಾಗ ಅವರ ಸಹೋದರಿಯರು ಸುಣ್ಣ ಮಿಶ್ರಿತ ಅರಿಶಿನದ ನೀರಿನ ಪಾತ್ರೆಗಳನ್ನು ಕೈಯಲ್ಲಿ ಹಿಡಿದು ಬಾಗಿಲ ಬಳಿಯೇ ನಿಂತಿರುತ್ತಾರೆ. ತುಂಬಾ ಉತ್ಸಾಹದಿಂದಿರುವ ಇವರಿಗೆ ತಮ್ಮ ಅಣ್ಣತಮ್ಮಂದಿರಿಗಾದ ದೃಷ್ಟಿಯನ್ನು ತೆಗೆಯಲು ಏನು ಗುಲ್ಲು ಅವಸರವು! ಈ ದೃಷ್ಟಿ ತೆಗೆಯುವ ನೆಪದಲ್ಲಿ ಹಬ್ಬದ 'ಈದೀ' ಅಂದರೆ ಇನಾಂ ವಸೂಲು ಮಾಡದೇ ಬಿಡುವುದೇ ಇಲ್ಲ. ಪ್ರಾರ್ಥನೆಯಿಂದ ಹಿಂತಿರುಗಿದ ನಂತರ ಸಾಮಾನ್ಯವಾಗಿ ಕಿರಿಯರು ತಮ್ಮ ಅಜ್ಜ–ಅಜ್ಜಿ, ತಂದೆ–ತಾಯಿ, ಅಣ್ಣ-ಅಕ್ಕಂದಿರು ಮೊದಲಾದ ಹಿರಿಯರ ಬಳಿ ಹೋಗಿ ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸುವುದು ಮುಸ್ಲಿಮರ ಒಂದು ಪದ್ಧತಿ. ಆಗ ಆ ಹಿರಿಯರು ಅವರನ್ನು ಯಥೇಚ್ಛವಾಗಿ ಹರಸುತ್ತಾರೆ. ಈ ಹಬ್ಬದಲ್ಲಿ ಎಲ್ಲರಿಗೂ ಎಲ್ಲಾ ಮನೆಗಳಲ್ಲೂ ಆಮಂತ್ರಣ. ಸ್ವಲ್ಪವಾದರೂ ತಿನ್ನಲೇಬೇಕು. ಉಕ್ಕಿ ಬರುವ ಆನಂದವನ್ನು ಎಲ್ಲರೂ ಹಂಚಿಕೊಳ್ಳಬೇಕು. ಒಟ್ಟಿನಲ್ಲಿ ಮುಸ್ಲಿಮರ ಹಬ್ಬಗಳ ಆಚರಣೆಯಲ್ಲಿ ಒಂದು ಬಗೆಯ ವೈಶಿಷ್ಟ್ಯವಿದೆ. ಅವು ಅವರಲ್ಲಿ ಒಂದು ಬಗೆಯ ಚೈತನ್ಯವನ್ನು ಸೋದರಭಾವನೆಯನ್ನು ಉಂಟುಮಾಡುತ್ತವೆ.

ಭಾರತ, ಈಜಿಪ್ಟ್ ಮೊದಲಾದ ದೇಶಗಳಲ್ಲಿ ಬಕ್ರೀದ್ ಮತ್ತು ರಂಜಾನ್ ಹಬ್ಬದ ದಿವಸ ಜನರು ತಮ್ಮ ಬಂಧುಗಳ ಗೋರಿಗಳ ಬಳಿಗೆ ಹೋಗಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಪ್ರಾರ್ಥನೆ ಮಾಡುತ್ತಾರೆ.

ಕೆ. ಮೊಹಮ್ಮದ್ ಶರೀಫ್



ಪ್ರತಿಷ್ಠೆಗಾಗಿ ಉಪಾಯಗಳನ್ನು ಆಶ್ರಯಿಸಬಾರದು. ಸಹೃದಯನಾಗಿರುವುದರಿಂದ ಪ್ರತಿಷ್ಠೆ ತಾನಾಗಿ ನಿನ್ನನ್ನು ಆಶ್ರಯಿಸುತ್ತದೆ.

—ಪರಮಹಂಸ

ಸಕಾಲದಲ್ಲಿ ಯೋಗ್ಯ ಕ್ರಮ ತೆಗೆದುಕೊಳ್ಳಲು ತಪ್ಪುವ ಮೂರ್ಖನು ತಾನೂ ಕೆಡುತ್ತಾನೆ ಇತರರನ್ನೂ ಕೆಡಿಸುತ್ತಾನೆ.

—ಭರ್ತೃಹರಿ

ತಮ್ಮಲ್ಲಿ ಮತಭೇದಕ್ಕಿಂತ ಮತೈಕ್ಯ ಎಲ್ಲಿ ಆಗುತ್ತದೆಂದು ಜನರು ಗಮನಿಸುತ್ತ ಹೋದರೆ ವಿಶ್ವದಲ್ಲಿ ಕೋಪ-ಜಗಳ, ತಿಕ್ಕಾಟಗಳು ತಾವಾಗಿಯೇ ಓಡಿ ಹೋಗುತ್ತಿದ್ದವು.

—ಅಡಿಸನ್

ಜನರ ಸ್ಮರಣೆಯಲ್ಲಿ ಉಳಿಯುವಂಥ ಯಾವುದೊಂದು ಒಳ್ಳೆಯ ಕೆಲಸವನ್ನು ಮಾಡಿದರೂ ಅದು ನನ್ನ ಸ್ಮಾರಕವಾಗಿರಬಲ್ಲದು. ಅದಿಲ್ಲದೆ ಎಂತಹ ಸ್ಮಾರಕವನ್ನು ಸೃಜಿಸಿದರೂ ಅದರಿಂದ ನನ್ನ ಸ್ಮರಣೆ ಉಳಿಯಲಾರದು.

—ಸಿಲಾಸ್

ಮಕ್ಕಳಿಲ್ಲದವರಿಗೊಂದು ಹೊಸ ಆಶಾಕಿರಣ

ನೂರಾರು ಮಂದಿ ಭಾರತೀಯ ದಂಪತಿಗಳು ತಮಗೆ ಬೇಕಾದ ಮಗುವನ್ನು ಪಡೆಯಲಾರದವರಾಗಿದ್ದಾರೆ. ಆಧುನಿಕ ವೈದ್ಯಶಾಸ್ತ್ರ ಕೊನೆಗಾದರೂ ಈ ಸಮಸ್ಯೆಯತ್ತ, ಅದಕ್ಕೆ ಅರ್ಹವಾದಂಥ ರೀತಿಯಲ್ಲಿ ಗಮನ ಹರಿಸಿದ.

ದಿಲೀಪ್ ಮತ್ತು ಉಷಾ ಪಟವರ್ಧನ್* ಮದುವೆಯಾದಾಗ, ಆ ಕೂಡಲೇ ಕುಟುಂಬದ ಹಾದಿಯಲ್ಲಿ ಮುನ್ನಡೆಯಬಾರದೆಂದು — ಅಂದರೆ, ಬೇಗನೆ ಮಕ್ಕಳನ್ನು ಪಡೆಯಬಾರದೆಂದು — ನಿರ್ಧರಿಸಿದರು. ದಿಲೀಪನಿಗೆ ಇನ್ನೂ ಒಳ್ಳೆಯ ಉದ್ಯೋಗ ದೊರೆಯುವವರೆಗೆ, ಕೆಲವು ವರ್ಷಗಳ ತನಕ ಕಾಯಬಹುದೆಂದೂ ಅನಂತರದಲ್ಲಿ ಒಂದೆರಡು ವರ್ಷಗಳ ಅಂತರವಿರುವಂತೆ ಯೋಜಿಸಿಕೊಂಡು ಎರಡು ಅಥವಾ ಮೂರು ಮಕ್ಕಳನ್ನು ಪಡೆಯಬಹುದೆಂದೂ ಅವರು ಆಲೋಚಿಸಿಕೊಂಡಿದ್ದರು.

ಐದು ವರುಷಗಳೇ ಕಳೆದುವು. ಎರಡು ವರುಷಗಳಿಗಿಂತಲೂ ಹೆಚ್ಚು ಕಾಲದಿಂದ ಅವರು ಪ್ರಯತ್ನಿಸುತ್ತಿದ್ದರೂ ಉಷಾ ಇನ್ನೂ ಗರ್ಭವತಿಯಾಗಿರಲಿಲ್ಲ. ಪ್ರತಿ ತಿಂಗಳೂ ಹೊಸ ನಿರಾಶೆಯನ್ನು ಹೊತ್ತು ತರುತ್ತಿತ್ತು. ಹೆಣ್ಣಾಗಿ ತಾನು ವಿಫಲಳಾದೆನೆಂದು ಉಷಾ ಭಾವಿಸಿದಳು. ಗಂಡಾಗಿ ದಿಲೀಪನ ಭಾವನೆಯೂ ಇದೇ ಬಗೆಯದಾಗಿತ್ತು. ತಾವು ಈ ವಿಷಯದಲ್ಲಿ ಒಬ್ಬಂಟಿಗರಾಗಿದ್ದೇವೆಂದು ಅವರು ಖಚಿತವಾಗಿ ನಂಬಿದ್ದರು.

ಉಷಾ ಮತ್ತು ದಿಲೀಪರು ಮನಗಾಣಲು ಸಾಧ್ಯವಾಗದೆ ಇದ್ದ ಸಂಗತಿಯೆಂದರೆ — ಮಕ್ಕಳನ್ನು ಪಡೆಯಬೇಕೆಂದು ಬಹುವಾಗಿ ಹಂಬಲಿಸಿದರೂ ಆ ಹಂಬಲ ತೃಪ್ತಿಪಡದಂಥ ಏಕೈಕ ದಂಪತಿಗಳ ತಂಡ ಅವರಾಗಿರದೆ, ಅಂಥ ನೂರಾರು ತಂಡಗಳಲ್ಲಿ ಅವರೂ ಒಬ್ಬರಾಗಿದ್ದರು ಎಂಬುದನ್ನು. ಈ ಗಂಡು-ಹೆಣ್ಣುಗಳು ಬಹುತೇಕವಾಗಿ ಪಾಪ, ನಿರಾಶೆ ಮತ್ತು ಸಾಮರ್ಥ್ಯಹೀನತೆಯ

—[illegible] ಮಾರ್ಚ್ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾಗಿರುವ ಡಾ॥ [illegible] ಕಾರ್ಲ್ಸ್ ಅವರ "ನ್ಯೂ ಹೋಪ್ ಫಾರ್ ದಿ ಚೈಲ್ಡ್‌ಲೆಸ್" ಲೇಖನದ ಅನುವಾದ.

* ಇವು ನಿಜವಾದ ಹೆಸರುಗಳಲ್ಲ.

ಭಾವನೆಗಳಿಗೆ ಬಲಿಯಾಗಿರುತ್ತಾರೆ. ವಾಸ್ತವವಾಗಿ ಭಾರತದಲ್ಲಿ ಸುಮಾರು ೧೫ ದಶಲಕ್ಷ ಮಂದಿ ತರುಣ ದಂಪತಿಗಳು—ಒಂದು ಅಂದಾಜಿನಂತೆ ಪ್ರತಿ ಹತ್ತು ದಂಪತಿಗಳಲ್ಲಿ ಒಂದು ದಂಪತಿಗಳ ತಂಡ—ಮಕ್ಕಳಿಲ್ಲದವರಾಗಿದ್ದಾರೆ. ಇತ್ತೀಚಿನವರೆಗೂ ಬಹುಮಟ್ಟಿಗೆ ನಿರ್ಲಕ್ಷ್ಯಕ್ಕೊಳಗಾಗಿದ್ದ ಗಣನೀಯ ಅಲ್ಪ ಸಂಖ್ಯಾತ ವರ್ಗ ಇವರದಾಗಿತ್ತು.

ಏಕೆ ಹೀಗಾಗಿತ್ತು? ಏಕೆಂದರೆ ಬಂಜೆತನದ ಕಾರಣಗಳ ಬಗ್ಗೆ ನಮಗೆ ತಿಳಿದಿದ್ದುದು ತೀರ ಅಲ್ಪವಾಗಿತ್ತು. ಮುಂಬಯಿಯ ಸ್ತ್ರೀರೋಗ ಶಾಸ್ತ್ರಜ್ಞ ಶಸ್ತ್ರಚಿಕಿತ್ಸಕರಾದ ಡಾ|| ರುಸ್ತುಮ್ ಸೂನಾವಾಲಾ ಅವರು ಹೇಳುವಂತೆ, "ಈ ಸಮಸ್ಯೆಯನ್ನು ಪ್ರಕೃತಿಗೆ ಬಿಟ್ಟುಬಿಡಬೇಕೆಂದೂ ಕಾಲಾನುಕ್ರಮದಲ್ಲಿ ಎಲ್ಲವೂ ಸರಿಹೋಗುತ್ತದೆಂದೂ ಬಹು ಮಂದಿ ವೈದ್ಯರು ತಮ್ಮ ಬಳಿಗೆ ಬಂದ ರೋಗಿಗಳಿಗೆ ಉಪದೇಶಮಾಡಿ ಕೈಚೆಲ್ಲಿ ಕುಳಿತುಬಿಡುತ್ತಿದ್ದರು".

ಅದೃಷ್ಟವಶಾತ್ ಈ ಪರಿಸ್ಥಿತಿ ಬದಲಾಗುತ್ತಿದೆ. ಸ್ತ್ರೀರೋಗ ಶಾಸ್ತ್ರಜ್ಞರೂ ಅಂತಃಸ್ರಾವ ಶಾಸ್ತ್ರಜ್ಞರೂ ಆದ ಡಾ|| ರಮಾ ವೈದ್ಯರು ಅವರು ಹೀಗೆನ್ನುತ್ತಾರೆ: "ಮಕ್ಕಳಿಲ್ಲದವರತ್ತ ವೈದ್ಯರುಗಳು ತಮ್ಮ ಗಮನ ಹರಿಸುತ್ತಿದ್ದಾರೆ. ಆಧುನಿಕವೂ ಸುಸಜ್ಜಿತವೂ ಆದ ಬಂಜೆತನದ ಚಿಕಿತ್ಸಾಲಯಗಳು ದೆಹಲಿ, ಮದ್ರಾಸ್, ಕಲ್ಕತ್ತ ಮತ್ತು ಮುಂಬಯಿಯ ಪ್ರಮುಖ ಆಸ್ಪತ್ರೆಗಳಲ್ಲಿ ಕೆಲಸಮಾಡತೊಡಗಿದ್ದು, ಹಲವಾರು ಹೊಸ ಪ್ರಕರಣಗಳೊಂದಿಗೆ ವ್ಯವಹರಿಸುತ್ತಿವೆ".

ಕಾರಣಗಳು ಮತ್ತು ಕಾರಕಾಂಶಗಳು: ಉಷಾ ಮತ್ತು ದಿಲೀಪರು ಮಾಡಿದಂತೆ ಮಕ್ಕಳನ್ನು ಪಡೆಯುವುದನ್ನು ತಡಮಾಡುವ ಪ್ರವೃತ್ತಿಯೇ ಮಕ್ಕಳಿಲ್ಲದಿರುವವರ ಸಂಖ್ಯೆ ಹೆಚ್ಚುತ್ತ ಹೋಗುವುದಕ್ಕೆ ಒಂದು ಕಾರಣವಾಗಿದೆ ಎಂಬುದನ್ನು ಡಾ|| ವೈದ್ಯ ಅವರು ಒತ್ತಿಹೇಳುತ್ತಾರೆ. ಆಕೆ ಹೇಳುವಂತೆ, "ಗಂಡು-ಹೆಣ್ಣುಗಳಿಬ್ಬರಿಗೂ ಇಪ್ಪತ್ತರ ಪೂರ್ವದ ಹಾಗೂ ನಡುವಣ ಇಪ್ಪತ್ತರ ವರುಷಗಳು ಫಲವತ್ತತೆಯ ತುತ್ತತುದಿಯ ಅವಧಿಯಾಗಿರುತ್ತವೆ. ವರುಷಗಳು ಉರುಳುತ್ತ ಹೋದಂತೆ, ಅದರಲ್ಲಿಯೂ ೩೦ನ್ನು ದಾಟಿದ ತರುವಾಯ ಹೆಣ್ಣು ಗರ್ಭ ಧರಿಸುವ ಅವಕಾಶಗಳು ಕಡಿಮೆಯಾಗುತ್ತ ಹೋಗುತ್ತವೆ".

ಇದು ಹೇಗೇ ಇರಲಿ, ಬಂಜೆತನ ಯಾವುದೇ ವಯಸ್ಸಿನಲ್ಲಿ ಕಾಣಿಸಿಕೊಳ್ಳಬಹುದು ಹಾಗೂ ಇದಕ್ಕೆ ಅನೇಕ ಕಾರಣಗಳಿರಬಹುದು. ಉದಾಹರಣೆಗೆ ಶಸ್ತ್ರಚಿಕಿತ್ಸೆಗಳು ಮತ್ತು ಹಿಂದಿನ ಅನಾರೋಗ್ಯಗಳು ಕೆಲವೊಮ್ಮೆ ಸಮಸ್ಯೆಗಳನ್ನು ಸೃಷ್ಟಿಸಬಹುದು. ಕ್ಷಯ, ಮೇಹರೋಗ, ಗಾಸಿಗೊಳಗಾಗಿರುವಂಥ ಅಪೆಂಡಿಕ್ಸ್

—ಇವೆಲ್ಲ ಗರ್ಭನಾಳಕ್ಕೆ ಅಪಾಯವನ್ನುಂಟುಮಾಡಬಹುದು ಅಥವಾ ಗರ್ಭನಾಳದಲ್ಲಿ ಅಡ್ಡಿಯನ್ನೊಡ್ಡಬಹುದು. ಇದರ ಪರಿಣಾಮವಾಗಿ, ವೀರ್ಯಾಣು ಅಂಡಾಣುವನ್ನು ಗರ್ಭೀಕರಿಸಲಾರದೆ ಹೋಗುತ್ತದೆ. ಬಾಲ್ಯಕಾಲದ ಕೆಲವೊಂದು ರೋಗಗಳು ಗಂಡಿನಲ್ಲಿ ವೀರ್ಯಾಣು ಉತ್ಪಾದನೆಗೆ ತಡೆಯೊಡ್ಡಿ ಅವನನ್ನು ಬಂಜನನ್ನಾಗಿಸಬಹುದು; ಮಾನಸಿಕ ಬಿಗುವುಗಳೂ ಗಂಡನ್ನು ನಿರ್ವೀರ್ಯನನ್ನಾಗಿಸಬಹುದು.

ಕುಟುಂಬದ ಸದಸ್ಯರ ಒತ್ತಾಯದ ಮೇರೆಗೆ ಉಷಾ ಮತ್ತು ದಿಲೀಪರು ತಜ್ಞರ ಸಲಹೆಯನ್ನು ಕೋರಿದರು. ದಿಲೀಪನಿಗೆ ವೀರ್ಯಾಣುರೋಧದ ತೊಂದರೆ ಇತ್ತೆಂಬುದನ್ನು ಪರೀಕ್ಷೆಗಳು ತೋರಿಸಿಕೊಟ್ಟವು. ಇದು ಬಾಲ್ಯದಲ್ಲಿ ಸಿಡುಬಿನಿಂದ ಆಗಿದ್ದಂಥ ಒಂದು ತೊಂದರೆ. ಇದರಿಂದಾಗಿ ವೃಷಣಗಳಿಂದ ವೀರ್ಯಾಣುಗಳನ್ನು ಹೊರಕ್ಕೆ ಕೊಂಡೊಯ್ಯುವ ನಳಿಕೆಯ ವ್ಯವಸ್ಥೆಯಲ್ಲಿ ನಡುವೆ ಎಲ್ಲಿಯೋ ವೀರ್ಯಾಣುಗಳಿಗೆ ತಡೆಯುಂಟಾಗುತ್ತಿತ್ತು. ಈ ಅಡ್ಡಿಯನ್ನು ಹಾದು ನಿಲ್ಲಲು ನೆರವಾಗುವಂಥ ಸರಳ ಶಸ್ತ್ರಚಿಕಿತ್ಸೆಯೊಂದು ಬಹು ಬೇಗ ಅವನ ವೀರ್ಯಾಣು ಸಂಖ್ಯೆಯನ್ನು ಸಾಮಾನ್ಯ ಮಟ್ಟಕ್ಕೆ ತಂದಿತು. ಆರು ತಿಂಗಳ ಒಳಗಾಗಿ ಉಷಾ ಗರ್ಭಧರಿಸಿದಳು. ಇಂದು ಈ ದಂಪತಿಗಳು ಆರೋಗ್ಯಶಾಲಿಗಳಾಗಿರುವ ಮೂರು ಮಕ್ಕಳ ಹೆಮ್ಮೆಯ ತಾಯಿ-ತಂದೆಯರಾಗಿದ್ದಾರೆ.

ಆದರೆ, ಬಂಜೆತನದ ಕಾರಣವನ್ನು ಸರಿಪಡಿಸಬಹುದಾಗಿರುವ ಸಂದರ್ಭದಲ್ಲಿಯೂ ಸ್ವತಃ ಶಸ್ತ್ರಚಿಕಿತ್ಸೆಯೇ ಗರ್ಭಧಾರಣೆಯ ಭರವಸೆ ನೀಡಲಾರದು. ಡಾ. ಸೂನಾವಾಲಾ ಅವರೆನ್ನುವಂತೆ, "ಸಾಮಾನ್ಯ ದಂಪತಿಗಳಲ್ಲಿಯೂ ವೀರ್ಯಾಣು ಅಂಡಾಣುವನ್ನು ಯಶಸ್ವಿಯಾಗಿ ಗರ್ಭೀಕರಿಸುವಂತೆ ವ್ಯವಸ್ಥೆ ಮಾಡಲು ಪ್ರಕೃತಿ ತನ್ನದೇ ಆದ ಕಾಲವನ್ನು ತೆಗೆದುಕೊಳ್ಳುತ್ತದೆ. ವಾಸ್ತವವಾಗಿ, ಅನೇಕ ವಿಭಿನ್ನ ಕಾರಕಾಂಶಗಳು ಗರ್ಭಧಾರಣೆಗೆ ನೆರವಾಗುತ್ತವೆ. ಇವುಗಳಲ್ಲಿ ಆಕಸ್ಮಿಕದ ಅಂಶವೂ ಒಂದಾಗಿರುತ್ತದೆ. ಹೀಗಾಗಿ, ಒಂದು ವರ್ಷಕ್ಕೂ ಹೆಚ್ಚು ಕಾಲದ ನಿಯತ ಸಂಭೋಗದ ಅವಧಿ ಮುಗಿಯುವವರೆಗೂ ದಂಪತಿಗಳಾರೂ ತಮ್ಮನ್ನು ಬಂಜರೆಂದು ಪರಿಗಣಿಸಬಾರದು.

ವ್ಯಾಪಕ ಪರೀಕ್ಷೆಗಳು : ಮುಂದುವರಿದ ಬಂಜೆತನದ ಸಮಸ್ಯೆಗಳಿಗೆ ವೈದ್ಯಕೀಯ ತಜ್ಞರ ಶ್ರದ್ಧಾಪೂರ್ಣ ಪತ್ತೇದಾರಿ ಕೆಲಸ ಅಗತ್ಯವಾಗುತ್ತದೆ. ಈ ತಜ್ಞರು ಶ್ರಮವಹಿಸಿ ಬಂಜೆತನಕ್ಕೆ ಈ ಸಂಗತಿ ಕಾರಣವಾಗಿಲ್ಲ, ಈ ಸಂಗತಿ ಕಾರಣವಾಗಿಲ್ಲ ಎಂದು ಒಂದಾದ ಮೇಲೆ ಒಂದರಂತೆ ಬಂಜೆತನದ ಕಾರಣ

ಗಳನ್ನು ತೊಡೆದುಹಾಕುತ್ತ ಹೋಗುತ್ತಾರೆ. ಇದು ಭಾವನಾತ್ಮಕವಾಗಿ ತ್ರಾಸದಾಯಕವಾದ ಹಾಗೂ ಆರ್ಥಿಕವಾಗಿಯೂ ಹೊರೆಯಾಗುವಂಥ ಪ್ರಕ್ರಿಯೆ—ಅನೇಕ ಸಂದರ್ಭಗಳಲ್ಲಿ ನೂರಾರು ರೂಪಾಯಿಗಳ ವೆಚ್ಚವನ್ನು ಹೊರಬೇಕಾಗುತ್ತದೆ.

ಇಷ್ಟಾಗಿಯೂ ಬಹುಮಂದಿಗೆ ಮಕ್ಕಳನ್ನು ಪಡೆಯಬೇಕೆಂಬ ಆಸೆ ಅದಮ್ಯವಾಗಿರುತ್ತದೆ. ಬಹುತೇಕವಾಗಿ ಬಂಜೆತನಕ್ಕೆ ಅಂಟಿಕೊಂಡಿರುವ ಸಾಮಾಜಿಕ ಕಳಂಕವೂ ಇದಕ್ಕೆ ಆಂಶಿಕವಾಗಿ ಕಾರಣವಾಗಿರುತ್ತದೆ. ಡಾ॥ ಸೂನಾವಾಲಾ ಅವರು ಈ ಬಗ್ಗೆ ಹೀಗೆನ್ನುತ್ತಾರೆ: "ಸಹಾನುಭೂತಿಪರರಾಗಿಲ್ಲದಿರುವಂಥ ಅತ್ತೆಮಾವಂದಿರು ಮಕ್ಕಳಾಗಿಲ್ಲದಿರುವಂಥ ಸೊಸೆಯನ್ನು ಮಾತಿನಿಂದಲೇ ಇರಿದುಕೊಲ್ಲುತ್ತಾರೆ. ಇಂಥ ಸಂದರ್ಭಗಳಲ್ಲಿ, ಹತಾಶರಾದ ದಂಪತಿಗಳು ಯಾವುದೇ ವಿಧಾನವನ್ನಾದರೂ ಪ್ರಯೋಗಿಸಿ ನೋಡಲು ಸಿದ್ಧರಾಗಿರುತ್ತಾರೆ—ಬೂಟಾಟಿಕೆಯ ವೈದ್ಯರಾದ ಧಾರ್ಮಿಕಭಂಡರ ಮೊರೆಹೋಗುವುದೂ ಉಂಟು.

ಪ್ರತಿ ತಿಂಗಳೂ ಗರ್ಭಧಾರಣೆಯ ಸಂಭವ ಹೆಚ್ಚಾಗಿರುವ ೧೨ ರಿಂದ ೩೬ ಘಂಟೆಗಳ ಅವಧಿಯಲ್ಲಿ ದಂಪತಿಗಳು ವಾಸ್ತವವಾಗಿ ಸಂಭೋಗ ನಡೆಸುತ್ತಿದ್ದಾರೆಯೋ ಇಲ್ಲವೇ ಎಂಬುದು ಅರ್ಹ ವೈದ್ಯ ಮೊದಲಿಗೇ ತಿಳಿಯಬಯಸುವ ಸಂಗತಿಗಳಲ್ಲಿ ಒಂದು. ಕೆಳದೇಹದ ತಾಪವನ್ನಳೆಯುವ ವಿಶಿಷ್ಟ ತಾಪಮಾಪಿಯನ್ನು ಬಳಸಿ ಪ್ರತಿ ದಿನ ತನ್ನ ತಾಪಮಾನವನ್ನು ದಾಖಲಿಸುವಂತೆ ಹೆಣ್ಣಿಗೆ ಸೂಚಿಸುವ ಮೂಲಕ ಈ ಅವಧಿಯನ್ನು ಸಾಮಾನ್ಯವಾಗಿ ನಿರ್ಧರಿಸಲಾಗುತ್ತದೆ. ಅಂಡಾಣು ಬಿಡುಗಡೆಯಾದ ಅನಂತರವಲ್ಲಿ ಅನೇಕ ತಿಂಗಳುಗಳವರೆಗೆ ಪ್ರತಿ ತಿಂಗಳೂ ತಾಪಮಾನದಲ್ಲಿ ಕಂಡುಬರುವ ನಿಯತವಾದ ಅಲ್ಪ ಪ್ರಮಾಣದ ಏರಿಕೆಯನ್ನು ಗಮನಿಸುವುದರ ಮೂಲಕ ವೈದ್ಯರು ಮುಂದೆ ಅಂಡಾಣು ಬಿಡುಗಡೆಯಾಗುವ ಕಾಲವನ್ನು ಅಂದಾಜು ಮಾಡಬಹುದು ಹಾಗೂ ಆ ಅವಧಿಗೆ ಆದಷ್ಟು ಹತ್ತಿರವಾಗಿರುವಂತೆ ಸಂಭೋಗ–ಅನುಸೂಚಿಯನ್ನು ಶಿಫಾರಸು ಮಾಡಬಹುದು. ಸಂಭೋಗಕಾಲ ಇದಕ್ಕೆ ಕಾರಣವಲ್ಲ ಎಂಬುದು ಒಮ್ಮೆ ಸಿದ್ಧವಾದರೆ, ವೈದ್ಯರು ಮತ್ತಷ್ಟು ವ್ಯಾಪಕವಾದ ಪರೀಕ್ಷೆಗಳನ್ನು ಗೊತ್ತುಪಡಿಸುತ್ತಾರೆ.

ದಂಪತಿಗಳಿಬ್ಬರೂ ಮೊದಲಿನಿಂದಲೂ ಪರೀಕ್ಷೆಗಳಲ್ಲಿ ಪಾಲ್ಗೊಳ್ಳಬೇಕೆಂಬ ವಿಚಾರವನ್ನು ತಜ್ಞರು ಒಪ್ಪುತ್ತಾರೆ. "ಏಕೆ?" "ಏಕೆ ಎಂದರೆ, ಬಂಜೆತನದ

ಶೇ. ೪೦ರಷ್ಟು ಸಮಸ್ಯೆಗಳ ಮೂಲವನ್ನು ಪುರುಷರಲ್ಲಿಯೂ ಶೇ. ೪೦ರಷ್ಟನ್ನು ಸ್ತ್ರೀಯರಲ್ಲಿಯೂ ಶೇ. ೧೦ರಷ್ಟನ್ನು ಸ್ತ್ರೀ-ಪುರುಷ ಸಂಯೋಗವಲ್ಲಿಯೂ ಅರಸಬಹುದಾಗಿದೆ" ಎನ್ನುತ್ತಾರೆ. ಸಮಾಲೋಚಕ ಸ್ತ್ರೀರೋಗ ಶಾಸ್ತ್ರಜ್ಞರೂ ಪ್ರಸೂತಿ ತಜ್ಞರೂ ಆದ ಡಾ॥ ಸೆರ್ಗೀಶ್ ಮೋತಾ ಷಾ (ಉಳಿದ ಶೇ. ೧೦ರಷ್ಟು ಪ್ರಕರಣಗಳಲ್ಲಿ ವೈದ್ಯರು ಸಮಸ್ಯೆಯನ್ನು ಪಟ್ಟು ಮಾಡಿ ತೋರಿಸಬಲ್ಲರು).

ಮೊದಲಿಗೆ ಅನೇಕ ಗಂಡಂದಿರು ಯಾವುದೇ ಪರೀಕ್ಷೆ ಹಾಗೂ ತಪಾಸಣೆಗೆ ಒಳಪಡಲು ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಇದಕ್ಕೆ ಕಾರಣವೇನೆಂದರೆ ಬಹುಪಾಲು ಗಂಡಸರು ಸಂಭೋಗ ಸಾಮರ್ಥ್ಯವನ್ನೂ ಫಲವತ್ತತೆಯನ್ನೂ ಸಮೀಕರಿಸಿಬಿಡುವುದು. ಆದರೆ, ವಾಸ್ತವವಾಗಿ ಒಂದೇ ಒಂದು ವೀರ್ಯಾಣು ವನ್ನೂ ಉತ್ಪಾದಿಸದೆ ಗಂಡು ಸಾಮಾನ್ಯ ರೀತಿಯಲ್ಲಿಯೇ ಸಂಭೋಗವನ್ನು ನಡೆಸಬಹುದು.

ಶಸ್ತ್ರಚಿಕಿತ್ಸೆಯಿಂದ ನೇರ್ಪುಗೊಳಿಸುವುದು: ಗಂಡಿನ ಬಂಜತನದ ಕರಾರುವಾಕ್ಕಾದ ಚಿತ್ರವನ್ನು ರೇತಸ್ಸಿನ ಸೂಕ್ಷ್ಮದರ್ಶಕ-ವಿಶ್ಲೇಷಣೆ ಮಾತ್ರವೇ ಕೊಡಬಲ್ಲದು ಹಾಗೂ ಇದು ತುಂಬ ಸರಳವಾದ, ದುಬಾರಿಯಲ್ಲದ ಪರೀಕ್ಷೆ. ಹೀಗಾಗಿ, ಹೆಣ್ಣನ್ನು ದುಬಾರಿ ವೆಚ್ಚದ ಹಾಗೂ ಕೆಲವೊಮ್ಮೆ ಅಸುಖಕರವಾದ ಪರೀಕ್ಷೆಗಳ ಸರಣಿಗೆ ಒಳಪಡಿಸುವುದಕ್ಕೆ ಮೊದಲು ಗಂಡನ್ನು ಈ ಪರೀಕ್ಷೆಗೆ ಒಳಪಡಿಸಬೇಕೆಂದು ಎಲ್ಲ ತಜ್ಞರೂ ಶಿಫಾರಸು ಮಾಡುತ್ತಾರೆ. ವಿಶ್ಲೇಷಣೆಯಲ್ಲಿ ವೈದ್ಯರು, ಒಂದು ಸ್ಖಲನದಲ್ಲಿ ಎಷ್ಟು ವೀರ್ಯಾಣುಗಳಿರುತ್ತವೆ ಎಂಬುದನ್ನು ಪರಿಶೀಲಿಸುತ್ತಾರೆ. ಅಂಡಾಣುವನ್ನು ಫಲಯುಕ್ತವಾಗಿಸಲು ಒಂದೇ ಒಂದು ವೀರ್ಯಾಣು ಸಾಕಾಗುತ್ತದೆಯಾದರೂ ಹೆಣ್ಣಿನ ಜನನಾಂಗದ ನಳಿಕೆಯಲ್ಲಿನ ಪ್ರಯಾಣ ತುಂಬ ದೀರ್ಘವಾದುದು, ಅಪಾಯಕಾರಿಯಾದುದೂ ಆಗಿರುವುದ ರಿಂದ, ಒಂದೇ ಒಂದು ವೀರ್ಯಾಣುವಾದರೂ ಯಶಸ್ವಿಯಾಗಿ ಸಂಯೋಗಗೊಳ್ಳು ವಂತಾಗಬೇಕಾದರೆ ಅಸಂಖ್ಯಾತ ವೀರ್ಯಾಣುಗಳು ಇರುವುದು ಅಗತ್ಯವಾಗುತ್ತದೆ. ಹೀಗಾಗಿ, ೬೦ ದಶಲಕ್ಷ ರೇತಾಂಕ 'ಉತ್ತಮ'ವಾದುದೆನಿಸಿಕೊಳ್ಳುತ್ತದೆ; ಈ ರೇತಾಂಕ ೨೦ ದಶಲಕ್ಷಕ್ಕಿಂತಲೂ ಕಡಿಮೆಯಾಗಿದ್ದರೆ ಪಿತೃತ್ವದ ಸಂಭವ ತೀರ ಕಡಿಮೆಯೆಂದು ಅರ್ಥ.

ಮುಂಬಯಿಯ ಮೂತ್ರಶಾಸ್ತ್ರೀಯ ಶಸ್ತ್ರಚಿಕಿತ್ಸಕರಾದ ಡಾ॥ ಅಜಿತ್ ಫಡಕೆ ಅವರು ಒತ್ತಿ ಹೇಳುವಂತೆ, "ಇವರಲ್ಲಿ ಏಳುಬೀಳುಗಳಿರುವುದು ತುಂಬ ಸಾಮಾನ್ಯ. ಸುಲಭವಾಗಿ ನೇರ್ಪುಗೊಳಿಸಬಹುದಾದಂಥ ಸಂಗತಿಗಳು—ಉದಾಹರಣೆಗೆ,

ಮಾನಸಿಕ ಅಥವಾ ದೈಹಿಕ ಒತ್ತಡ ಅಥವಾ ತುಂಬ ಬಿಗಿಯಾಗಿರುವಂಥ ಒಳ ಉಡುಪು (ಇದು ಭಾರತೀಯರಲ್ಲಿ ತುಂಬ ಸಾಮಾನ್ಯ)—ರೇತಾಂಕವನ್ನು ಗಮನಾರ್ಹವಾಗಿ ಬದಲಾಯಿಸಬಹುದು".

ದಿಲೀಪ್ ಪಟವರ್ಧನ್ ಅವರ ಪ್ರಕರಣದಲ್ಲಾದಂತೆ, ಮತ್ತೆ ಮತ್ತೆ ನಡೆಸಿದ ಪರೀಕ್ಷೆಗಳಲ್ಲಿ ಅತ್ಯಲ್ಪ ವೀರ್ಯಾಣುಗಳು ಕಾಣಿಸಿಕೊಂಡರೆ ಅಥವಾ ಕಾಣಿಸದೆಯೇ ಹೋದರೆ, ವೈದ್ಯರು ವೃಷಣದ ಅಂಗಾಂಶ ಪರೀಕ್ಷೆಯನ್ನು ಸೂಚಿಸಬಹುದು. ಇದು ವೃಷಣದ ಅಂಗಾಂಶವನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸುವ ಪ್ರಕ್ರಿಯೆಯನ್ನೊಳಗೊಂಡಿರುತ್ತದೆ. ಗಂಡಿನ ವೃಷಣಗಳು ಅತ್ಯಲ್ಪ ಪ್ರಮಾಣದ ವೀರ್ಯಾಣುಗಳನ್ನು ಉತ್ಪಾದಿಸುತ್ತವೆಯೆಂಬುದನ್ನು ಈ ಪರೀಕ್ಷೆ ತೋರಿಸಿ ಕೊಟ್ಟಲ್ಲಿ, ಏನೂ ಮಾಡುವಂತಿಲ್ಲ. ಆದರೆ, ದಿಲೀಪ್ ಪ್ರಕರಣದಲ್ಲಾದಂತೆ ಸಾಮಾನ್ಯ ವೃಷಣ-ಅಂಗಾಂಶ ಪರೀಕ್ಷೆ, ವೃಷಣಗಳಿಂದ ಹೊರಬರುವ ನಳಿಕೆಗಳಲ್ಲಿ ತಡೆ ಏನಾದರೂ ಇದೆ ಎಂಬುದನ್ನು ತೋರಿಸಿಕೊಟ್ಟರೆ, ಅಂಥ ತಡೆಯನ್ನು ಶಸ್ತ್ರಚಿಕಿತ್ಸೆಯ ಮೂಲಕ ನಿವಾರಿಸಬಹುದು.

ರೇತಾಂಕ ಸಾಕಷ್ಟು ಪ್ರಮಾಣದಲ್ಲಿ ಇದ್ದದ್ದೇ ಆದರೆ, ಹೆಣ್ಣಿನ ಜನನಾಂಗದ ನಳಿಕೆಯಲ್ಲಿ ವೀರ್ಯಾಣುಗಳು ಕ್ರಿಯಾಶೀಲವಾಗಿರುತ್ತವೆಯೇ ಹಾಗೂ ಸಮರ್ಪಕವಾಗಿ ಮೇಲೇರಿ ನಡೆಯುತ್ತಿವೆಯೇ ಎಂಬುದನ್ನು ಸಂಭೋಗಾನಂತರ ಪರೀಕ್ಷೆಯಿಂದ ನಿಶ್ಚಿತರೂಪದಲ್ಲಿ ಹೇಳಬಹುದು. ಸಂಭೋಗದ ಅನಂತರದ ಕೆಲವು ಘಂಟೆಗಳ ಬಳಿಕ ನಡೆಸಲಾಗುವ ಈ ಪರೀಕ್ಷೆಯಲ್ಲಿ ಹೆಣ್ಣಿನ ಗರ್ಭಗೊರಳಿನ ಬಳಿಯ ದ್ರವದ ಒಂದು ಅಂಶವನ್ನು ತೆಗೆದುಕೊಂಡು ಪರೀಕ್ಷಿಸಲಾಗುತ್ತದೆ. ಇದು ಗರ್ಭಗೊರಳಿನಲ್ಲಿರುವ ಸೂಕ್ಷ್ಮ ಗ್ರಂಥಿಗಳು ಸ್ರವಿಸುವ ದ್ರವವಾಗಿರುತ್ತದೆ. ಇದನ್ನು ಸೂಕ್ಷ್ಮದರ್ಶಕದ ಮೂಲಕ ಪರೀಕ್ಷಿಸಲಾಗುತ್ತದೆ. ಈ ದ್ರವ ಸಾಮಾನ್ಯ ಸ್ವರೂಪದ್ದಾಗಿದ್ದರೆ, ವೀರ್ಯಾಣುಗಳ ಇಲ್ಲದಿರುವಿಕೆ ಅಥವಾ ಕೆಲವೇ ಕೆಲವು ವೀರ್ಯಾಣುಗಳ ಇರುವಿಕೆ ಅಥವಾ ಕ್ರಿಯಾಶೀಲವಾಗಿಲ್ಲದಿರುವಂಥ ವೀರ್ಯಾಣುಗಳ ಇರುವಿಕೆ ಗಂಡಿನಲ್ಲಿ ದೋಷವಿದೆಯೆಂಬುವನ್ನು ಸೂಚಿಸುತ್ತದೆ. ಈ ದ್ರವ ತುಂಬ ಸ್ನಿಗ್ಧವಾಗಿ ಅಥವಾ ಶತ್ರುಭಾವದಲ್ಲಿ ಇದ್ದದ್ದೇ ಆದರೆ, ವೀರ್ಯಾಣು ಜೀವಂತವಾಗಿ ಉಳಿಯಲಾರದು. ಇಂಥ ಸಂದರ್ಭದಲ್ಲಿ ಹೆಣ್ಣನ್ನು ಚಿಕಿತ್ಸೆಗೆ—ಸಾಮಾನ್ಯವಾಗಿ ಸ್ಥಳೀಯ ಸೋಂಕು ನಿವಾರಣೆಯ ಚಿಕಿತ್ಸೆಗೆ—ಒಳಪಡಿಸಬೇಕಾಗುತ್ತದೆ.

ಗಂಡಿನಲ್ಲಾಗಲೀ ಹೆಣ್ಣಿನಲ್ಲಾಗಲೀ ಈ ದೋಷಗಳು ಇಲ್ಲವೆಂದು ದೃಢ

ಪಟ್ಟರೆ, ಹೆಣ್ಣು ಸಾಮಾನ್ಯ ಕ್ರಮದಲ್ಲಿ ಅಂಡಾಣುವನ್ನು ಬಿಡುಗಡೆ ಮಾಡು ತ್ತಿದ್ದಾಳೆಯೇ ಇಲ್ಲವೇ ಎಂಬುದನ್ನು ವೈದ್ಯರು ತಿಳಿಯಬಯಸುತ್ತಾರೆ. ಒಳಗರ್ಭಾಂಶದ ಪರೀಕ್ಷೆಯಿಂದ—ಅಂದರೆ, ಗರ್ಭದ ಗೋಡೆಯ ಒಂದು ಸಣ್ಣ ಅಂಗಾಂಶವನ್ನು ತೆಗೆದು ಪರೀಕ್ಷೆ ಮಾಡುವುದರಿಂದ, ಈ ರೀತಿ ಮಾಹಿತಿ ದೊರೆಯುತ್ತದೆ. ಮುಂದೆ ಜನನಾಂಗ ನಾಳದ ತೆರೆದಿರುವಿಕೆಯನ್ನು ಪರೀಕ್ಷಿಸ ಲಾಗುತ್ತದೆ. ಗರ್ಭಕೋಶದೊಳಕ್ಕೆ ಹಾಗೂ ಅಂಡಾಶಯಕ್ಕೆ ಸಂಪರ್ಕವನ್ನು ಕಲ್ಪಿಸುವ ಅಂಡವಾಹಿ ನಾಳಗಳ ಒಳಕ್ಕೆ ಬೆಳಕಿಗೆ ಅಪಾರದರ್ಶಕವಾಗಿ ವರ್ತಿಸು ವಂಥ ದ್ರವವರ್ಣವನ್ನು ಹಾಯಿಸುವುದರ ಮೂಲಕ ಈ ಪರೀಕ್ಷೆಯನ್ನು ನಡೆಸ ಲಾಗುತ್ತದೆ. ಇಲ್ಲಿಯ ಅತ್ಯಲ್ಪ ತಡೆಯೂ ಅಂಡಾಣು ಗರ್ಭಾಶಯವನ್ನು ಹೋಗಿ ಸೇರುವ ಮಾರ್ಗದಲ್ಲಿ ಅಡಚಣೆಯನ್ನೊಡ್ಡಬಹುದು. ಕ್ಷ-ಕಿರಣ ಪರಿಶೀಲಕ ಉಪಕರಣ ಇಂಥ ಯಾವುದೇ ತಡೆ ಇದೆಯೇ ಎಂಬುದನ್ನು, ಹಾಗೇ ನಾದರೂ ಇದ್ದರೆ ಎಲ್ಲಿ ಶಸ್ತ್ರಚಿಕಿತ್ಸೆ ನಡೆಸಬೇಕಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಡುತ್ತದೆ.

ವ್ಯಾಪಕ ಕ್ರಮಗಳು: ಕೊನೆಯದಾದ ವೈದ್ಯಕೀಯ ತಂತ್ರ ಹೆಣ್ಣಿನ ಕಿಬ್ಬೊಟ್ಟೆಯ ಪ್ರದೇಶದ ಒಳನೋಟಕ್ಕೆ ಅವಕಾಶ ಮಾಡಿಕೊಡುವಂಥದಾಗಿದೆ. ಇದು ಆಸ್ಪತ್ರೆಯಲ್ಲಿಯೇ ನಡೆಸಬೇಕಾಗಿರುವ ವೈದ್ಯಕೀಯ ಕ್ರಮವಾಗಿದ್ದು, ಹೊಕ್ಕುಳಿಗೆ ಕಣ್ಣಿಗೆ ಕಾಣಿಸದಿರುವಂಥ ಕಿಬ್ಬೊಟ್ಟೆಯ ಕೊಯ್ತದ ಮೂಲಕ (ಲ್ಯಾಪ್ರೋಸ್ಕೋಪಿ) ಅಥವಾ ಯೋನಿಭಿತ್ತಿಯಲ್ಲಿನ ಸಣ್ಣ ರಂಧ್ರದ ಮೂಲಕ (ಕಲ್ಡೋಸ್ಕೋಪಿ) ಬೆಳಕುಯುಕ್ತವಾಗಿರುವ ದೂರದರ್ಶಕ ಉಪಕರಣವನ್ನು ಇರಿಸಿ ಕಿಬ್ಬೊಟ್ಟೆಯನ್ನು ಪರೀಕ್ಷಿಸುವ ಕ್ರಮ. ಇದು ಇತರ ಪರೀಕ್ಷೆಗಳಲ್ಲಿ ಕಣ್ಣು ತಪ್ಪಿಸಿರುವಂಥ ದೋಷಗಳಿಗಾಗಿ ನಾಳಗಳನ್ನು, ಗರ್ಭಕೋಶವನ್ನು ಮತ್ತು ಅಂಡಾಶಯಗಳನ್ನು ನೇರವಾಗಿ ಪರೀಕ್ಷಿಸಲು ವೈದ್ಯರಿಗೆ ಅವಕಾಶ ಮಾಡಿಕೊಡುತ್ತದೆ. ಇದನ್ನು ಅನುಸರಿಸಿ ನಡೆಸುವ ಶಸ್ತ್ರಚಿಕಿತ್ಸೆ ಅನೇಕ ಮಹಿಳೆ ಯರಿಗೆ, ಅವರಿಗೆ ಹಿಂದೆಂದೂ ಇರದಿದ್ದಂಥ ಗರ್ಭಧಾರಣೆಯ ಅವಕಾಶವನ್ನು ಒದಗಿಸಿಕೊಡುತ್ತದೆ.

ಮಾನವ ಜೀವನದ ಉಗಮದ ರಹಸ್ಯವನ್ನು ವಿಜ್ಞಾನಿಗಳು ಭೇದಿಸುತ್ತ ನಡೆದಂತೆಲ್ಲಾ ಬಂಜೆತನವನ್ನು ಎದುರಿಸಲು ಬಳಸಬಹುದಾಗಿರುವ ತಂತ್ರಗಳು ಮಕ್ಕಳಿಲ್ಲದಂಥವರಿಗೆ ಹೊಸ ಆಶಾಕಿರಣಗಳನ್ನು ತಂದುತೋರುತ್ತಿವೆ. ಇಂದಿನ 'ಸಂತಾನ ಔಷಧ'ಗಳು ಈ ಚಿಕಿತ್ಸೆಯ ವಿಕ್ಕಿನಲ್ಲಿನ ಪ್ರಮುಖ ಮುನ್ನಡೆಗಳೇ


ಆಗಿವೆ. ಹಾರ್ಮೋನುಗಳ ಏರುಪೇರಿನಿಂದಾಗಿ ಕೆಲವು ಹೆಂಗಸರು ಅಂಡಾಣುಗಳನ್ನು ಬಿಡುಗಡೆ ಮಾಡಲು ಅಸಮರ್ಥರಾಗಿರುತ್ತಾರೆ. ಇಂಥ ಮಹಿಳೆಯರಲ್ಲಿನ ಜಡವಾಗಿರುವ ಅಂಡಾಶಯಗಳನ್ನು ಉತ್ಪಾದನೆಯ ದಿಕ್ಕಿನಲ್ಲಿ ಚೋದಿಸುವಂತೆ ಮಾಡುವಲ್ಲಿ ಈ ಔಷಧಗಳನ್ನು ಯಶಸ್ವಿಯಾಗಿ ಬಳಸಲಾಗಿದೆ.

ಈ ಔಷಧಗಳು ಅಂಡಾಣುಗಳನ್ನು ಪಕ್ವ ಸ್ಥಿತಿಗೆ ದೂಡುವುದರಿಂದ, ಹೆಚ್ಚಿನ ಪ್ರಮಾಣದ ಔಷಧ ಸೇವನೆಯಿಂದ ಒಂದು ಋತುಚಕ್ರದಲ್ಲಿ ಒಂದಕ್ಕಿಂತಲೂ ಹೆಚ್ಚು ಅಂಡಾಣುಗಳನ್ನು ಬಿಡುಗಡೆ ಮಾಡಬಹುದಾಗಿದೆ. ಹೀಗಾಗಿ, ಈ ಅಂಡಾಣುಗಳು ಫಲಪ್ರದವಾದರೆ ಒಂದಕ್ಕಿಂತಲೂ ಹೆಚ್ಚು ಮಕ್ಕಳು ಜನಿಸುವ ಸಂಭವವಿದೆ. ಡಾ|| ಮೋತಾ ಷಾಹ್ ಅವರು ಹೀಗೆನ್ನುತ್ತಾರೆ: "ಅಷ್ಟೇ ಅಲ್ಲ, ಈ ದುಬಾರಿಯಾದ ಔಷಧಗಳು 'ಅತಿ ಚೋದನೆ ಲಕ್ಷಣ ಸಮಷ್ಟಿ' ಎಂಬ ಪ್ರಾಣಾಪಾಯಕರವಾದ ಸ್ಥಿತಿಗೂ ಕಾರಣವಾಗಬಲ್ಲವು. ಕೆಳಹೊಟ್ಟೆಯ ಊತ, ವಾಂತಿ ಹಾಗೂ ಅಂಡಾಶಯಗಳಲ್ಲಿನ ರಕ್ತಸ್ರಾವ—ಇವು ಈ ಲಕ್ಷಣಗಳು. "ಹೀಗಾಗಿ, ಇವುಗಳನ್ನು ಸೇವಿಸುವ ಮಹಿಳೆಯರು ನಿಯತವಾಗಿ ವೈದ್ಯಕೀಯ ಪರೀಕ್ಷೆಗೆ ಒಳಗಾಗುತ್ತಿರಬೇಕಾಗುತ್ತದೆ. ದುರದೃಷ್ಟವಶಾತ್, ಈ ಔಷಧಗಳ ಬಳಕೆಯಲ್ಲಿ ಅನುಭವಿಗಳಾಗಿರುವಂಥ ವೈದ್ಯರುಗಳು ಭಾರತದಲ್ಲಿ ಇಲ್ಲವೇ ಇಲ್ಲ. ದೊಡ್ಡ ದೊಡ್ಡ ನಗರಗಳನ್ನು ಬಿಟ್ಟರೆ, ಅನೇಕ ಕಡೆಗಳಲ್ಲಿ ಬಂಜೆತನಕ್ಕೆ ಆಧುನಿಕ ವೈದ್ಯಶಾಸ್ತ್ರಕ್ಕಿಂತ ಮಂತ್ರೋಪಚಾರ ದೊರೆಯುವ ಸಂಭವವೇ ಹೆಚ್ಚಾಗಿದೆ.

ವ್ಯಾಪಕ ಪ್ರಮಾಣದಲ್ಲಿ ಬಂಜೆತನದ ಸಮಸ್ಯೆಯನ್ನು ಎದುರಿಸಬೇಕಾದರೆ, ಈಗಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ಸಿಬ್ಬಂದಿಗೆ ರೇತಸ್ಸಿನ ವಿಶ್ಲೇಷೆಯಂಥ ಸರಳ ಪರೀಕ್ಷೆಗಳನ್ನು ನಡೆಸುವ ಬಗ್ಗೆ ತರಬೇತಿ ಕೊಡಬೇಕಾಗುತ್ತದೆಂದು ತಜ್ಞರು ಸೂಚಿಸಿದ್ದಾರೆ. ಈ ಪೂರ್ವಭಾವಿ ಪರೀಕ್ಷೆ ನಡೆಸಿದ ತರುವಾಯ, ವಿವರವಾದ ಪರೀಕ್ಷೆಗೆ ಒಳಪಡಿಸುವುದು ಅಗತ್ಯವಾಗಿರುವಂಥ ದಂಪತಿಗಳನ್ನು ಜಿಲ್ಲಾ ಆಸ್ಪತ್ರೆಗಳಿಗೆ ಕಳಿಸಬೇಕಾಗುತ್ತದೆ. ಇಲ್ಲಿ ಬೋಧನ-ಆಸ್ಪತ್ರೆಗಳಲ್ಲಿ ಬಂಜೆತನದ ಸಮಸ್ಯೆಗಳನ್ನು ಅಭ್ಯಸಿಸಿರುವಂಥ ಸ್ತ್ರೀರೋಗ ಶಾಸ್ತ್ರಜ್ಞರು ಹಾಗೂ ಪ್ರಸೂತಿ ತಜ್ಞರೂ ಇರುತ್ತಾರೆ. ಕೊನೆಯದಾಗಿ, ಕ್ಲಿಷ್ಟವಾಗಿರುವ ಬಂಜೆತನದ ಸಮಸ್ಯೆಗಳನ್ನು ಮುಂದುವರಿದ ಪ್ರಾದೇಶಿಕ ಚಿಕಿತ್ಸಾಲಯಗಳಲ್ಲಿ ಪರಿಶೀಲಿಸಬಹುದು. ಭಾರತದ ಉದ್ದ-ಅಗಲಕ್ಕೂ ಇರುವ ನಗರ ಕೇಂದ್ರಗಳಲ್ಲಿ ಇಂಥ ಪ್ರಾದೇಶಿಕ ಚಿಕಿತ್ಸಾಲಯಗಳನ್ನು ಸ್ಥಾಪಿಸಬೇಕು.

ಡಾ॥ ಸೂನಾವಾಲಾ ಅವರೆನ್ನುತ್ತಾರೆ: "ಕುಟುಂಬ ಕಲ್ಯಾಣದ ರಾಷ್ಟ್ರೀಯ ನೀತಿಗೆ ನಾವು ಬದ್ಧರಾಗಿದ್ದೇವೆ. ಆದರೆ, ಇದರ ಅರ್ಥ ಕುಟುಂಬ ನಿಯೋಜನೆ ಎಂದು ಮಾತ್ರವಲ್ಲ. ಮಕ್ಕಳನ್ನು ಪಡೆಯಬಯಸುವ, ಆದರೆ ಪಡೆಯಲಾರದವರಾಗಿರುವ ಲಕ್ಷೋಪಲಕ್ಷ ವ್ಯಕ್ತಿಗಳಿಗೂ ವೈದ್ಯಕೀಯ ನೆರವು ದೊರೆಯುವಂತಾಗಬೇಕು".

ಪ್ರಧಾನ್ ಗುರುದತ್ತ



ನೀವು ಯಾವ ಕೆಲಸವನ್ನು ಮಾಡಿದರೂ ಅದು ಚೆನ್ನಾಗಿರುವಂತೆಯೂ ಕಂಡವರು ಮೆಚ್ಚುವಂತೆಯೂ ಲೋಕಕ್ಕೆ ಮೇಲನ್ನು ಉಂಟುಮಾಡುವಂತೆಯೂ ಇರಲಿ.

—ನೆಹರೂಜಿ

ಸಂಪತ್ತಿನಿಂದ ಸುಸ್ವಭಾವ, ಸದಾಚಾರಗಳು ಬರಲಾರವು. ಆದರೆ ಸುಸ್ವಭಾವ, ಸದಾಚಾರಗಳ ಸಂಪತ್ತನ್ನು ತಂದೇ ತರುವವು.

—ಡಾ॥ ರಾಧಾಕೃಷ್ಣನ್

ನನ್ನ ವಿದ್ಯಾವಂತನೆಂದು ಅಳೆದು ಹೇಳುವ ಅಳತೆಯ ಕೋಲು ಬೇರೆ.

—ರಾಜಾಜಿ

ಉದ್ಯೋಗಸ್ಥನು ಜನರಿಂದ ಇನಾಮು, ಕಾಣಿಕೆ, ಲಂಚಗಳನ್ನು ಗ್ರಹಿಸುವುದೆಂದರೆ ಅವರಿಗೆ ದಾಸನಾದಂತೆಯೇ.

—ನೆಹರೂಜಿ

ನಾನೂ ಅಮೆರಿಕಾ ನೋಡಿ ಬಂದೆ

ಲೇಖಕರಾಗಿ ಅನುವಾದಕರಾಗಿ ಪ್ರಾಧ್ಯಾಪಕರಾಗಿ ಮತ್ತು ಪ್ರಾಂಶುಪಾಲರಾಗಿ ಹಲವು ದಶಕ ಕಾಲ ಕರ್ನಾಟಕದ ವಿವಿಧ ವಿದ್ಯಾಕೇಂದ್ರಗಳಲ್ಲಿ ಸೇವೆ ಸಲ್ಲಿಸಿದ ಪ್ರೊ॥ ಕೆ. ರಾಮಕೃಷ್ಣ ಉಡುಪರು ಈಚೆಗೆ ಅಮೆರಿಕಾ ಪ್ರಯಾಣ ಮುಗಿಸಿ ಭಾರತಕ್ಕೆ ಮರಳಿದ್ದಾರೆ. ಆ 'ಅಮರಾವತಿ' ಜೊತೆ ಹೋಲಿಸಿದಾಗ ಈ 'ಕುಚೇಲ ನಗರ'ದ ಅಂತಸ್ತು ಏನು? ಅಲ್ಲಿಯ ಸಂಸ್ಕೃತಿಗೂ ಇಲ್ಲಿಯ ಸಂಸ್ಕೃತಿಗೂ ಸಾಮ್ಯ ವೈದೃಶ್ಯ ಏನು? ಈ ಪ್ರಶ್ನೆಗಳಿಗೆ ಶ್ರೀಯುತರು ಇಲ್ಲಿ ವಿಜ್ಞಾನಿಯ ನಿರಪೇಕ್ಷ ಮನೋಭಾವದಿಂದಲೂ ಸ್ವದೇಶದ ಬಗೆಗಿನ ಆತ್ಮೀಯ ಕಾಳಜಿಯಿಂದಲೂ ಉತ್ತರವಿತ್ತಿದ್ದಾರೆ. 'ಪುಸ್ತಕ ಪ್ರಪಂಚ'ದ ಕೋರಿಕೆ ಮೇರೆಗೆ ಬರೆದಿರುವ ಲೇಖನ ಮಾಲೆ.

೧. ನಾನೇಕೆ ಅಮೆರಿಕಾ ನೋಡಬಯಸಿದೆ?

ಅಮೆರಿಕಾ ಅತ್ಯಂತ ಸಮೃದ್ಧ ರಾಷ್ಟ್ರವೆಂದು ಎಲ್ಲರೂ ಆಡುವ ಮಾತು. ಅದು ಭಾರತಕ್ಕಿಂತ ಮೂರುಪಾಲಷ್ಟು ವಿಸ್ತಾರವಾದ ಸಂಪನ್ನ ದೇಶ. ಆದರೆ ಜನಸಂಖ್ಯೆ ಭಾರತದ ಮೂರನೇ ಒಂದು ಪಾಲು! ಅಲ್ಲಿಯ ಜನರ ತಲಾ ವಾರ್ಷಿಕ ವರಮಾನ ಹತ್ತುಸಾವಿರ ಡಾಲರಿಗೂ ಹೆಚ್ಚಿನದು. ಅಂದರೆ ತಲಾ ಒಂದು ಲಕ್ಷ ರೂಪಾಯಿ! ಅಲ್ಲಿ ಪ್ರತಿ ಹತ್ತು ಜನರಿಗೆ ಏಳು ಕಾರುಗಳು! ಎಲ್ಲ ತರದ ಸುಖಸಂಪತ್ತುಗಳಿಗೂ ಆಗರವಾದ ಭೂಲೋಕದ ಸ್ವರ್ಗ! ಇಷ್ಟಿದ್ದರೂ ಅಲ್ಲಿಯ ಆಡಳಿತ ಪ್ರಜಾಪ್ರಭುತ್ವ ಮಾದರಿಯದು. ಯಾವೊಬ್ಬ ಪ್ರಜೆಗೂ ಪ್ರಭು ಅಥವಾ ಪ್ರೆಸಿಡೆಂಟ್ ಆಗುವ ಅವಕಾಶವಿದೆ.

ಈ ಎಲ್ಲ ಸಮಾಚಾರಗಳನ್ನು ಓದಿ ತಿಳಿದಿದ್ದೇವೆ. ಕೇಳಿ ಅರಿತಿದ್ದೇವೆ ಮಾತ್ರವಲ್ಲದೆ ಭಾರತದ ಯಾವ ದೊಡ್ಡ ಯೋಜನೆ, ಕಾರ್ಖಾನೆಗಳ ವಿಚಾರ ತೆಗೆದರೂ ಅಲ್ಲಿ ಅಮೆರಿಕಾದ ಪಾತ್ರವಿದ್ದೇ ಇದೆ. ಕೆಲವಕ್ಕೆ ಅಲ್ಲಿಯ ಸರ್ಕಾರದ ಅಥವಾ ದೊಡ್ಡ ಸಂಸ್ಥೆಗಳ ಸಹಾಯ. ಇನ್ನು ಕೆಲವಕ್ಕೆ ಅಂತಾರಾಷ್ಟ್ರೀಯ ಬ್ಯಾಂಕುಗಳ ನೆರವು. ಅವರಲ್ಲಿ ಅಮೆರಿಕಾ ಹಣದ್ದೇ ಸಿಂಹಪಾಲು. ಹಾಗಾಗಿ ನಮ್ಮ ದೇಶದ ಪ್ರಗತಿ ವಿಚಾರದಲ್ಲಿ ಅಮೆರಿಕಾದ ಬೆಂಬಲ ಬಹುಮುಖ್ಯವಾದುದು.

ಇನ್ನು ನಮ್ಮ ವಿದ್ಯಾವಂತ ಯುವಕ ಯುವತಿಯರನ್ನು ಕೇಳಿದರೆ ಅವರ ಜೀವನದ ಪ್ರಧಾನ ಉದ್ದೇಶ-ಉಚ್ಚ ಶಿಕ್ಷಣಕ್ಕಾಗಿ ಅಮೆರಿಕಾಕ್ಕೆ ಹೋಗುವುದು. ಶಿಕ್ಷಣದ ನಂತರ ಸಾಧ್ಯವಾದರೆ ಅಲ್ಲೇ ಇರುವುದು. ನಮ್ಮ ಧುರೀಣರ ಹಾಗೂ ಶ್ರೀಮಂತರ ಗುರಿ ಕೂಡ ಒಮ್ಮೆಯಾದರೂ ಅಮೆರಿಕಾ ನೋಡಿಬರಬೇಕು

ಎಂಬುದು. ಇತ್ತೀಚಿನ ಇಬ್ಬರು ರಾಷ್ಟ್ರಾಧ್ಯಕ್ಷರಾದ ಸಂಜೀವರೆಡ್ಡಿ ಮತ್ತು ಜೇಲ್‌ಸಿಂಗ್‌ರವರು ಸಹ ಅಧಿಕಾರ ವಹಿಸಿಕೊಂಡೊಡನೆ ನಡೆಸಿದ ಬಹು ದೊಡ್ಡ ಕಾರ್ಯವೆಂದರೆ—ಅಮೇರಿಕಾಕ್ಕೆ ಹೋಗಿ ಅಲ್ಲಿ ದೇಹ ಪರೀಕ್ಷೆ, ಚಿಕಿತ್ಸೆ ಮಾಡಿಸಿಕೊಂಡು ಬಂದುದು. ಹೀಗಿದೆ ಅಮೇರಿಕಾ ಮಹಾತ್ಮೆ!

ಮದ್ರಾಸಿನಲ್ಲಿರುವ ಅಮೇರಿಕಾ ರಾಯಭಾರಿ ಕಛೇರಿಗೆ ನಾನೊಮ್ಮೆ ಹೋಗಬೇಕಾಯಿತು. ಅಮೇರಿಕಾ ಸಂದರ್ಶನಾಕಾಂಕ್ಷಿಗಳ ದೊಡ್ಡ ಜಾತ್ರೆಯೇ, ಅನುಮತಿ ಪತ್ರಕ್ಕಾಗಿ ಅಲ್ಲಿ ಕಾಯುತ್ತಿತ್ತು. ಕೆಲವರು ಅಮೇರಿಕಾ ಸಂದರ್ಶನಗೈದು ಹಿಂದೆ ಬರುವ ಯಾತ್ರಾರ್ಥಿಗಳು. ಇನ್ನು ಕೆಲವರು ಅಲ್ಲಿ ಉಚ್ಚ ಶಿಕ್ಷಣಕ್ಕಾಗಿ ಅಥವಾ ಖಾಯಂ ವಾಸ್ತವ್ಯಕ್ಕಾಗಿ ಹೋಗಬಯಸುವವರು. ಅದಕ್ಕೆ ಹಲವಾರು ನಿಯಮಗಳಿದ್ದರೂ ಆ ನಿಯಮಗಳ ಚೌಕಟ್ಟಿನಲ್ಲೇ ಹೋಗಬಯಸುವವರು ಬಹುಮಂದಿ. ಹೀಗೆ ಮದ್ರಾಸಿನಲ್ಲಿರುವಂತೆಯೇ ಮುಂಬಾಯಿ, ಕಲ್ಕತ್ತಾ, ಡೆಲ್ಲಿ ಕಛೇರಿಗಳಿಂದಲೂ ಈ ರಹದಾರಿ ಪತ್ರ (ವೀಸಾ) ಕೊಡಲ್ಪಡುವುವಂತೆ. ಹೆಚ್ಚುಕಡಿಮೆ ವರ್ಷಕ್ಕೆ ಇಪ್ಪತ್ತು ಸಾವಿರ ಭಾರತೀಯರು ಅಮೇರಿಕಾದಲ್ಲಿ ವಾಸವಿರಲು ಹೋಗುವವರಿದ್ದಾರಂತೆ. ಉದಾರವಾಗಿ ಹೋಗಬಿಟ್ಟರೆ ಅದಕ್ಕೂ ನಾಲ್ಕಾರು ಪಾಲು ಭಾರತೀಯರು ಅಮೇರಿಕಾಕ್ಕೆ ಹೋಗಿ ನೆಲಸಬಹುದೆಂಬುದರಲ್ಲಿ ಸಂದೇಹವೇ ಇಲ್ಲ. ಇನ್ನು ನಮ್ಮಂತೆ ಪ್ರವಾಸಿಗರಾಗಿ ಹೋಗಿ ಬರುವವರ ಸಂಖ್ಯೆ ಅದಕ್ಕೂ ಇಮ್ಮಡಿಮುಮ್ಮಡಿ ಇದ್ದೇ ಇದೆ.

ಈ ಪ್ರಮಾಣದಲ್ಲಿ ಪ್ರಪಂಚದ ಯಾವ ವಿದೇಶಗಳಿಗೂ ನಮ್ಮವರು ಹೋಗುತ್ತಿಲ್ಲ. ಇಂಗ್ಲೆಂಡಿಗೆ ಹೋಗುವವರ ಸಂಖ್ಯೆ ಹಿಂದಿನಂತಿರದೆ ಇಂದು ಕಡಿಮೆಯಾಗಿದೆ. ರಷ್ಯಾ, ಜರ್ಮನಿ, ಜಪಾನ್–ಮುಂತಾದ ಇತರ ಮುಂದುವರಿದ ದೇಶಗಳಿಗೂ ಈ ಪ್ರಮಾಣದಲ್ಲಿ ಜನ ಹೋಗುತ್ತಿಲ್ಲ. ಭಾರತ ಮಾತ್ರವೇ ಅಲ್ಲ; ಏಷ್ಯಾಖಂಡದ ಇತರ ದೇಶಗಳಿಂದಲೂ ಬಹು ಸಂಖ್ಯೆಯಲ್ಲಿ ಜನ ಅಮೇರಿಕಾಕ್ಕೆ ವಲಸೆ ಹೋಗುತ್ತಿದ್ದಾರೆ. ೧೯೮೦ರ ಜನಗಣತಿಯಂತೆ ಮೂರೂವರೆ ಲಕ್ಷಕ್ಕೂ ಮಿಕ್ಕ ಭಾರತೀಯರು ಅಮೇರಿಕಾದ ಪ್ರಜೆಗಳಾಗಿದ್ದಾರೆಂದು ತಿಳಿದುಬಂದಿದೆ. ಇದೇಕೆ ಹೀಗೆ?

ಈಗಿನ ಯಾವ ಪ್ರತಿಷ್ಠಿತ ಮಹಾಶಯರನ್ನು ಕೇಳಿದರೂ ಅವರು ಹೇಳುವುದು—ನನ್ನ ಮಗ ಅಮೇರಿಕಾದಲ್ಲಿ ದೊಡ್ಡ ಡಾಕ್ಟರನಾಗಿದ್ದಾನೆ. ಮಗಳು ಅಳಿಯ ಅಲ್ಲಿ ಪ್ರಸಿದ್ಧ ವಿಜ್ಞಾನಿಗಳಾಗಿದ್ದಾರೆ. ದೊಡ್ಡ ಉದ್ಯೋಗದಲ್ಲಿದ್ದು ತುಂಬ ಸುಖವಾಗಿದ್ದಾರೆ. ಧಾರಾಳ ಹಣ ಕಳಿಸುತ್ತಿದ್ದಾರೆ–ಎಂದು ಮೊದಲಾಗಿ.

೨. ಪ್ರತಿಭಾಪಲಾಯನ

ಸಾಮಾನ್ಯ ೩೦-೩೫ ವರ್ಷಗಳಿಂದ ನಾನು ಅಧ್ಯಾಪಕ ವೃತ್ತಿಯಲ್ಲಿದ್ದೇನೆ. ಅದರಲ್ಲಿಯೂ ೨೦ ವರ್ಷ ಎರಡು ಪ್ರತಿಷ್ಠಿತ ಕಾಲೇಜುಗಳ (ಕೋಲಾರ ಮತ್ತು ಗೋಣಿಕೊಪ್ಪ) ಪ್ರಿನ್ಸಿಪಾಲನಾಗಿದ್ದೆ. ಹಾಗಾಗಿ ಸಾವಿರಾರು ವಿದ್ಯಾರ್ಥಿಗಳ ಸಂಬಂಧವಿಟ್ಟುಕೊಳ್ಳುವ ಸುಯೋಗ ನನಗೊದಗಿತ್ತು. ಅಂತಹ ವಿದ್ಯಾರ್ಥಿಗಳಲ್ಲಿ ಪ್ರತಿಭಾವಂತರಾದ ನೂರಾರು ಮಂದಿ, ಈಗ ಅಮೇರಿಕಾದಲ್ಲಿ ಮೆರೆಯುತ್ತಿದ್ದಾರೆಂದರೆ ಅದು ದೇಶದ ಭಾಗ್ಯವಲ್ಲವೇ? ಜಗತ್ತಿನ ಪ್ರತಿಭಾಶಾಲಿಗಳನ್ನೆಲ್ಲ ಇಂದು ಅಮೆರಿಕಾ ತನ್ನತ್ತ ಆಕರ್ಷಿಸುತ್ತಿದೆ. ಅದು ಆ ವ್ಯಕ್ತಿಗಳನ್ನು ಮುಂದೆ ತರುವುದು ಮಾತ್ರವೇ ಅಲ್ಲ; ದೇಶವನ್ನು ಸಂಪತ್ಸಮೃದ್ಧವಾಗಿಸುವಲ್ಲಿ ಆ ರಾಷ್ಟ್ರ ಜಯಶೀಲವಾಗಿದೆ. ಇದು ವಿಸ್ಮಯದ ವಿಚಾರವಲ್ಲವೇ?

ಭಾರತ ಸರ್ಕಾರ-ನಮ್ಮ ದೇಶದ ಪ್ರತಿಭಾವಂತರೆಲ್ಲ ಅಮೇರಿಕಾದತ್ತ ವಲಸೆ ಹೋದರೆ ಅದರಿಂದ ನಮ್ಮ ದೇಶಕ್ಕೆ ಅಪಾರ ನಷ್ಟ; ಅಂತಹ ಪ್ರತಿಭಾಶಾಲಿಗಳಿಗೆ ವಿದ್ಯಾಭ್ಯಾಸ ಅಪಾರ ವೆಚ್ಚದಿಂದ ಒದಗಿಸಿದ್ದು ನಮ್ಮ ನಷ್ಟಕ್ಕೆ ಮತ್ತು ಅಮೆರಿಕಾದ ಲಾಭಕ್ಕೆ ಕಾರಣ-ಎಂಬುದನ್ನು ಅರ್ಥಮಾಡಿಕೊಂಡು ಹಲವಾರು ನಿರ್ಬಂಧಗಳನ್ನು ಈ ವಿಚಾರದಲ್ಲಿ ಹೇರಿಸಿದ್ದಾರೆ. ಮಾತ್ರವಲ್ಲದೆ ಅಂಥವರಿಗೆ ಯೋಗ್ಯ ಉದ್ಯೋಗಾವಕಾಶ ಒದಗಿಸಲೂ ಪ್ರಯತ್ನಿಸುತ್ತಿದ್ದಾರೆ.

ನಿಜ; ಆದರೆ ಪರಿಣಾಮವೇನಾಗಿದೆ? ಈಗ ಮೊದಲಿಗಿಂತಲೂ ಹೆಚ್ಚಿನ ಪ್ರತಿಭಾಪಲಾಯನ (Brain Drain) ಆಗುತ್ತಿರುವುದು-ಅಂಕೆ ಸಂಖ್ಯೆಗಳಿಂದ ತಿಳಿದುಬರುತ್ತಿದೆ. ಇದಕ್ಕೆ ನಮ್ಮ ದೇಶದ ಜಾತಿಯ ಆಧಾರದ ಮೇಲೆ ಸಿಗುವ ವಿದ್ಯಾಭ್ಯಾಸದ ಅವಕಾಶ, ಉದ್ಯೋಗಾವಕಾಶಗಳು ಕಾರಣವಿರಲೂ ಬಹುದು. ಸಾಮಾಜಿಕ ನ್ಯಾಯದ ಹೆಸರಲ್ಲಿ ಆಗುತ್ತಿರುವ ಅನ್ಯಾಯವೂ ಕಾರಣವಿರಬಹುದು ಅಥವಾ ಅಮೇರಿಕಾದ ವೈಭವ ಜೀವನವೂ ಮೂಲವಾಗಿರಬಹುದು.

ಈ ಸಂದರ್ಭದಲ್ಲಿ–ನಮಗೆ ಪ್ರತಿಭೆ ಬೇಕಾಗಿಲ್ಲ. ಪ್ರತಿಭಾಪಲಾಯನವಾದರೆ ಹೋಗಲಿ. ಹಿಂದುಳಿದವರು ಮುಂದು ಬರುವುದಕ್ಕೆ ಇದೊಂದು ಶುಭಯೋಗ–ಎಂದು ಹೇಳುವವರೂ ಇದ್ದಾರೆ. ಏನೇ ಇರಲಿ. ಪ್ರತಿವರ್ಷ ಹತ್ತಾರು ಸಾವಿರ ಭಾರತೀಯ ಬುದ್ಧಿಶಾಲಿಗಳು ಹೇಗಾದರೂ ಮಾಡಿ ಅಮೇರಿಕಾದತ್ತ ಸಾಗುತ್ತಿರುವುದು ಮಾತ್ರ ಕಟುಸತ್ಯ.

೩. ಆತ್ಮ ಕಥೆ

ಇನ್ನು ಸ್ವಂತ ವಿಚಾರಕ್ಕೆ ಬಂದರೂ ಇದೇ ಕಥೆ. ನನ್ನ ಮಗನಾದ ಡಾ ಸುಧಾಕರನು ಅಮೇರಿಕಾದ ನ್ಯೂಯಾರ್ಕ್ ಸ್ಟೇಟಿನ ಬಿಂಘೂಂಟನ್ ನಗರದಲ್ಲಿದ್ದಾನೆ. ಆ ನಗರದಲ್ಲಿ ೩-೪ ಲಕ್ಷ ಜನಸಂಖ್ಯೆ ಇದೆ. ಮೈಸೂರು ನಗರಕ್ಕಿಂತಲೂ ಸಣ್ಣದಾದ ಶಹರೆಂದು ಹೇಳಬಹುದು. ಆ ಸಣ್ಣ ನಗರದಲ್ಲೂ ಸುಮಾರು ನೂರು ಭಾರತೀಯ ಕುಟುಂಬಗಳವರು ತಕ್ಕಮಟ್ಟಿಗೆ ಚೆನ್ನಾಗಿದ್ದಾರೆ. ಭಾರತೀಯ ಮಟ್ಟದಿಂದ ಅಳೆದರೆ ಸುಖಸಂಪದ್ಭರಿತ ಜೀವನ ನಡೆಸುತ್ತಿದ್ದಾರೆ. ಸುಮಾರು ಇಪ್ಪತ್ತೈದು ಮಂದಿ ಭಾರತೀಯ ವೈದ್ಯರಿದ್ದಾರೆ. ಅವರಲ್ಲಿ ಸಮರ್ಥ ಅಸ್ಥಿ ಶಸ್ತ್ರ ಚಿಕಿತ್ಸಾ ತಜ್ಞ ಡಾ। ಸುಧಾಕರನಾಗಿದ್ದಾನೆ. ಕಳೆದ ಎಳೆಂಟು ವರ್ಷಗಳಿಂದ ಅಲ್ಲಿ ಖಾಸಗೀ ವೈದ್ಯಕೀಯ ವೃತ್ತಿ ನಡೆಸುತ್ತಿದ್ದು ಒಳ್ಳೆಯ ಹೆಸರು, ಹಣ ಗಳಿಸುತ್ತಿದ್ದಾನೆ. ಅವನ ವಾರ್ಷಿಕ ವರಮಾನ ಸಾಮಾನ್ಯ ಒಂದುವರೆ ಲಕ್ಷ ಡಾಲರ್. ಅಂದರೆ ಹದಿನೈದು ಲಕ್ಷ ರೂಪಾಯಿ. ಅವನು ಅಸ್ಥಿ ಶಸ್ತ್ರ ಚಿಕಿತ್ಸೆಯಲ್ಲೂ ಹಸ್ತ ಶಸ್ತ್ರ ಚಿಕಿತ್ಸಾ ವಿಚಾರದಲ್ಲಿ ವಿಶೇಷ ತರಬೇತಿ ಪಡೆದಿದ್ದಾನೆ. (Specialist in Hand-surgery). ಅಮೇರಿಕಾದಲ್ಲಿ ಮೂಳೆ ಡಾಕ್ಟರಲ್ಲಿಯೂ ಕೈಗೊಬ್ಬ ತಜ್ಞ, ಮೂಗಿಗೊಬ್ಬ ತಜ್ಞ, ಕಾಲಿಗೊಬ್ಬ ತಜ್ಞ— ಹೀಗೆ ಎಲ್ಲ ಬೇರೆ ಬೇರೆ ಇದ್ದಾರೆ. ಅಂತು ಸುಧಾಕರನ ಚಾತುರ್ಯಕ್ಕೆ ಒಳ್ಳೆಯ ಬೇಡಿಕೆ ಇದೆ. ಅವನದೇ ಆದ ನಾಲ್ಕೈದು ಎಕ್ರೆ ಜಾಗದಲ್ಲಿ ವಿಸ್ತಾರವಾದ ಸುಂದರ ಮನೆ, ನಗರ ಮಧ್ಯದಲ್ಲಿ ತನ್ನ ಕ್ಲಿನಿಕ್ಕಿಗಾಗಿ ಬೇಕಿದ್ದ ಸ್ವಂತ ಕಟ್ಟಡ, ಎರಡುಮೂರು ಕಾರುಗಳು—ಇವನ್ನೆಲ್ಲ ಹೊಂದಿಕೊಂಡು ವೈಭವ ಜೀವನ ನಡೆಸುತ್ತಿದ್ದಾನೆ.

ಮೈಸೂರಲ್ಲಾತ ೧೯೬೦ರಲ್ಲಿ ಎಂ. ಬಿ. ಬಿ. ಎಸ್. ಪಾಸಾದ ಕೂಡಲೇ ಪ್ರಯತ್ನಿಸಿದಾಗ ತಕ್ಕ ಉದ್ಯೋಗ ದೊರಕಲಿಲ್ಲ. ಮುಂದುವರಿದ ಜಾತಿಯವರಿಗೆ ಇಲ್ಲಿ ಸ್ಥಾನವಿಲ್ಲ. ಹಾಗಾಗಿ ಬೇರೆ ದಾರಿ ಇಲ್ಲದೆ ಹೇಗೋ ಪ್ರಯತ್ನಿಸಿ ಕೆನಡಾ ಸೇರಿದ. ಅಲ್ಲಿ ಅಸ್ಥಿ ಶಸ್ತ್ರ ಚಿಕಿತ್ಸೆಯಲ್ಲಿ ಉಚ್ಚ ಶಿಕ್ಷಣ ಪಡೆದ. ನಂತರ ಅಮೇರಿಕಾ ಸೇರಿ ಹಸ್ತಶಸ್ತ್ರ ಚಿಕಿತ್ಸೆಯಲ್ಲಿ ವಿಶೇಷ ತರಬೇತಿ ಸಾಧಿಸಿದ. ಈಗ ಬಿಂಘೂಂಟನ್ನಿಗೆ ಬಂದು ತನ್ನ ಉದ್ಯೋಗ ಮುಂದುವರಿಸಿ ಜಯಶೀಲನಾಗಿದ್ದಾನೆ.

ಹೀಗೆ, ಭಾರತೀಯ ಮಡದಿ ಮತ್ತು ಇಬ್ಬರು ಮಕ್ಕಳೊಡನೆ ಅಲ್ಲಿ ಸುಖವಾಗಿದ್ದರೂ ಆತ ಜನ್ಮಭೂಮಿಯನ್ನು ಮರೆತಿಲ್ಲ. ಎರಡು ಮೂರು ವರ್ಷಕ್ಕೆ

ಒಮ್ಮೆ ಇಲ್ಲಿಗೆ ಬಂದು ಹೋಗುತ್ತಾನೆ. ಪ್ರತಿಸಲ ಬಂದಾಗಲೂ ನಾನಲ್ಲಿಗೆ ಬಂದು ಅಮೆರಿಕಾ ನೋಡಿಬರಬೇಕೆಂದು ಒತ್ತಾಯಿಸುತ್ತಿದ್ದ. ಆದರೆ ನನಗೆ ಮಾತ್ರ ಕಳೆದ ೩೦ ವರ್ಷಗಳಿಂದ ಅಂಟಿಹೋಗಿದ್ದ ದೊಡ್ಡ ಕಾಲೇಜುಗಳೆರಡರ ಪ್ರಿನ್ಸಿಪಾಲಗಿರಿಯು ಯಾವ ತರದ ಬಿಡುವನ್ನು ಕೊಡುತ್ತಿದ್ದಿಲ್ಲ. ಹಾಗಾಗಿ ಅವನ ಒತ್ತಾಯವನ್ನು ನಾನು ಮುಂದುವರಿಸುತ್ತಲೇ ಬಂದಿದ್ದೆ.

ಆದರೆ, ಕಳೆದ ೧೯೭೨ರ ಜೂನ್ ತಿಂಗಳಲ್ಲಿ ನಾನು ಉದ್ಯೋಗದಿಂದ ನಿವೃತ್ತನಾದೆ. ಆಮೇಲೆ ಸ್ವಲ್ಪ ಬಿಡುವು ಮಾಡಿಕೊಂಡು, ನಾನೇಕೆ ಅಮೆರಿಕಾಕ್ಕೆ ಹೋಗಿಬರಬಾರದೆಂದು ಅನಿಸತೊಡಗಿತು.

ಅಷ್ಟೇ ಅಲ್ಲದೆ, ನನ್ನ ಹಿರಿಯ ಮಗ ಚಿ। ದಿವಾಕರನು ಸಹ ಎರಡು ವರ್ಷಗಳ ಹಿಂದೆ ಅಮೆರಿಕಾಕ್ಕೆ ಹೋಗಿ ಸೇರಿದ್ದಾನೆ. ಅವನು ರಾಂಚಿಯಲ್ಲಿ ಹಿರಿಯ ಇಂಜಿನಿಯರನಾಗಿ ಕೆಲಸದಲ್ಲಿದ್ದವನು. ಆತ ಅಮೆರಿಕಾಕ್ಕೆ ಉಚ್ಚ ಶಿಕ್ಷಣಕ್ಕಾಗಿ ಹೋಗಬಯಸಿದರೆ, ಪ್ರಯಾಸವಿಲ್ಲದೆ ಅಲ್ಲಿಯ ಸರ್ಕಾರ ಅನುಮತಿಯನ್ನು ನೀಡಿತು. ಅಲ್ಲಿ ಹೋಗಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಉಚ್ಚ ಶಿಕ್ಷಣ ಪಡೆಯುತ್ತಿದ್ದಾನೆ. ಅಲ್ಲೇ ಉದ್ಯೋಗ ಪಡೆದು ಮುಂದುವರಿಯುವ ಯೋಜನೆಯಲ್ಲೂ ಅವನಿದ್ದಾನೆ.

ಹಾಗಾಗಿ, ನಾನೀಗ ಹೋದರೆ, ಅಮೆರಿಕಾದಲ್ಲಿ ಸಂಸಾರಸಹಿತರಾಗಿರುವ ಇಬ್ಬರು ಮಕ್ಕಳನ್ನೂ ಕಾಣುವ ಸುಯೋಗ ದೊರಕುತ್ತದೆ—ಎಂದು ಈ ವಿದೇಶ ಪ್ರಯಾಣದ ನಿರ್ಧಾರ ಕೈಗೊಂಡೆ. ಅಮೆರಿಕಾ ರಾಯಭಾರಿ ಕಛೇರಿಯವರೂ ಅನುಮತಿ ಕೊಟ್ಟರು. ಪತ್ನಿ ಸೌ। ಅನ್ನಪೂರ್ಣಳೊಡಗೂಡಿ ಹೋಗಿ ಬರಲು ಸುಮಾರು ರೂ. ೨೪,೫೦೦/- ತೆತ್ತು ವಿಮಾನಯಾನಕ್ಕೆಯುವ ವ್ಯವಸ್ಥೆಯೂ ನಡೆಯಿತು. ಕೊನೆಗೆ ದಿನಾಂಕ ೬-೫-೭೩ರಂದು ಮೈಸೂರು ಬಿಟ್ಟು ಅಂದೇ ಸಾಯಂಕಾಲ ಬೆಂಗಳೂರಿನಿಂದ ವಿಮಾನ ಮೂಲಕ ಮುಂಬಾಯಿ ಸೇರಿದೆವು. ಮರುದಿನ ಬೆಳಗ್ಗೆ ೫-೩೦ಕ್ಕೆ ಭಾರತೀಯ ಅಂತಾರಾಷ್ಟ್ರೀಯ ವಿಮಾನದಲ್ಲಿ (Air India International) ಮುಂಬಾಯಿಯಿಂದ ಭಾರತ ಬಿಟ್ಟು ಅಮೆರಿಕಾದತ್ತ ಹಾರಾಡಿಹೋದೆವು.

೪. ನಾವೆಂತು ಅಮೆರಿಕಾ ಸೇರಿದೆವು

ಮೇ ಆರರಂದು ಮೈಸೂರು ಬಿಟ್ಟಾಗ ಒಂದು ತರದ ಬೇಸರ; ಒಂದು ತರದ ಸಂತಸ. ಒಂದೆರಡು ತಿಂಗಳು ಪರಿಚಿತ ಮನೆಸುಖ, ಊರು ಬಿಟ್ಟಿರಬೇಕಲ್ಲ—

ಎಂಬ ಬೇಸರ. ಇನ್ನೊಂದೆಡೆ—ಅಮೇರಿಕಾದ ಸ್ವರ್ಗಸಮಾನ ವೈಭವ ನೋಡಬಹುದು; ಅದ್ಭುತ ವಿಮಾನಯಾನದ ಆನಂದ ಅನುಭವಿಸಬಹುದು—ಎಂದು ಮೊದಲಾದ ವಿಸ್ಮಯ, ಆನಂದ. ಅಂತು ಮೈಸೂರು ಬಿಟ್ಟು ಎರಡು ಘಂಟೆಯ ರೈಲಿನಲ್ಲಿ ಸಾಗಿ ಬೆಂಗಳೂರು ಸೇರಿದೆವು.

ರಾತ್ರಿ ೮-೩೦ಕ್ಕೆ ಅಲ್ಲಿಂದ ಮುಂಬಾಯಿಗೆ ನಮ್ಮ ವಿಮಾನಯಾನ. ನಮ್ಮನ್ನು ಬೀಳ್ಕೊಡುವುದಕ್ಕೆ ಸಾಕಷ್ಟು ಸಂಖ್ಯೆಯ ಬಂಧುಮಿತ್ರರೂ ಸೇರಿದರು. ಸಾಯಂಕಾಲ ೭-೩೦ಕ್ಕೆ ವಿಮಾನ ನಿಲ್ದಾಣ ಸೇರಿದೆವು. ಅಲ್ಲಿ ನಮ್ಮ ಟಿಕೇಟ್ ಮತ್ತು ಲಗ್ಗೇಜ್ ತಪಾಸಣೆ ನಡೆದು ಎಲ್ಲರನ್ನು ಬೀಳ್ಕೊಟ್ಟೆವು. ಸಮಯಕ್ಕೆ ಸರಿಯಾಗಿ ನೆಲಬಿಟ್ಟು ಆಕಾಶಕ್ಕೇರಿದೆವು. ನನ್ನಾಕೆಗಂತು ಪ್ರಥಮ ವಿಮಾನಯಾನದ ಅನುಭವವಾದ್ದರಿಂದ ಇನ್ನಷ್ಟು ವಿಸ್ಮಯ-ಆನಂದ. ದಾರಿಯಲ್ಲಿ ಗಗನಸಖಿಯರಿಂದ (Air Hostess) ತಿಂಡಿತೀರ್ಥಗಳ ಉಪಚಾರವೂ ನಡೆಯಿತು.

ರಾತ್ರಿ ೧೦-೧೫ಕ್ಕೆ ಮುಂಬಾಯಿಯಲ್ಲಿಳಿದಾಗ ಅಲ್ಲಿಯೂ ನಮಗೆ ಅದ್ಭುತ ಸ್ವಾಗತ ಕಾದಿತ್ತು. ನನ್ನ ಕಾವೇರಿ ಕಾಲೇಜಿನ ಶಿಷ್ಯ ಸುಕುಮಾರನು ಅಲ್ಲಿ ಸುಂಕದ ಅಧಿಕಾರಿ (Customs Officer). ಅವರೊಂದಿಗೆ ಶ್ರೀಯುತ ದಾಸ್—ಎಂಬ ಅಲ್ಲಿಯ ಅಂತಾರಾಷ್ಟ್ರೀಯ ವಿಮಾನಗಳ 'ಯೋಗಕ್ಷೇಮ' ನೋಡಿಕೊಳ್ಳುವ ದೊಡ್ಡ ಇಂಜಿನಿಯರ್ ಸಹ ಇದ್ದರು. ಅವರ ಮಗ ಮತ್ತಿತರ ಬಂಧುಗಳು—ನಮ್ಮ ಕೋಲಾರ ಕಾಲೇಜಿನ ಶಿಷ್ಯರು. ದಾಸ್ ನಮ್ಮ ಸಂಬಂಧಿಕರೂ ಹೌದು. ಹಾಗಾಗಿ ಇವರಿಬ್ಬರ ರಾಜೋಪಚಾರ ನಮ್ಮನ್ನು ಕಾದಿತ್ತು. ಇಂತಹ ಶಿಷ್ಯಕೋಟಿ ಪಡೆದ ನಮ್ಮ ಭಾಗ್ಯಕ್ಕಾಗಿ ದೇವರನ್ನು ವಂದಿಸಿದೆವು. ಅವರನ್ನು ಹರಸಿ ಸ್ವಲ್ಪ ವಿಶ್ರಾಂತಿಯನ್ನೂ ಪಡೆದೆವು.

ಮೇ ೩೧ರಂದು ಬೆಳಗ್ಗೆ ೫-೧೫ಕ್ಕೆ ನಮ್ಮ ಅಂತಾರಾಷ್ಟ್ರೀಯ ವಿಮಾನ (A.I.I.) ಹೊರಡುವ ಸಮಯ. ನಮ್ಮ ವೀಸಾ, ಟಿಕೇಟ್, ಲಗ್ಗೇಜ್—ಇತ್ಯಾದಿಗಳ ಪರಿಶೀಲನೆಗಾಗಿ ರಾತ್ರಿ ೨-೩೦ಕ್ಕೇ ನಾವು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗಬೇಕಿತ್ತು. ಆದರೆ ಈ ಇಬ್ಬರು ಶಿಷ್ಯಬಂಧುಗಳಿದ್ದುದರಿಂದ ಎಲ್ಲ ಕಾರ್ಯಕ್ರಮಗಳೂ ಯಾವುದೇ ಅಡೆತಡೆಗಳಿಲ್ಲದೆ, ಸುಲಭವಾಗಿ ಮುಗಿದುವು. ಹೊರಡುವ ವೇಳೆ ಅಮೇರಿಕಾದ ನಮ್ಮ ಆಪ್ತಬಂಧುಗಳಿಗಾಗಿ ಒಳ್ಳೆಯ 'ಅಲ್ಫಾನ್ಸೋ' ಮಾವಿನ ಹಣ್ಣುಗಳ ಬುಟ್ಟಿಯನ್ನೂ ನಮ್ಮ ಶಿಷ್ಯ ಒದಗಿಸಿಕೊಟ್ಟರು. ನ್ಯೂಯಾರ್ಕಿನಲ್ಲಿಳಿದಾಗ ಈ ಹಣ್ಣುಗಳ ವಿಚಾರದಲ್ಲಿ

ಸುಂಕದ ಅಧಿಕಾರಿಗಳು ಆಕ್ಷೇಪ ಎತ್ತಲೂಬಹುದು; ಆಗ ಕಸದ ಬುಟ್ಟಿಗೆ ಎಸೆಯಲೂ ಸಿದ್ಧರಿರಬೇಕು—ಎಂಬುದಾಗಿ ಎಚ್ಚರಿಕೆಯನ್ನೂ ಅವರು ಕೊಟ್ಟರು. ಅಮೆರಿಕಾದವರಿಗೆ ಭಾರತದ ಹಣ್ಣುಹಂಪಲುಗಳ ಮೂಲಕ ಸಾಂಕ್ರಾಮಿಕರೋಗ ಸಾಗಿಹೋಗಬಹುದೇ ಎಂಬ ಭಯ. ಅಂತು ಆ ಗಂಟನ್ನು ಹೇರಿಕೊಂಡು ಬ್ರಾಹ್ಮೀ ಮುಹೂರ್ತದಲ್ಲಿ ನಾವು ಭಾರತದ ನೆಲಬಿಟ್ಟು ಮೇಲೇರಿಹೊರಟೆವು.

ನಾವು ಹೋಗುವ ವಿಮಾನ—ದುಬಾಯಿ, ಲಂಡನ್‌ಗಳಲ್ಲಿಳಿದು ನ್ಯೂಯಾರ್ಕಿಗೆ ಪ್ರಯಾಣಗೈಯುವ ವಿಶಾಲ ವಿಮಾನ. ಆಗ ಭಾರತದಲ್ಲಿ ಶಾಲಾಕಾಲೇಜುಗಳಿಗೆ ಬೇಸಿಗೆ ರಜೆಯಾದ್ದರಿಂದ ನಮ್ಮಂತೆ ವಿದೇಶಕ್ಕೆ ಹೋಗುವವರ ಸಂಖ್ಯೆ ಬಹಳ ಇತ್ತು. ಹಾಗಾಗಿ ಸಾಮಾನ್ಯ ೬೦೦ ಜನರನ್ನೊಯ್ಯಬಹುದಾಗಿದ್ದ ವಿಶಾಲ ವಿಮಾನ ಸಂಪೂರ್ಣ ತುಂಬಿಹೋಗಿತ್ತು. ಮಂದಹಾಸ ಬೀರುತ್ತ ಗಗನಸಖಿಯರು ಪ್ರಯಾಣಿಕರನ್ನು ಸ್ವಾಗತಿಸಿ ಉಪಚರಿಸುತ್ತಿದ್ದರು. ವಿಮಾನ ಮೇಲೇರುವಾಗ ತಲೆನೋವು, ತಳಮಳಗಳಾಗದಂತೆ ಕಿತ್ತಳೆಹಣ್ಣಿನ ರಸ, ಚಾಕಲೇಟ್‌ಗಳನ್ನು ಕೊಡುತ್ತಿದ್ದರು. ಸಾಮಾನ್ಯ ೭-೩೦ ಘಂಟೆಯ ಸಮಯದಲ್ಲಿ ಬೆಳಗಿನ ಉಪಾಹಾರವನ್ನೂ ಕೊಟ್ಟರು. ಬ್ರೆಡ್ ಬಿಸ್ಕೆಟುಗಳೇ ಪ್ರಧಾನವಾಗಿರುವ ಅದು ಅಷ್ಟೊಂದು ಹಿಡಿಸಲಿಲ್ಲ.

ಅಂತು ಹೊರಟು ಸುಮಾರು ಮೂರು ಘಂಟೆಯ ಪ್ರಯಾಣ ಮುಗಿಯುವ ವೇಳೆಗೆ ನೀಲಸಮುದ್ರದ ದೃಶ್ಯ ಮುಗಿದು ನೆಲ ಕಾಣತೊಡಗಿತು. ಆದರೆ ನೆಲ ಕೇವಲ ಮರುಭೂಮಿಯದು. ಅಲ್ಲೊಂದು, ಇಲ್ಲೊಂದು ಮರ. ನಂತರ ಕ್ರಮೇಣ ಅಬುದುಬಾಯಿನಗರ ತೋರಲಾರಂಭಿಸಿತು. ಅಲ್ಲಿ ವಿಮಾನ ಕೆಳಗಿಳಿಯಿತು. ಕೆಲವೆಲ್ಲ ಶೇಟ್‌ಗಳು ದೊಡ್ಡ ನಿಲುವಂಗಿ ಧರಿಸಿದವರಿಳಿದರು. ಕೆಲಭಾರತೀಯರೂ ಅಲ್ಲಿಳಿದರೆ ಮತ್ತೆ ಕೆಲವರು ಮೇಲೇರಿಬಂದರು.

ಒಂದುವರೆ ಘಂಟೆ ವಿರಾಮವಿದೆಯೆಂದು ಮೊದಲೇ ಸಾರಲಾಗಿತ್ತು. ಅದರಿಂದಾಗಿ ವಿಮಾನ ನಿಲ್ದಾಣದಲ್ಲೇ ಇರುವ ಸುಂಕರಹಿತ ಮಾರುಕಟ್ಟೆಯ ಸಂದರ್ಶನ ನಮಗಾಯಿತು. ನಾನಾ ತರದ ಭೋಗೋಪಕರಣಗಳು, ವಿಲಾಸ ಸಾಮಗ್ರಿಗಳು ಅಲ್ಲಿ ಪ್ರದರ್ಶಿತವಾಗಿದ್ದುವು. ಅಂತು ಸುತ್ತಾಡಿಕೊಂಡು ಸುಂದರ ವೈಭವೋಪೇತ ವಿಮಾನ ನಿಲ್ದಾಣದ ಸೊಬಗನ್ನು ನೋಡಿದೆವು. ಆಮೇಲೆ ಪುನಃ ನಾವಿದ್ದ ವಿಮಾನಕ್ಕೆ ಬಂದು ಸೇರಿದೆವು. ಅದಾಗಿ ಪುನಃ ಲಂಡನಿಗಭಿಮುಖವಾಗಿ ನಮ್ಮ ವಿಮಾನ ಹೊರಟಿತು. ಇನ್ನು ಸುಮಾರು ಏಳು ಘಂಟೆಗಳ ಪ್ರಯಾಣದ

ನಂತರ ಲಂಡನಿನಲ್ಲಿ ಇಳಿಯಲಿರುವುದಾಗಿ ವಿಮಾನದೊಳಗೇ ಸಾರಿದರು.

೫. ವಿಮಾನದಲ್ಲೂ ಮನರಂಜನೆ

ದಾರಿ ಬೇಸರ ನಿವಾರಣೆಗಾಗಿ ಹಲವಾರು ಅನುಕೂಲತೆಗಳನ್ನು ವಿಮಾನದಲ್ಲಿ ಒದಗಿಸಿದ್ದಾರೆ. ಪ್ರತಿಯೊಂದು ಸುಖಾಸನದ ಬಾಹುಗಳಲ್ಲಿ ಕೆಲಗುಂಡಿಗಳನ್ನಿರಿಸಿದ್ದಾರೆ. ಅದಕ್ಕೆ ವೈದ್ಯರ ಸ್ಟೆತೋಸ್ಕೋಪ್‌ತರದ ಒಂದು ಉಪಕರಣ ಜೋಡಿಸಿ ಕಿವಿಗಿಟ್ಟುಕೊಂಡರೆ ನಾನಾತರದ ಸಂಗೀತ ಕೇಳಬಹುದು. ದಕ್ಷಿಣಾದಿ ಅಥವಾ ಉತ್ತರಾದಿ ಶಾಸ್ತ್ರೀಯ ಸಂಗೀತ, ಸಿನೆಮಾಗಾನ, ಡಿಸ್ಕೋಗಾನ—ಇತ್ಯಾದಿಗಳನ್ನು ಕೇಳುತ್ತಿರಬಹುದು. ಅಷ್ಟೇ ಅಲ್ಲದೆ ಲಂಡನ್ ಪ್ರಯಾಣಕ್ಕೆ ಮೊದಲೊಂದು, ನಂತರ ಇನ್ನೊಂದು ಹೀಗೆ ಎರಡು ಚಲನಚಿತ್ರಗಳನ್ನು ತೋರಿಸಿದರು. ಕಿವಿಗಿಟ್ಟುಕೊಳ್ಳುವ ಶ್ರವಣ ಸಾಧನವನ್ನು, ಇನ್ನೊಂದು ಗುಂಡಿಗೆ ತಿರುಗಿಸಿಕೊಂಡರೆ ಸಿನೆಮಾ ಸಂದರ್ಶಕ ಸುಗಮವಾಗುತ್ತದೆ. ನಾವಂತೂ ಮುಂಬೈ ಬಿಡುವಾಗಲೇ ಶ್ರೀಮತಿಯರಾದ ರಾಧಾ, ಜಯಲಕ್ಷ್ಮಿಯವರ 'ಮೂರುತಿಯನು ನಿಲ್ಲಿಸೋ ಮಾಧವ ನಿನ್ನ' ಎಂಬ ಪುರಂದರದಾಸರ ಇಂಪಾದ ಹಾಡನ್ನು ಕೇಳಿಕೊಂಡು 'ಕಾಪಾಡು ದೇವಾ' ಎನ್ನುತ್ತಾ ಹೊರಟೆವು. ಮಧ್ಯದಲ್ಲಿ ಓದಬಯಸುವವರಿಗೆ ಪತ್ರಿಕೆಗಳೂ ವಿಮಾನದೊಳಗೇ ದೊರೆಯುತ್ತಿದ್ದುವು.

ಅಂತೂ ಮಾರ್ಗಯಾನ ತಿಳಿಯುವಂತೆ ನಾನಾತರದ ವ್ಯವಸ್ಥೆ ಇತ್ತು. ಹವೆಯೂ ಚೆನ್ನಾಗಿತ್ತು. ಅದರಿಂದಾಗಿ ಯಾವ ಏರುಪೇರೂ ಇಲ್ಲದೆ ಸುಗಮ ಸಂಚಾರವಾಗುತ್ತಿತ್ತು. ೨೦,೦೦೦ ಅಡಿಗಳಿಗೂ ಎತ್ತರದಲ್ಲಿ ಘಂಟೆಗೆ ೬೦೦ ಮೈಲಿಗೂ ಮಿಕ್ಕಿದ ವೇಗದಲ್ಲಿ ವಿಮಾನ ಹಾರುತ್ತಿತ್ತು. ಆದರೆ ಒಳಗಿದ್ದವರಿಗೆ ಗೊತ್ತೇ ಆಗುತ್ತಿರಲಿಲ್ಲ. ಇದ್ದಲ್ಲೇ ಇದ್ದೇವೆ ಎಂಬ ಭ್ರಮೆಯೂ ಬರುತ್ತಿತ್ತು. ಮತ್ತೊಮ್ಮೆ ಲಘುಪಹಾರವೂ ದೊರಕಿತು. ಅನಂತರ ಅಪರಾಹ್ನ ೧೨-೩೦ರ ವೇಳೆಗೆ ಲಂಡನ್ ವಿಮಾನ ನಿಲ್ದಾಣದಲ್ಲಿಳಿದೆವು. ಆದರೆ ಅಷ್ಟರಲ್ಲೇ ಘಂಟೆಗಳಲ್ಲಿ ವ್ಯತ್ಯಾಸವಾಗಹೋಗಿತ್ತು. ಭಾರತದ ಘಂಟೆಗಿಂತ ಇಂಗ್ಲೆಂಡಿನ ಘಂಟೆ ಐದೂವರೆ ಘಂಟೆ ಹಿಂದೆ.

ಅಲ್ಲಿಗಾಗ ಹೆಚ್ಚುಕಡಿಮೆ ನಮ್ಮ ಪ್ರಯಾಣದ ಅರ್ಧಭಾಗ ಮುಗಿದಂತೆಯೇ. ಅಲ್ಲಿಂದ ಗಗನಸಖಿಯರು, ವಿಮಾನ ಚಾಲಕರು ಎಲ್ಲ ಬದಲಾಗಿದ್ದರು. ಸಾಮಾನ್ಯ ಎರಡು ಘಂಟೆಗಳ ವಿರಾಮ ನಮಗಿತ್ತು. ವಿಮಾನದ ಸ್ವಚ್ಛೀಕರಣ ಕಾರ್ಯ ನಡೆಯುತ್ತಿತ್ತು. ವಿಮಾನ ಯಂತ್ರೋಪಕರಣಗಳ ಪರೀಕ್ಷೆ,

ಪೆಟ್ರೋಲ್‌ಭರಣ—ಇವೆಲ್ಲ ನಡೆಯುಲಿತ್ತು. ಹಾಗಾಗಿ ನಾವು ಸಹ ಕೆಳಗಿಳಿದು ವಿಶಾಲವಾದ ಲಂಡನ್ ವಿಮಾನ ನಿಲ್ದಾಣ ಸುತ್ತಾಡಿಬಂದೆವು. ಬಹು ವಿಸ್ತಾರವಾದ ಮಾರುಕಟ್ಟೆಯೆಂದರೆ ಅದೊಂದು 'ಮಿನಿ ಲಂಡನ್ನೇ' ಆಗಿತ್ತೆನ್ನಬಹುದು. ಬೇಕಾದ ಎಲ್ಲ ವಸ್ತುಗಳೂ ಅಲ್ಲಿ ಸಿಗುತ್ತಿದ್ದವು. ಬೆಲೆ ಮಾತ್ರ ಹೆಚ್ಚೆಂದು ತಿಳಿದವರು ಹೇಳುತ್ತಿದ್ದರು. ಅವನ್ನೆಲ್ಲ ನೋಡಿ ಸಂತೋಷಗೊಂಡೆವು. ಎತ್ತರದಿಂದ ಲಂಡನ್ ಮಹಾನಗರ ಕಂಡು ಆನಂದಿಸಿದೆವು. ಮಳೆ ಬರುತ್ತಿದ್ದುದರಿಂದ ಸಾಕಷ್ಟು ಛಳಿಯೂ ಇತ್ತು.

ಅಂತೂ ಅದೆಲ್ಲ ಮುಗಿದು ಸಾಯಂಕಾಲ ಮೂರು ಘಂಟೆಯ ವೇಳೆಗೆ ಲಂಡನ್ ಬಿಟ್ಟು ನ್ಯೂಯಾರ್ಕಿನತ್ತ ನಮ್ಮ ವಿಮಾನ ಹೊರಟಿತು. ನಮ್ಮ ಆಸನಗಳೆಲ್ಲ ಪುನರ್‌ನವೀಕರಿಸಲ್ಪಟ್ಟಿದ್ದವು. ವಿಮಾನದಲ್ಲಿ ಹೊಸ ಸಿಬ್ಬಂದಿಯವರೂ ಬಂದು ಸೇರಿದ್ದರು. ಅಷ್ಟರಲ್ಲಿ ಮಧ್ಯಾಹ್ನದ ಊಟ ಬಂತು. ಆ ಮೇಲೆ ನಿದ್ರೆಯೂ ಬರತೊಡಗಿತು.

ಆದರೆ ಅಷ್ಟರಲ್ಲಿ ಮತ್ತೊಂದು ಸಿನೆಮಾ ಆರಂಭವಾಯಿತು. ಅರ್ಧಂಬರ್ಧ ಅದನ್ನೂ ನೋಡಿದೆವು. ಆಮೇಲೆ ಅಪಾರ ಅಟ್ಲಾಂಟಿಕ್ ಸಾಗರದ ನೀಲತರಂಗಗಳನ್ನು ಎತ್ತರದಿಂದ ಕಿಟಕಿಗಳ ಮೂಲಕ ನೋಡುತ್ತ ಸಾಗಿದೆವು. ಲಂಡನ್ನಿಂದ ನ್ಯೂಯಾರ್ಕಿಗೆ ಏಳು ಘಂಟೆಗಳ ಪ್ರಯಾಣ. ಆದರೆ ಅಲ್ಲಿಯ ಘಂಟೆಗೂ ಅಮೆರಿಕಾ ಘಂಟೆಗೂ ಪುನಃ ಐದು ಘಂಟೆಗಳ ವ್ಯತ್ಯಾಸ. ಹಾಗಾಗಿ ಏಳೆಂಟು ಘಂಟೆಗಳ ಪ್ರಯಾಣ ಸಾಗಿದರೂ ನಾವು ಸಾಯಂಕಾಲ ೫–೩೦ಕ್ಕೆ ನ್ಯೂಯಾರ್ಕಿನ ಕೆನಡಿ ವಿಮಾನ ನಿಲ್ದಾಣದಲ್ಲಿಳಿದೆವು. ಆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರತಿ ನಿಮಿಷವೂ ವಿಮಾನಗಳು ಇಳಿಯುತ್ತಲೂ, ಮೇಲೇರುತ್ತಲೂ ಇರುತ್ತವೆ. ರಾತ್ರಿಹಗಲೆಂಬ ವ್ಯತ್ಯಾಸವಿಲ್ಲ. ನಿಶ್ಚಿತ ಸಮಯಕ್ಕೆ ಇಳಿಯಬೇಕಾದ ವಿಮಾನ ಇಳಿಯದಿದ್ದರೆ, ಮತ್ತೆ ಘಂಟೆಗಟ್ಲೆ ಆಕಾಶದಲ್ಲೇ ಕಾಯುತ್ತ ತಿರುಗುತ್ತಿರಬೇಕಾದ ಪ್ರಮೇಯವೂ ಬರಬಹುದಂತೆ. ಅಷ್ಟೊಂದು ವಿಮಾನಯಾನಗಳ ಒತ್ತಡ.

ಅಂತು ಅಲ್ಲಿಳಿದಾಗ ನಮಗೆ ಮಾವಿನ ಹಣ್ಣಿನ ಚೀಲದ ಚಿಂತೆ. ಬಹು ರುಚಿಕರವಾದ ಆಯ್ದ ಅಲ್ಫಾನ್ಸೋ ಮಾವಿನ ಹಣ್ಣುಗಳು! ವಿಮಾನದಲ್ಲಿರುವ ಗಗನಸಖಿಯರನ್ನು ಕೇಳಿದೆವು. ಅವರು ಸಹ ಮಾವಿನಹಣ್ಣು ಬಿಡಲಾರರೆಂದು ಎಚ್ಚರಿಸಿದರು. ಕೊನೆಗೆ ಅವರೊಡಗೂಡಿ ೭–೮ ಹಣ್ಣುಗಳನ್ನು ತಿಂದು ತೇಗಿದೆವು. ಅವರೂ ಮೆಚ್ಚಿದರು. ಉಳಿದುವನ್ನು ಹಿಡಿದುಕೊಂಡು ಕೆಳಗಿಳಿ

ದೆವು. ನಮ್ಮ ವೀಸಾ, ಟಿಕೇಟುಗಳ ತಪಾಸಣೆಯಾದ ಮೇಲೆ ನಮ್ಮ ಪೆಟ್ಟಿಗೆಗಳ ರಾಶಿಯತ್ತ ಹೋದೆವು. ನಾವಿದ್ದ ವಿಮಾನದಿಂದ ಅಷ್ಟರಲ್ಲೇ ಅವೆಲ್ಲ ಇನ್ನೊಂದೆಡೆ ಬಂದು ಜಮಾಯಿಸಿದ್ದುವು. ನಮ್ಮ ಗಂಟುಪೆಟ್ಟಿಗೆಗಳ ನ್ನೆತ್ತಿಕೊಂಡು, ಮಾವಿನಹಣ್ಣಿನ ಚೀಲ ಹಿಡಿದುಕೊಂಡು—ಸುಂಕದವನೊಡನೆ ಸುಖದುಃಖ ಹೇಳಹೊರಟೆವು. ಅವನು ನಮ್ಮ ಮುಖ ನೋಡಿಯೋ—ಇವೆಲ್ಲ 'ಸಾಧುಪ್ರಾಣಿ'ಗಳೆಂದು ಭಾವಿಸಿದನೋ ಏನೋ—ನಮ್ಮ ಚೀಟಿಯ ಮೇಲೆ ಸಹಿ ಹಾಕಿ ನಮ್ಮನ್ನು ಹೊರಗಟ್ಟಿದ. ನಮ್ಮ ಚೀಲ, ಪೆಟ್ಟಿಗೆಗಳನ್ನು ಕಣ್ಣೆತ್ತಿಯೂ ನೋಡಲಿಲ್ಲ. ಆದರೆ ನಮ್ಮ ನಂತರದ ವ್ಯಾಪಾರೀ ಬಂಧುಗಳ ಪ್ರತಿ ಪೆಟ್ಟಿಗೆಗಳನ್ನೂ ಬಿಡಿಸಿ, ಬಿಡಿಸಿ, ನೋಡಿಯೇ ಕಳಿಸಿದ. ಅಂತೂ ಸುಂಕದವನಿಗೂ ಸುಖದುಃಖದರಿವಿದೆ—ಎಂಬುದರ ಅರಿವು ನಮಗಾಯಿತು.

೬. ನ್ಯೂಯಾರ್ಕಿನಿಂದ ಬಿಂಘಾಂಟನ್ನಿಗೆ

ಹಾಗೂ ಹೀಗೂ ಹೊರಬರುವಾಗ, ಸೊಸೆ ಸೌ। ಪ್ರಭಾ, ಮೊಮ್ಮಕ್ಕಳಿಬ್ಬರು—ವಿಮಲ್ ಮತ್ತು ಮೈಥಾಲಿ ನಮಗಾಗಿ ಕಾಯುತ್ತಿದ್ದರು. ಮಗ ಸುಧಾಕರ ನಿಗೆ ಎಂದಿನಂತೆ ಅರ್ಜೆಂಟ್ ಮೂಳೆ ಮುರಿದ ಕೇಸಿದ್ದುದರಿಂದ ಬರಲಾಗಲಿಲ್ಲ ವಂತೆ. ಒಮ್ಮೆಗೇ ಸೊಸೆ ಮಕ್ಕಳನ್ನು ನೋಡಿ ಮಾರ್ಗಾಯಾಸ ಮರೆತು ಹೋಯಿತು. ನ್ಯೂಯಾರ್ಕಿನಿಂದ ಅವರ ದೊಡ್ಡ ಕಾರಲ್ಲಿ ಹೊರಟೆವು. ಅಲ್ಲಿಂದ ಬಿಂಘಾಂಟನ್ನಿಗೆ ೧೭೦ ಮೈಲು ದೂರ, ವಿಶಾಲವಾದ ರಸ್ತೆಗಳ ಸಾಲುಗಳಲ್ಲಿ ಸಾಯಂಕಾಲ ೬-೩೦ಕ್ಕೆ ನ್ಯೂಯಾರ್ಕ್ ಬಿಟ್ಟು ಹೊರಟೆವು.

ನ್ಯೂಯಾರ್ಕೆಂದರೆ ಅಮೇರಿಕಾದ ಅತ್ಯಂತ ದೊಡ್ಡ ನಗರ, ಗಗನಚುಂಬಿ ಕಟ್ಟಡಗಳ ತವರ್ಮನೆ. ಅಲ್ಲಿಂದ ಬಿಂಘಾಂಟನ್ನಿಗೆ ಕಾರಲ್ಲಿ ಹೋಗುವ ರೀತಿಯೇ ಒಂದು ದೊಡ್ಡ ಅನುಭವ. ಎಲ್ಲ ಕಡೆಯೂ ಹೋಗಲು ಬೇರೆ ರಸ್ತೆ; ಪಕ್ಕದಲ್ಲೇ ಬರಲು ಬೇರೆ ರಸ್ತೆ. ಒಂದೊಂದು ರಸ್ತೆಯಲ್ಲೂ ೬-೮ ಕಾರುಗಳು ಒಟ್ಟೊಟ್ಟಿಗೇ ಹೋಗಲು ಅಥವಾ ಬರಲು ನಿಶ್ಚಿತ ಗೆರೆ ಹಾಕಿದ ಓಣಿಗಳು (Lanes), ಕೆಲವೆಡೆ ಹತ್ತು ಲೇನ್‌ಗಳು ಇರುವುದೂ ಉಂಟು. ಪ್ರತಿಯೊಂದು ರಸ್ತೆಯಲ್ಲೂ ಗರಿಷ್ಠ ಅಥವಾ ಕನಿಷ್ಠ ವೇಗವನ್ನು ಅನುಸರಿಸಬೇಕಾದ ನಿಯಮಗಳಿವೆ. ಏಕಕಾಲದಲ್ಲಿ ಏಕಮುಖವಾಗಿ ಹೋಗುವ ಕಾರುಗಳ ಎಂಟು ಹತ್ತು ಸಾಲುಗಳು—ಇರುವೆ ಸಾಲುಗಳಂತೆ ಸಾಗುತ್ತವೆ. ಎಡೆಬಿಡದೆ ಘಂಟೆಗೆ ೬೦ ಮೈಲಿನ ವೇಗದಲ್ಲಿ ಓಡುತ್ತವೆ. ರಸ್ತೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರ

ಬೇಕು. 'ಹಾರ್ನ್' ಮಾಡುವ ಕ್ರಮವೇ ಇಲ್ಲ. ಇದನ್ನೆಲ್ಲ ನೋಡುವುದಕ್ಕಾಗಿಯೇ ಸಂಚಾರೀ ಪೋಲಿಸ್‌ದಳದ ವ್ಯವಸ್ಥೆ ಇದೆ. ರಸ್ತೆಯಲ್ಲಾಗಲಿ ರಸ್ತೆಯ ಬದಿಯಲ್ಲಾಗಲಿ ಮನುಷ್ಯರು ಕಾಣಸಿಗುವುದೇ ಅಪರೂಪ. ಕಾರೊಳಗೆ ಒಬ್ಬರು ಅಥವಾ ಇಬ್ಬರು ಪ್ರಯಾಣಗೈಯುತ್ತಿರುವವರು ಮಾತ್ರ ನೋಡಸಿಗುತ್ತಾರೆ. ನಾಯಿ, ಹಸು, ಕತ್ತೆ ಮುಂತಾದ ಪ್ರಾಣಿಗಳಂತು ರಸ್ತೆಯಲ್ಲಿ ಕಾಣಸಿಗುವುದೇ ಇಲ್ಲ. ಸಿಕ್ಕಿದರೆ ಪೋಲಿಸರು ಗುಂಡಿಕ್ಕಿ ಕೊಲ್ಲುತ್ತಾರೆ. ಅಥವಾ ಕಾರಿನಡಿಗೆ ಬಿದ್ದು ಸತ್ತರೂ ಅದು ಅಪರಾಧವಲ್ಲ. ಸಾಕುನಾಯಿ, ಹಸು ಮುಂತಾದುವನ್ನ ಮನೆಯೊಳಗೇ ಬಂಧಿಸಿಡಬೇಕು.

ಹಾಗಾಗಿ ನಾವು ಸಾಗಬೇಕಿದ್ದ ೧೬೦ ಮೈಲಿ ದೂರ ಮೂರು ಘಂಟೆಯೊಳಗೆ ಒಂದೇ ಓಟದಲ್ಲಿ ಮುಗಿಯಿತು. ಸಾಮಾನ್ಯ ೧೦ ಘಂಟೆಯ ವೇಳೆಗೆ ನಾವು ಮನೆ ಸೇರಿಯಾಗಿತ್ತು. ಬೇಸಗೆಯ ಕಾಲದಲ್ಲಿ ಸಾಯಂಕಾಲ ಕತ್ತಲಾಗುವುದೇ ೯–೩೦ರ ಸಮಯ. ನ್ಯೂಯಾರ್ಕಿನಿಂದ ಹೊರಡುವಾಗಲೇ ಫೋನ್ ಮೂಲಕ ನಾವು ಹೊರಟ ವಿಷಯ ತಿಳಿಸಿದ್ದೆವು. ಆದ್ದರಿಂದ ನಾವು ಸೇರುವ ಸಮಯಕ್ಕೆ ಸರಿಯಾಗಿ ಊಟವೂ ಸಿದ್ಧವಾಗಿತ್ತು. ಅಲ್ಲಿಯ ಫೋನ್ ವ್ಯವಸ್ಥೆಯೂ ಎಷ್ಟು ದೂರಕ್ಕೇ ಆಗಲಿ; ಬೇಕಿದ್ದ ನಂಬರಿನ ಗುಂಡಿ ಒತ್ತಿದ ಕೂಡಲೇ ಸ್ಪಷ್ಟವಾಗಿ ಕ್ಷಣಾರ್ಧದಲ್ಲಿ ಮಾತಾಡಲಾಗುವ ವಿಸ್ಮಯಕರ ರೀತಿಯದಾಗಿದೆ. ಹಾಗಾಗಿ ಮನೆ ಸೇರಿದೊಡನೆ ಸಂತೋಷದಿಂದ ನಗುನಗುತ್ತ ಊಟ ಮಾಡಿದೆವು. ಕಷ್ಟದಿಂದ ಕೊಂಡೊಯ್ದ ಮಧುರ ಮಾವಿನಹಣ್ಣುಗಳನ್ನೂ ಕೊಯ್ದು ತಿಂದು ಆನಂದಿಸಿದೆವು, ಊಟಕ್ಕೆ ನಾವು ತೆಗೆದುಕೊಂಡು ಹೋಗಿದ್ದ ಭಾರತದ ಉಪ್ಪಿನಕಾಯಿಯೂ ಇದ್ದುದರಿಂದ ಅಮೇರಿಕಾದ ಮಕ್ಕಳಿಗಾದ ಸಂತೋಷ ಅಷ್ಟಿಷ್ಟಲ್ಲ.

ಎಷ್ಟಾದರೂ, ಮಾತೃಭೂಮಿಯ ಮಾವಿನಹಣ್ಣು, ಮನೆಯಲ್ಲಿ ಮಾಡಿದ ಉಪ್ಪಿನಕಾಯಿ, ಮಾತಾಪಿತರೊಡನೆ ಬಹುಕಾಲದ ನಂತರದ ಒಡನಾಟ— ಇವೆಲ್ಲ ಅಮೇರಿಕಾದ ಸ್ವರ್ಗದಲ್ಲೂ, ಹೊಸ ಸಂತಸಸುಖಗಳನ್ನು ಒದಗಿಸಿದುವು. ಅದೊಂದು ಅವಿಸ್ಮರಣೀಯ ಆನಂದದ ಅನುಭವ!

ಪ್ರೊ॥ ಕೆ. ಆರ್. ಉಡುಪ

———

ಶೀಲವೆಂಬುದೇ ಉತ್ತುಂಗ ಅಂತಸ್ತಿನ ಪ್ರಾಕೃತಿಕ ಬಲವು.

—ಬುದ್ಧ

ಪುಸ್ತಕ ವಿಮರ್ಶೆ

ಮಹಾತ್ಮಗಾಂಧಿ ಮತ್ತು ಶೀಘ್ರಲಿಪಿಗಾರರು : ಲೇಖಕರು : ಅಂಚೆಪೇಟೆ ದಕ್ಷಿಣಾ ಮೂರ್ತಿ; ಪ್ರಕಾಶಕರು : ಯು. ಎಂ. ಎ. ಪಬ್ಲಿಕೇಶನ್ಸ್, ಬೆಂಗಳೂರು ೫೬೦೦೦೨ ; ಪ್ರಥಮ ಮುದ್ರಣ–೧೯೮೪ ; ಬೆಲೆ ರೂ. ೪ ೫೦.

ಗಾಂಧಿ ಎಂಬ ಹೆಸರು ಮಾನವೀಯತೆ ಎಂಬುದಕ್ಕೆ ಒಂದು ಸಂಕೇತ. ಅವರ ಬದುಕನ್ನು, ಅವರ ಸಾಧನೆ ಸಿದ್ಧಿಯನ್ನು ಕುರಿತಂತೆ ರಾಶಿರಾಶಿ ಗ್ರಂಥಗಳು ಪ್ರಕಟವಾಗಿವೆ. ಗಾಂಧೀಜಿಯವರೇ ಸ್ವತಃ ರಚಿಸಿದ 'ಆತ್ಮಕತೆ' ಬಹು ಬೆಲೆ ಯುಳ್ಳ ಕೃತಿ. ಆ ಕೃತಿಯಲ್ಲಿ ಗಾಂಧೀಜಿ ತಮ್ಮ ಬದುಕಿನ ಸಂಚಿಕೆ, ಮೌಲ್ಯಗಳನು ನೇರವಾಗಿ ತೆರೆದಿಟ್ಟಿದ್ದಾರೆ. ಗಾಂಧೀಜಿಯವರ ಬಗ್ಗೆ ಬರೆದಿರುವ ನೂರು ಗ್ರಂಥ ಗಳನ್ನು ಓದುವುದಕ್ಕಿಂತ ಗಾಂಧೀಜಿಯವರ ಆತ್ಮಕಥೆ ಒಂದನ್ನು ಓದಿದರೆ ಸಾಕು. ಗಾಂಧೀಜಿ ಹೆಚ್ಚು ಅರ್ಥವಾಗುತ್ತಾರೆ ಎಂಬ ಅಭಿಪ್ರಾಯವಿದೆ; ನಿಜ. ಆದರೆ ಗಾಂಧೀಜಿಯವರನ್ನು ಕುರಿತು ಇತರರು ಬರೆದಿರುವ ಕೃತಿಗಳಲ್ಲಿಯೂ ಕೆಲವು ಬೆಲೆಯುಳ್ಳ ಅಂಶಗಳು ಬೆಳಕಿಗೆ ಬರುತ್ತವೆ. ಸದ್ಯದಲ್ಲಿ ಅಂಚೆಪೇಟೆ ದಕ್ಷಿಣಾಮೂರ್ತಿಯವರು ರಚಿಸಿರುವ ಮಹಾತ್ಮ ಗಾಂಧಿ ಮತ್ತು ಶೀಘ್ರಲಿಪಿ ಕಾರರು ಎಂಬ ಗ್ರಂಥ ಈ ದಿಸೆಯಲ್ಲಿ ಅಂಥ ಒಂದು ಪ್ರಾಮಾಣಿಕ ಪ್ರಯತ್ನ ವಾಗಿದೆ.

ಗಾಂಧೀಜಿಯವರೊಡನೆ ಸ್ನೇಹಸಂಬಂಧವನ್ನು ಇಟ್ಟುಕೊಂಡು, ಅವರ ಕೆಲಸಕಾರ್ಯಗಳಲ್ಲಿ ಶ್ರದ್ಧೆಯಿಂದ ದುಡಿದ ಆಪ್ತಕಾರ್ಯದರ್ಶಿಗಳ, ಶೀಘ್ರಲಿಪಿ ಗಾರರ ಜೀವನ ವಿವರಗಳನ್ನು ಈ ಗ್ರಂಥದಲ್ಲಿ ಪರಿಚಯ ಮಾಡಿಕೊಡಲಾಗಿದೆ. ಶ್ರೀ ಮಹದೇವ ದೇಸಾಯಿ, ಪ್ಯಾರೆಲಾಲ್, ಸೈಮಂಡ್ಸ್, ಪರಶುರಾಮನ್, ಕುಮಾರಿ ಡಿಕ್, ಕುಮಾರಿ ಶ್ಲೇಜನ್—ಇವರೇ ಆ ವ್ಯಕ್ತಿಗಳು. ಹೀಗೆ ದುಡಿದ ವರಲ್ಲಿ ಮಹಿಳೆಯರೂ ಸೇರಿದ್ದಾರೆ ಎಂಬುದು ಒಂದು ವಿಶೇಷ ಸಂಗತಿ. ಕುಮಾರಿ ಡಿಕ್, ಕುಮಾರಿ ಶ್ಲೇಜನ್ ಎಂಬ ತರುಣಿಯರು ಕೇವಲ ಕೆಲಸಗಾರರಾಗಿ ದುಡಿದವರಲ್ಲ; ಅದನ್ನೂ ಮೀರಿ ಗಾಂಧೀಜಿಯವರ ವ್ಯಕ್ತಿತ್ವದ ಪ್ರಭೆಯಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡವರು. ಅವರ ಸೇವೆಯನ್ನು ಗಾಂಧೀಜಿಯವರು ಕೃತಜ್ಞತೆಯಿಂದ ಸ್ಮರಿಸಿಕೊಂಡಿರುವ ವಿಷಯ ತಿಳಿದುಬರುತ್ತದೆ. ದೊಡ್ಡವರು ಮಾಡಿದ ಉಪಕಾರವನ್ನು ಕಿರಿಯರು ಕೃತಜ್ಞತೆಯಿಂದ ಸ್ಮರಿಸುವುದು ಲೋಕ ಸಾಮಾನ್ಯ ವ್ಯವಹಾರ. ಆದರೆ ಕಿರಿಯರ ಸೇವೆಯನ್ನು ಹಿರಿಯರಾದವರು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದು ಅವರ ದೊಡ್ಡತನಕ್ಕೆ ಸಾಕ್ಷಿ. ಗಾಂಧೀಜಿ ಅಂಥ ದೊಡ್ಡ ವ್ಯಕ್ತಿ. ಅವರ ಮಾನವೀಯತೆ ಅಷ್ಟೊಂದು ಹಿರಿದಾದುದು.

ತಮ್ಮ ಬದುಕಿನ ಆಗುಹೋಗುಗಳಲ್ಲಿ ಸಕ್ರಿಯವಾಗಿ ಪಾಲುಗೊಂಡ ಎಲ್ಲ ವ್ಯಕ್ತಿಗಳ ವ್ಯಕ್ತಿತ್ವವನ್ನು ಗಾಂಧೀಜಿಯವರು ಅರ್ಥಮಾಡಿಕೊಳ್ಳುತ್ತಿದ್ದರು. ಒಬ್ಬ ಸಾಮಾನ್ಯ ಶೀಘ್ರಲಿಪಿಗಾರನಿಂದಲೂ ಕಲಿಯುವುದಿದೆ ಎಂದು ತಿಳಿದವರು ಗಾಂಧೀಜಿ. ಪತ್ರವ್ಯವಹಾರದಲ್ಲಿ ತಮ್ಮ ಆಪ್ತಕಾರ್ಯದರ್ಶಿಗಳು ಕೊಡುತ್ತಿದ್ದ ಸಲಹೆ ಸೂಚನೆಗಳನ್ನು ಗಾಂಧೀಜಿಯವರು ಮುಕ್ತಮನಸ್ಸಿನಿಂದ ಸ್ವೀಕರಿಸುತ್ತಿದ್ದರೆಂಬುದಕ್ಕೆ ಈ ಪುಸ್ತಕದಲ್ಲಿ ಅನೇಕ ನಿದರ್ಶನಗಳಿವೆ. ಕೆಲವೊಮ್ಮೆ ಪರಸ್ಪರರಲ್ಲಿ ಘರ್ಷಣೆಯ ಸಂದರ್ಭಗಳೂ ಇರುತ್ತಿದ್ದವು. ಅಂಥ ವೇಳೆಯಲ್ಲಿ ಗಾಂಧೀಜಿಯವರು ಸಂಯಮದಿಂದ ವರ್ತಿಸುತ್ತಿದ್ದರು. ಪರಶುರಾಮ್ ಎಂಬ ಶೀಘ್ರಲಿಪಿಕಾರನೊಬ್ಬ ಬ್ರಹ್ಮಚರ್ಯದ ಬಗೆಗಿನ ಗಾಂಧೀಜಿಯವರ ಅಭಿಪ್ರಾಯಗಳನ್ನು ತಿರಸ್ಕರಿಸಿದ, ಖಂಡಿಸಿದ. ಆ ಕಾರಣಕ್ಕಾಗಿ ಗಾಂಧೀಜಿಯವರನ್ನು ತೊರೆದು ದೂರಹೋಗುವ ಸಂದರ್ಭ ಬಂದಾಗ ಗಾಂಧೀಜಿಯವರು ಅವನನ್ನು ಹಾರ್ದಿಕವಾಗಿ ಬೀಳ್ಕೊಟ್ಟರು. ಅವರು ಎಂಥ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ವ್ಯಕ್ತಿತ್ವಕ್ಕೆ, ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಬೆಲೆಕೊಡುತ್ತಿದ್ದರೆಂಬುದಕ್ಕೆ ಈ ಪ್ರಸಂಗ ನಿದರ್ಶನವಾಗಿದೆ.

ಪುಸ್ತಕದ ಶೀರ್ಷಿಕೆ 'ಮಹಾತ್ಮಗಾಂಧಿ ಮತ್ತು ಶೀಘ್ರಲಿಪಿಕಾರರು' ಎಂದಿದ್ದರೂ ಶೀಘ್ರಲಿಪಿಕಾರರಲ್ಲದ ಮಹದೇವ ದೇಸಾಯಿ, ಪ್ಯಾರೇಲಾಲ್ ಎಂಬ ಆಪ್ತಕಾರ್ಯದರ್ಶಿಗಳ ವಿವರಗಳೂ ಈ ಗ್ರಂಥದಲ್ಲಿ ಸೇರಿವೆ. ಮಹದೇವ ದೇಸಾಯಿಯವರನ್ನು ಕುರಿತು ಬರೆಯುವ ಸಂದರ್ಭದಲ್ಲಿ ಅವರು ಟಿಪ್ಪಣಿಗಳನ್ನು ಕೆಲವೊಮ್ಮೆ 'ಕರೆನ್ಸಿನೋಟುಗಳ' ಮೇಲೆ ಕೂಡ ಬರೆಯುತ್ತಿದ್ದರು— ಎಂದು ಲೇಖಕರು ಬರೆಯುತ್ತಾರೆ (ಪುಟ ೩೧). ಗಾಂಧೀಜಿಯವರ ಅನುಯಾಯಿಯಾಗಿದ್ದುಕೊಂಡು ಮಹದೇವ ದೇಸಾಯಿಯವರು ಹೀಗೆ ವರ್ತಿಸಿದ್ದರೆ? ವರ್ತಿಸಿದ್ದರೆ ಈ ನಡವಳಿಕೆ ಎಷ್ಟರಮಟ್ಟಿಗೆ ಸಮಂಜಸ ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಇನ್ನೊಂದು ಸಂದರ್ಭದಲ್ಲಿ "ಮಹಾತ್ಮಗಾಂಧಿಯವರ ಒಡನಾಟ, ಅವರ ಕೆಲಸಗಳನ್ನು ಮಾಡುವುದು ಅಲಗಿನ ಮೇಲೆ ನಡೆದಂತೆ. ಒಂದುಬಾರಿಯೂ ಎಚ್ಚರ ತಪ್ಪುವಹಾಗಿರಲಿಲ್ಲ. ಗಾಂಧಿಯುಗ ತ್ಯಾಗ, ದೇಶಪ್ರೇಮ, ಬಲಿದಾನಗಳ ಮಹಾಕಾರ್ಯಗಳಿಂದ ಕೂಡಿರುತ್ತಿತ್ತು. ಇಲ್ಲಿ ಸುಖ ಕನಸಿನ ವಸ್ತುವಾಗಿತ್ತು" ಎಂದು ಬರೆದಿದ್ದಾರೆ. ಈ ಮಾತು ಅಷ್ಟು ಸಮಂಜಸವಲ್ಲ. ಗಾಂಧೀಜಿಯವರು ಕಾಯಕದಲ್ಲಿ ಕೈಲಾಸವನ್ನು ಕಂಡವರು. ಅವರ ಅನುಯಾಯಿಗಳಿಗೂ ಅದನ್ನೇ ಹೇಳಿದವರು ಮಾಡುತ್ತಿರುವ ಕೆಲಸ ಎಷ್ಟೇ ಕಠಿಣವಾಗಿರಬಹುದು, ಆದರೆ ಮಾಡುವ ಮನೋಭಾವ ಮುಖ್ಯ. ಆ

ಮನೋಭಾವ ಉದಾತ್ತವಾಗಿದ್ದರೆ, ಪ್ರಾಮಾಣಿಕವಾಗಿದ್ದರೆ ಸುಖದುಃಖದ ಮಾತೇ ಬರುವುದಿಲ್ಲವೆನಿಸುತ್ತದೆ.

ಇಂಥ ಕೆಲವು ಅರೆಕೊರೆಗಳನ್ನು ಬಿಟ್ಟರೆ ದಕ್ಷಿಣಾಮೂರ್ತಿಯವರ ಪ್ರಯತ್ನ, ಉದ್ದೇಶ ಸಫಲವಾಗಿದೆ ಎಂದು ಹೇಳಬಹುದು.

ಕೃಷ್ಣ ಹಾಸನ

* * *

ವನಶ್ರೀ— ಗುಂಡ್ಲು ಪೇಟೆ ತಾಲ್ಲೂಕು ಪರಿಚಯ ಗ್ರಂಥ. ಪ್ರಧಾನ ಸಂಪಾದಕ ಹೆಚ್. ಡಿ. ನಾರಾಯಣಸ್ವಾಮಿ, ಸಂಪಾದಕ ಜಿ. ಜಿ. ಮಂಜುನಾಥನ್ ಪ್ರಕಾಶಕರು: ಗುಂಡ್ಲು ಪೇಟೆ ತಾಲ್ಲೂಕು ಅಭಿವೃದ್ಧಿ ಮಂಡಳಿ, ಗುಂಡ್ಲು ಪೇಟೆ ಪುಟ: ೧೬+೧೯೮, ಬೆಲೆ: ೧೦ರೂ.

ಗುಂಡ್ಲು ಪೇಟೆ ತಾಲ್ಲೂಕಿನ ಭೌಗೋಳಿಕ, ಐತಿಹಾಸಿಕ, ಸಾಂಸ್ಕೃತಿಕ, ಆರ್ಥಿಕ ಕಲೆ, ಸಾಹಿತ್ಯ ಮತ್ತು ರಾಜಕೀಯ ಇವುಗಳ ಪರಿಚಯಾತ್ಮಕ ಬಿಡಿ ಲೇಖನಗಳ ಉಪಯುಕ್ತ ಸಂಗ್ರಹ. ಈಗಾಗಲೇ ಕರ್ನಾಟಕರಾಜ್ಯ ಜಿಲ್ಲಾವಾರು ಗೆಜೆಟಿಯರ್‌ಗಳಲ್ಲಿ, ಕನ್ನಡ ವಿಶ್ವಕೋಶಗಳಲ್ಲಿ ಕರ್ನಾಟಕದ ತಾಲ್ಲೂಕುಗಳ, ನಗರಗಳ ಸಂಕ್ಷಿಪ್ತ ಪರಿಚಯ ಓದುಗರಿಗೆ ಆಗಿದೆ. ಈ ದಿಸೆಯಲ್ಲಿ ಕನ್ನಡ ವಿಷಯ ವಿಶ್ವಕೋಶ ಯೋಜನೆಯಲ್ಲಿ ಪ್ರಕಟವಾಗಿರುವ "ಕರ್ನಾಟಕ" ಸಂಪುಟ ಇಡೀ ಕರ್ನಾಟಕ ರಾಜ್ಯದ ನೋಟವನ್ನು ಓದುಗರಿಗೆ ನೀಡುತ್ತದೆ. ಆದರೆ ಯೋಜನೆಯು ಒಂದು ಗೊತ್ತಾದ ಚೌಕಟ್ಟಿನಲ್ಲಿ ಅದರ ಎಲ್ಲೆ ಮೀರದಂತೆ ನಡೆಯುವಾಗ, ಆ ನಿರ್ಭಂಧದಿಂದಾಗಿ ಕೆಲವು ವಿಷಯಗಳನ್ನು ಕೈ ಬಿಡಬೇಕಾಗಿ ಬರುತ್ತದೆ. 'ವನಶ್ರೀ'ಯಂತ ತಾಲ್ಲೂಕು ಮಟ್ಟಕ್ಕೆ ಸೀಮಿತವಾದ ಗ್ರಂಥಗಳು ಸಂಬಂಧಪಟ್ಟ ಇಡೀ ತಾಲ್ಲೂಕಿನ ವಿಷಯಗಳನ್ನು ಸವಿವರವಾಗಿ ನೀಡಬಹುದು. 'ವನಶ್ರೀ' ಯಲ್ಲಿ ಗುಂಡ್ಲು ಪೇಟೆ ತಾಲ್ಲೂಕಿನ ಸಮಗ್ರ ಪರಿಚಯ ನೀಡುವ, ಗುಂಡ್ಲು ಪೇಟೆಯ ಒಂದು ನೋಟ, ತಾಲ್ಲೂಕಿನ ಸ್ಥೂಲ ಪರಿಚಯ, ವಿಜಯಪುರ, ಗೋಪಾಲ ಸ್ವಾಮಿ ಬೆಟ್ಟ, ಬಂಡಿಪುರ ಅಭಯಾರಣ್ಯ, ಮುಂತಾದ ಭೌಗೋಳಿಕ ಹಾಗೂ ಸ್ಥಳ ಪರಿಚಯ ಲೇಖನಗಳೂ ನೋಡಿದು ಮೈಸೂಯಗುಂಡಲನಾಡು, ವನಶ್ರೀ, ಬನದ ಸಿರಿ, ಅಭಯಾರಣ್ಯದ ಒಡಲೊಳಗೆ ಮತ್ತು ತಪೋವನ ವರ್ಣನೆ ಮುಂತಾದ ಕವನ ಹಾಗೂ ಸಾಹಿತ್ಯಕ ಲೇಖನಗಳೂ ಗುಂಡ್ಲು ಪೇಟೆ ತಾಲ್ಲೂಕಿನ ಭೂ ವೈಜ್ಞಾನಿಕ ಪರಿಚಯ ನೀಡುವ 'ಭೂ ವೈಜ್ಞಾನಿಕ ಪರಿಸರ ವಿಶ್ಲೇಷಣೆ' ಲೇಖನವೂ ಇದೆ. 'ಸಾಂಸ್ಕೃತಿಕ ಹಿನ್ನೆಲೆ', 'ಸಾಂಸ್ಕೃತಿಕ ರಾಜಧಾನಿ ತೆರಕಣಾಂಬಿ' ಈ ಲೇಖನಗಳು ಗುಂಡ್ಲು ಪೇಟೆಯ ಸಾಂಸ್ಕೃತಿಕ ಪರಿಚಯವನ್ನು

ಸಮರ್ಥರೀತಿಯಲ್ಲಿ ಮಾಡಿಕೊಡುತ್ತವೆ. ಶಾಸನಗಳು ಮತ್ತು ಇತಿಹಾಸ ಕುಮಾರ ಲಕ್ಷ್ಮಣ, ಚಿಕ್ಕ ಕಂಪಣ, ರಣಧೀರ ಕಂಠೀರವ ಅಪ್ರತಿಮ ವೀರ ಚಿಕ್ಕದೇವರಾಜ, ದೇವರಾಜ, ತೆರಕಣಾಂಬಿ ಬೊಮ್ಮರಸ, ದೇವರಾಜ ಒಂದು ಟಿಪ್ಪಣಿ, ಮುಂತಾದ ಇತಿಹಾಸ ಹಾಗೂ ಐತಿಹಾಸಿಕ ವ್ಯಕ್ತಿಗಳ ಪರಿಚಯ ನೀಡುವ ಲೇಖನಗಳೂ ಚಿಕ್ಕುಪಾಧ್ಯಾಯ, ವ್ಯಾಕರಣದ ಮಲ್ಲಪ್ಪನವರು, ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್ ಮುಂತಾದವರ ಬಗ್ಗೆ ತಿಳಿಸುವ ಲೇಖನಗಳೂ ಇವೆ. ಪರಪುಟ್ಟನಾದಂ ಪರವಾಸುದೇವಂ ಎಂಬ ಲೇಖನ ಪರವಾಸುದೇವಾಲಯದ ನಿರ್ಮಾಣ ಹಾಗೂ ಅದರ ಇಂದಿನ ದುರ್ದೆಶೆಯ ಕಾರಣವನ್ನು ತಿಳಿಸುವ ಲೇಖನವಾಗಿದೆ.

ಗ್ರಂಥದ ಎರಡನೆಯ ಭಾಗವಾಗಿ ಗುಂಡ್ಲುಪೇಟೆ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಪರಿಚಯದೊಡನೆ ಅದರ ಮೂಲಕ ನಡೆಯುತ್ತಿರುವ ವಿವಿಧ ಕಾರ್ಯ ಚಟುವಟಿಕೆಗಳನ್ನು ಪರಿಚಯಿಸುವ ಗ್ರಾಮ ಪಂಚಾಯಿತಿಗಳು, ಸಮಾಜ ಕಲ್ಯಾಣ, ಮೀನುಗಾರಿಕೆ, ಪಶುಸಂಗೋಪನೆ, ಪಶುವೈದ್ಯ, ಮಹಿಳೆ ಮತ್ತು ಮಕ್ಕಳು, ಜನತಾವಸತಿ ಯೋಜನೆಗಳು, ಸಾರ್ವಜನಿಕ ಆರೋಗ್ಯ, ಯುವಜನಸೇವೆ ಮತ್ತು ಕ್ರೀಡೆ, ಉದ್ಯೋಗ ದೃಢೀಕರಣ ಯೋಜನೆ ಮುಂತಾದ ಉಪಯುಕ್ತ ಲೇಖನಗಳನ್ನು ಮುಖ್ಯ ಸಂಪಾದಕರಾಗಿ ಸಿ. ಕೆ. ದೇವದಾಸ್ ಸಹ ಸಂಪಾದಕರಾಗಿ ಆರ್. ರಂಗಯ್ಯನವರು ಸಂಪಾದಿಸಿ ಕೊಟ್ಟಿದ್ದಾರೆ.

ಈ ಗ್ರಂಥದ ಉಪಯುಕ್ತತೆ, ಸಾರ್ಥಕ್ಯ ಕುರಿತು ಡಾ|| ಹಾ. ಮಾ. ನಾಯಕರ 'ಶ್ರೀಮುಖ' ಲೇಖನ ಈ ಬಗೆಯ ಕಾರ್ಯಗಳ ಅವಶ್ಯಕತೆ ಬಗ್ಗೆ ಗಮನ ಸೆಳೆಯುವುದಲ್ಲದೆ ನಮ್ಮ ಸುತ್ತಲ ಪರಿಸರದ ಬಗ್ಗೆ ನಮ್ಮ ಉದಾಸೀನ ಮತ್ತು ಅಲ್ಪ ತಿಳಿವಳಿಕೆಯನ್ನು ಬೆಟ್ಟುಮಾಡಿ ತೋರಿಸುತ್ತದೆ ಹಾಗೂ ಈ ಬಗೆಯ ನಮ್ಮ ಉದಾಸೀನ ಧೋರಣೆ ಬಹು ಅನರ್ಥಕಾರಿ ಎಂದು ಎಚ್ಚರಿಸುತ್ತದೆ. ಎಲ್ಲ ಲೇಖನಗಳನ್ನು ಹೆಸರಿಸುತ್ತ ಡಾ|| ಜೀ. ಶಂ. ಪರಮಶಿವಯ್ಯನವರು ತಮ್ಮ ಅವಲೋಕನ ಲೇಖನದಲ್ಲಿ ಗ್ರಂಥದ ಪರಿಚಯವನ್ನು ವಿವರವಾಗಿ ಮಾಡಿಕೊಟ್ಟಿದ್ದಾರೆ.

ಒಟ್ಟಿನಲ್ಲಿ "ವನಶ್ರೀ" ಒಂದು ಉಪಯುಕ್ತ ತಾಲ್ಲೂಕು ಪರಿಚಯ ಗ್ರಂಥ ಎನ್ನಬಹುದು ಹಾಗೂ ಕರ್ನಾಟಕದ ಇತರ ತಾಲ್ಲೂಕು ಮಂದಿ ತಮ್ಮ ತಮ್ಮ ತಾಲ್ಲೂಕಿನ ಪರಿಚಯಾತ್ಮಕ ಗ್ರಂಥಗಳನ್ನು ಈ ಬಗೆಯಲ್ಲಿ ಹೊರತಂದರೆ ಅವು ಆಯಾ ತಾಲ್ಲೂಕುಗಳ ಉಪಯುಕ್ತ ದಾಖಲೆಗಳಾಗಿ ನಿಲ್ಲುವುವು. ಇದಕ್ಕೆ 'ವನಶ್ರೀ' ಒಂದು ಉದಾಹರಣೆ.

ಬಿ. ಶಾಮಸುಂದರ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಅ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ :: ಮೈಸೂರು-೪

Reg. No. KRNN. 29 / WPP 6

LICENSE No. 21
LICENSED TO POST WITHOUT PREPAYMEN

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಂಟ್ಸಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು

ತರಿಸಿ ಓದಿರಿ

Edited by R. Boraiah, Printed by H. G. Ramaswamy Iyen Manager at Karnataka State Adult Education Council Pr and Published by Karnataka State Adult Education Cou Mysore city (India)